ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 15 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 60 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಬಿಡದಿ ಟೌನ್‌ಶಿಪ್ ಸರ್ಕಾರದ ರಿಯಲ್ ಎಸ್ಟೇಟ್ ಯೋಜನೆ

ಮುಖ್ಯಮಂತ್ರಿಗಳೇ ಇದರ ದೊರೆ

ವಿರೋಧದ ನಡುವೆಯೂ ಯೋಜನೆ ಜಾರಿಗೆ ಮುಂದಾಗಿರುವ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ ವಾಗ್ದಾಳಿ

■ ರೈತರ ವಿರುದ್ಧ ರೌಡಿಸಂ ■ ನಾನು ಟೌನ್‌ಶಿಪ್ ಮಾಡಲು ಹೊರಟಾಗ ಇದೇ ಕಾಂಗ್ರೆಸ್‌ನವರು ಅಪಪ್ರಚಾರ ಮಾಡಿದ್ದರು ■ ಮೂರು ಎಕರೆ ಪಿತ್ರಾರ್ಜಿತ ಆಸ್ತಿಯಿಂದ ಸಾವಿರಾರು ಕೋಟಿ ಆಸ್ತಿ ಮಾಡಿದ್ದು ಹೇಗೆಂದು ಜನತೆಗೆ ತಿಳಿಸಿಕೊಡಿ; ಡಿಕೆಶಿ ಆಸ್ತಿ ಸಂಪಾದನೆ ಹಾದಿ ಪ್ರಶ್ನಿಸಿದ ಹೆಚ್‌ಡಿಕೆ

ಮಂಡ್ಯ, ಜೂ.14– ಬಿಡದಿ ಟೌನ್ ಶಿಪ್ ಸರ್ಕಾರದ ರಿಯಲ್ ಎಸ್ಟೇಟ್ ಯೋಜನೆ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಿಯಲ್ ಎಸ್ಟೇಟ್ ದೊರೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದ್ದಾರೆ.

ಮಂಡ್ಯದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನೇರವಾಗಿ ರಾಜ್ಯ ಕಾಂಗ್ರೆಸ್ ಸರ್ಕಾರವೇ ಜನರ ಭೂಮಿಯನ್ನು ಲೂಟಿ ಹೊಡೆಯಲು ಹೊರಟಿದೆ ಎಂದು ಕಿಡಿಕಾರಿದರು. ಮುಖ್ಯಮಂತ್ರಿಗಳೇ ರಿಯಲ್ ಎಸ್ಟೇಟ್ ಮಾಫಿಯಾ ದೊರೆಗಳ ಜೊತೆ ಕೈ ಜೋಡಿಸಿ ಈ ದಂಧೆ ನಡೆಸುತ್ತಿದ್ದಾರೆ. ಬಹುಪಾಲು ರೈತರು ಭೂಮಿ ಕೊಡಲು ಸಿದ್ಧರಿಲ್ಲ. ಆದರೂ ಪೊಲೀಸರು ಮತ್ತು ರೌಡಿಗಳನ್ನು ಬಿಟ್ಟು ರೈತರನ್ನು ಬೆದರಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದರು.

ಆಸ್ತಿ ಮಾಡುವುದನ್ನು ತಿಳಿಸಿ: 1999ರಲ್ಲಿ ಕೇವಲ ಮೂರು ಎಕರೆ ಭೂಮಿ ಹೊಂದಿದ್ದ ರಾಜ್ಯದ ಮುಖ್ಯಮಂತ್ರಿ ಆಸ್ತಿ 2018ರ ವೇಳೆಗೆ 1400 ಕೋಟಿ ಹೇಗಾಯಿತು? ಈ ಬಗ್ಗೆ ಅವರು ಇಡೀ ರಾಜ್ಯದ ಜನತೆಗೆ ತರಬೇತಿ ಮತ್ತು ಮಾರ್ಗದರ್ಶನ ನೀಡಲಿ. ಇದರ ಬಗ್ಗೆ ಅವರು ಹೇಳಬೇಕಲ್ಲವೇ?


ಮಾಧ್ಯಮಗಳೊಂದಿಗೆ ಮಾತನಾಡುತ್ತಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ

ಇಷ್ಟು ಪ್ರಮಾಣದಲ್ಲಿ ಆಸ್ತಿ ಹೇಗೆ ಸಂಪಾದನೆ ಮಾಡಬಹುದು? ಇಷ್ಟು ವೇಗವಾಗಿ ಹೇಗೆ ಶ್ರೀಮಂತರಾಗಬಹುದು ಎಂಬ ಬಗ್ಗೆ ರಾಜ್ಯದ ಜನತೆಗೆ ಹೇಳಲಿ. ಜನರಿಗೂ ಬಹಳ ಅನುಕೂಲ ಆಗುತ್ತದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಕುಟುಕಿದರು.

ಗುಜರಾತ್‌ಗೆ ಹೋಲಿಕೆ ಬೇಡ ಟೌನ್‌ಶಿಪ್ ಯೋಜನೆಯನ್ನು ಪ್ರಧಾನಿ ಮೋದಿ ಅವರು ಮೆಚ್ಚಿಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಹೇಳುತ್ತಿದ್ದಾರೆ. ■6ನೇ ಪುಟಕ್ಕೆ

ನಾನು ರೈತರಿಗೋಸ್ಕರ ಯೋಜನೆ ಕೈಬಿಟ್ಟಿದ್ದೆ ಎಂದು ಚಾಮುಂಡೇಶ್ವರಿ ಮುಂದೆ ಪ್ರಮಾಣ ಮಾಡಿ

ಕುಮಾರಸ್ವಾಮಿಗೆ ಮಾಗಡಿ ಶಾಸಕ ಬಾಲಕೃಷ್ಣ ಸವಾಲು

ಬೆಂಗಳೂರು: ಬಿಡದಿ ಟೌನ್‌ಶಿಪ್ ವಿಚಾರವಾಗಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಚಾಮುಂಡೇಶ್ವರಿ ದೇವಿಯ ಮೇಲೆ ಪ್ರಮಾಣ ಮಾಡಲಿ ಎಂದು ಮಾಗಡಿ ಶಾಸಕ ಹೆಚ್.ಸಿ. ಬಾಲಕೃಷ್ಣ ಸವಾಲು ಹಾಕಿದ್ದಾರೆ.



ಬಿಡದಿ ಟೌನ್‌ಶಿಪ್ ವಿರೋಧಿಸಿ ಪಾದಯಾತ್ರೆ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿದ ಅವರು, ನಾನು ರೈತರ ಪರವಾಗಿ 2018ರಲ್ಲಿ ಯೋಜನೆ ಕೈಬಿಡಲು ಒಪ್ಪಿದ್ದೆ ಎಂದು ಕುಮಾರಸ್ವಾಮಿ ಅವರು ಚಾಮುಂಡೇಶ್ವರಿ ದೇವಿಯ ಮೇಲೆ ಪ್ರಮಾಣ ಮಾಡಲಿ. ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾದ ಮೇಲೆ ಬಿಡದಿ ಯೋಜನೆಗೆ ವಿರೋಧ ಮಾಡುತ್ತಿದ್ದಾರೆ. ಸಮಸ್ಯೆ ಹುಟ್ಟು ಹಾಕಿದವರೇ ಹೋರಾಟ ಮಾಡುತ್ತಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ನೋಟಿಫಿಕೇಷನ್ ಯಾರು ಮಾಡಿದ್ದು ಎಂದು ಪದೇ ಪದೇ ಹೇಳಬೇಕಿಲ್ಲ. ಕುಮಾರಸ್ವಾಮಿಗೆ ರೈತರ ಬಗ್ಗೆ ಕಾಳಜಿ ಇದ್ದಿದ್ದರೆ, 2018ರಲ್ಲಿ ರೆಡ್ ಜೋನ್ ತೆಗೆಯಬಹುದಿತ್ತು. ಇದೇ ರೈತರು ಅಂದು ಹೋರಾಟ ಮಾಡಿ, ಯೋಜನೆ ಕೈಬಿಡುವಂತೆ ಮನವಿ ಮಾಡಿದರು. ಇದು ನನ್ನ ಕನಸಿನ ಕೂಸು ಅಂತ ಕುಮಾರಸ್ವಾಮಿ ಹೇಳಿದರು, ಸಮಯಕ್ಕೆ ತಕ್ಕಂತೆ ಮಾತನಾಡುವುದನ್ನು ಕುಮಾರಸ್ವಾಮಿ ಬಿಡಬೇಕು. ಪಾದಯಾತ್ರೆ, ಹೋರಾಟ ಮಾಡಬಹುದು, ಆದರೆ ಇದು ಯೋಜನೆ ಯಾರದ್ದು ಡಿಎಲ್‌ಎಫ್ ಕಡೆಯಿಂದ ದುಡ್ಡು ತೆಗೆದುಕೊಂಡು ■6ನೇ ಪುಟಕ್ಕೆ

ಗ್ಯಾರಂಟಿ ಯೋಜನೆ ಯಾವ ಕಾರಣಕ್ಕೂ ನಿಲ್ಲದು

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜನತೆಗೆ ಅಭಯ

ಸರ್ಕಾರದ ಹಣ ದುರುಪಯೋಗ ತಡೆಗೆ ಕ್ರಮವಷ್ಟೇ; ವದಂತಿಗಳಿಗೆ ಕಿವಿಗೊಡಬೇಡಿ: ಸಿಎಂ ಮನವಿ



ಬೆಂಗಳೂರು, ಜೂ.14– ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ, ಈ ಬಗ್ಗೆ ಸಾರ್ವಜನಿಕರು ವದಂತಿಗಳಿಗೆ ಕಿವಿಗೊಡಬೇಡಿ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ.

ಗೃಹಲಕ್ಷ್ಮೀ ಮತ್ತು ಗೃಹಜ್ಯೋತಿ ಖಾತರಿ ಯೋಜನೆಗಳನ್ನು ಸ್ಥಗಿತಗೊಳಿಸಲಾಗುತ್ತಿದೆ ಎಂಬ ವದಂತಿ ಸಂಬಂಧ ಭಾನುವಾರ ಮಾಧ್ಯಮ ಹೇಳಿಕೆ ನೀಡಿರುವ ಅವರು, ಕಾಂಗ್ರೆಸ್ ಸರಕಾರದ ಹೆಮ್ಮೆಯ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮೀ ಮತ್ತು ಗೃಹಜ್ಯೋತಿ ಯೋಜನೆಗಳನ್ನು ಯಾವುದೇ ಕಾರಣಕ್ಕೂ ನಿಲ್ಲಿಸುವುದಿಲ್ಲ. ಈ ಬಗ್ಗೆ ವಿರೋಧ ಪಕ್ಷಗಳು ಹಬ್ಬಿಸುತ್ತಿರುವ ಸುಳ್ಳು ಸುದ್ದಿಗಳಿಗೆ ಯಾರೂ ಕಿವಿಗೊಡಬಾರದು. ಯಾವುದೇ ಸಂದರ್ಭದಲ್ಲೂ ಈ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.



ಗೃಹಲಕ್ಷ್ಮೀ ಯೋಜನೆಯಡಿ ಕುಟುಂಬದ ಯಜಮಾನಿಗೆ ಮಾಸಿಕ 2 ಸಾವಿರ ರೂ. ನೀಡುವುದರಿಂದ ಸಾಕಷ್ಟು ಅನುಕೂಲವಾಗಿದೆ. ಆದರೆ ಕೆಲವರು ಮೃತಪಟ್ಟವರ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿಕೊಂಡು ಯೋಜನೆಯನ್ನು ದುರುಪಯೋಗ ಪಡಿಸಿಕೊಂಡಿರುವ ಮಾಹಿತಿ ಬಂದಿದೆ. ಆದ್ದರಿಂದ ಗ್ಯಾರಂಟಿ ಯೋಜನೆ ಫಲಾನುಭವಿಗಳ ದೃಢೀಕರಣಕ್ಕಾಗಿ, ಹೆಸರು, ವಿಳಾಸ, ಬ್ಯಾಂಕ್ ಖಾತೆ ವಿವರವನ್ನು ಖಚಿತಪಡಿಸಿಕೊಳ್ಳಲು ಮತ್ತೇ ಅರ್ಜಿ ಸಲ್ಲಿಸಲು ಹೇಳಲಾಗಿದೆಯೇ ಹೊರತು ಯೋಜನೆಗಳನ್ನು ನಿಲ್ಲಿಸಲು ಅಲ್ಲ. ಎಲ್ಲಾ ಗ್ಯಾರಂಟಿ ಯೋಜನೆಗಳು ಶೇಕಡಾ ನೂರಕ್ಕೆ ನೂರರಷ್ಟು ಮುಂದುವರಿಯುತ್ತವೆ. ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ■6ನೇ ಪುಟಕ್ಕೆ

ಬೇಕಾಬಿಟ್ಟಿ ಗ್ಯಾರಂಟಿಯಿಂದ ಆರ್ಥಿಕತೆಗೆ ಭಾರೀ ಹೊಡೆತ

ಚಿಕ್ಕಬಳ್ಳಾಪುರ: ಬೇಕಾಬಿಟ್ಟಿ ಗ್ಯಾರಂಟಿಗಳನ್ನು ಕೊಡುವುದರಿಂದ ಆರ್ಥಿಕತೆ ಮೇಲೆ ಪರಿಣಾಮ ಬೀರುತ್ತದೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.

ದೇವನಹಳ್ಳಿಗೆ ಆಗಮಿಸಿದ್ದ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರಗಳು ಗ್ಯಾರಂಟಿ ಯೋಜನೆಗಳನ್ನು ಕೊಡುತ್ತಿವೆ. ಆದರೆ, ಯೋಜನೆಗಳನ್ನು ಸಮರ್ಪಕವಾಗಿ ನೀಡಲು ಸಾಧ್ಯವಾಗದಿದ್ದರೆ ಸದನದಲ್ಲಿ ಚರ್ಚೆ ಮಾಡಿ, ಅದಕ್ಕಾಗಿಯೇ ಬಜೆಟ್‌ನಲ್ಲಿ ನಿಧಿ ಸಂಗ್ರಹದ ಬಗ್ಗೆ ಯೋಜನೆ ಮಾಡಬೇಕು. ಅದನ್ನು ಬಿಟ್ಟು ಬೇಕಾಬಿಟ್ಟಿ ಗ್ಯಾರಂಟಿ ಕೊಡುವುದರಿಂದ ಆರ್ಥಿಕತೆ ಮೇಲೆ ಭಾರೀ ಪರಿಣಾಮ ಬೀರುತ್ತದೆ ಎಂದರು.



ಅನುದಾನದ ವಿಚಾರದಲ್ಲಿ ತಾರತಮ್ಯ ವಿಚಾರಕ್ಕೆ ಪ್ರತಿಕ್ರಿಯಿಸಿ, ಹೆಚ್ಚು ತೆರಿಗೆ ಪಾಲು ಕೊಡುತ್ತಿರುವ ಮಾತ್ರಕ್ಕೆ ರಾಜ್ಯಕ್ಕೆ ಹೆಚ್ಚು ಅನುದಾನ ನೀಡುತ್ತಿಲ್ಲ ಎನ್ನುವುದು ಸರಿಯಲ್ಲ. ಕಲಬುರಗಿ, ಯಾದಗಿರಿ ಅಂತಹ ಪ್ರದೇಶಗಳಿಂದಲೂ ತೆರಿಗೆ ಸಂಗ್ರಹ ಆಗುತ್ತದೆ. ಆದರೆ ಬೆಂಗಳೂರಿಗೆ ಅನುದಾನ ಹೆಚ್ಚು ಕೊಡೋದು ಏಕೆ ಎಂದು ಪ್ರಶ್ನೆ ಮಾಡಿದರು.

ಅತಿ ಹೆಚ್ಚು ಹೂವು ಹಣ್ಣು ಬೆಳೆಯಲಾಗುವ ಚಿಕ್ಕಬಳ್ಳಾಪುರದಲ್ಲಿ ಕೋಲ್ಡ್ ಸ್ಟೋರೇಜ್ ಕೊರತೆ ಬಗ್ಗೆ ಪ್ರತಿಕ್ರಿಯಿಸಿ, ಬಜೆಟ್‌ನಲ್ಲಿ ಹಣ ಇದೆ, ಆದರೆ ಈ ಬಗ್ಗೆ ರಾಜ್ಯ ಸರ್ಕಾರದಿಂದ ಬೇಡಿಕೆಯೇ ಬಂದಿಲ್ಲ ಎಂದರು.

ಹೇಮಾವತಿ ಹಿನ್ನೀರಿನಲ್ಲಿ ಮುಳುಗಿ ಬೆಂಗಳೂರು ಮೂಲದ ಮೂವರು ಯುವಕರ ದುರ್ಮರಣ

ಧರ್ಮಸ್ಥಳ ಪ್ರವಾಸ ಮುಗಿಸಿ ವಾಪಸ್ಸಾಗುವ ಮಾರ್ಗಮಧ್ಯೆ ಗೊರೂರು ಸಮೀಪದ ಶೆಟ್ಟಿಹಳ್ಳಿ ಚರ್ಚ್ ವೀಕ್ಷಣೆಗೆ ತೆರಳಿದ್ದಾಗ ದುರಂತ

ಹಾಸನ, ಜೂ.14– ಹೇಮಾವತಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಿ ಬೆಂಗಳೂರು ಮೂಲದ ಮೂವರು ಯುವಕರು ಸಾವನ್ನಪ್ಪಿದ ಘಟನೆ ಭಾನುವಾರ ಮಧ್ಯಾಹ್ನ ಸಂಭವಿಸಿದೆ.



ಬೆಂಗಳೂರಿನ ಚರಣ್(20), ಮಿಲನ್(23) ಮತ್ತು ಮಣಿಕಂಠ(20) ಮೃತ ದುರ್ದೈವಿ ಯುವಕರು. ಪ್ರವಾಸಿ ತಾಣವಾದ ಶೆಟ್ಟಿಹಳ್ಳಿ ಚರ್ಚ್ ವೀಕ್ಷಿಸಲು ತೆರಳಿದ್ದ ವೇಳೆ ಈ ದುರಂತ ಸಂಭವಿಸಿದೆ.

ಹತ್ತು ಜನ ಯುವಕರ ತಂಡ ಧರ್ಮಸ್ಥಳ ಪ್ರವಾಸ ಮುಗಿಸಿ ಬೆಂಗಳೂರಿಗೆ ವಾಪಸ್ಸಾಗುವ ಮಾರ್ಗಮಧ್ಯೆ ಹಾಸನ ತಾಲೂಕಿನ ಗೊರೂರು ಬಳಿಯಿರುವ ಪ್ರಸಿದ್ಧ ಶೆಟ್ಟಿಹಳ್ಳಿ ಚರ್ಚ್ ವೀಕ್ಷಿಸಲು ಮಧ್ಯಾಹ್ನ ಸುಮಾರು 3 ಗಂಟೆ ಸಮಯದಲ್ಲಿ ಬಂದಿದ್ದರು. ಚರ್ಚ್ ಬಳಿ ಹಿನ್ನೀರು ಕಂಡು ಖುಷಿಯಾದ ಯುವಕರು, ನೀರಿನಲ್ಲಿ ಈಜಲು ಮುಂದಾಗಿದ್ದಾರೆ. ಎಲ್ಲರೂ ದಡದ ಹತ್ತಿರವೇ ಇದ್ದರೆ ಚರಣ್, ಮಿಲನ್ ಹಾಗೂ ಮಣಿಕಂಠ ಮಾತ್ರ ಸ್ವಲ್ಪ ದೂರಕ್ಕೆ ಹೋಗಿದ್ದಾರೆ. ಈಜು ಬಾರದ ಕಾರಣ ಮೂವರೂ ಸ್ನೇಹಿತರೆದುರೇ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಸ್ನೇಹಿತರು ನೀರಿನಲ್ಲಿ ಮುಳುಗುವುದನ್ನು ಕಂಡ ಸ್ನೇಹಿತರು ದಡಕ್ಕೆ ಬಂದು ರಕ್ಷಣೆಗೆ ಜೋರಾಗಿ ಕಿರುಚಿಕೊಂಡರೂ ಆ ವೇಳೆ ಈಜು ಬರುವ ಯಾರೊಬ್ಬರೂ ಅಲ್ಲಿರದ ಕಾರಣ ಮೂವರೂ ಸಾವನ್ನಪಿದ್ದಾಗಿ ತಿಳಿದುಬಂದಿದೆ. ಕಣ್ಣೆದುರೇ ಮೂವರನ್ನು ಕಳೆದುಕೊಂಡ ಸ್ನೇಹಿತರ ಆಕ್ರಂದನ ಮುಗಿಲು ಮುಟ್ಟಿತ್ತು. ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ಆರಂಭಿಸಿದರು. ಸದ್ಯ ಚರಣ್ ಹಾಗೂ ಮಣಿಕಂಠನ ಮೃತದೇಹ ಪತ್ತೆಯಾಗಿದ್ದು, ಮಿಲನ್ ಶವಕ್ಕೆ ಹುಡುಕಾಟ ಮುಂದುವರೆಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಈ ಸಂಬಂಧ ಗೊರೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೈಲಿಗೆ ಬೆಂಕಿ ವದಂತಿ; ಕೆಳಗೆ ಹಾರಿದ ಪ್ರಯಾಣಿಕರು

ಮತ್ತೊಂದು ರೈಲು ಹರಿದು 8 ಮಂದಿ ಬಲಿ

ಮಧ್ಯಪ್ರದೇಶ: ರೈಲಿಗೆ ಬೆಂಕಿ ಹೊತ್ತಿಕೊಂಡಿದೆ ಎಂಬ ಕಿಡಿಗೇಡಿಗಳ ವದಂತಿಯಿಂದಾಗಿ ಘೋರ ದುರಂತ ಸಂಭವಿಸಿ, 8 ಪ್ರಯಾಣಿಕರು ಬಲಿಯಾಗಿರುವ ದುರ್ಘಟನೆ ಮಧ್ಯಪ್ರದೇಶದಲ್ಲಿ ಭಾನುವಾರ ನಡೆದಿದೆ.


ಬೆಂಕಿಗೆ ಆಹುತಿಯಾಗುತ್ತೇವೆಂಬ ಆತಂಕದಿಂದ ರೈಲಿನಿಂದ ಜಿಗಿದಿದ್ದರಿಂದ ಬೇರೊಂದು ರೈಲಿಗೆ ಸಿಲುಕಿ ಧಾರುಣವಾಗಿ ಸಾವನ್ನಪ್ಪಿದ್ದು, ಈ ಘಟನೆ ದೇಶವನ್ನೇ ಬೆಚ್ಚಿಬೀಳಿಸಿದೆ.

ಇಂದು ಸಂಜೆ 4 ಗಂಟೆಯ ಸುಮಾರಿಗೆ ಉದಯಪುರ ಇಂಟರ್‌ಸಿಟಿ ಎಕ್ಸ್‌ಪ್ರೆಸ್ ರೈಲು ಮೊರೆನಾದಿಂದ ಧೋಲ್‌ಪುರ ಕಡೆಗೆ ಪ್ರಯಾಣಿಸುತ್ತಿತ್ತು. ಈ ವೇಳೆ, ರೈಲು ಹೇತಂಪುರ ನಿಲ್ದಾಣವನ್ನು ಸಮೀಪಿಸುತ್ತಿದ್ದಂತೆ, ರೈಲಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ ಎಂಬ ಸುದ್ದಿ ಹಬ್ಬಿತು. ಇದು ಕ್ಷಣಾರ್ಧದಲ್ಲಿ ■6ನೇ ಪುಟಕ್ಕೆ

ವಾಹನಗಳಿಗೆ ಸಂಪೂರ್ಣ ಎಥೆನಾಲ್ ಬಳಕೆಗೆ ಕಾನೂನು ಮಾನ್ಯತೆ

ಆಮದು ಇಂಧನದ ಅವಲಂಬನೆ ಕಡಿತ ಮಾಡಲು ಮಹತ್ವದ ಹೆಜ್ಜೆ: ಕೇಂದ್ರ ಸಚಿವ ಗಡ್ಕರಿ ಮಾಹಿತಿ

ನವದೆಹಲಿ: ಭಾರತವು ಶೇ.100ರಷ್ಟು ಎಥೆನಾಲ್ ಇಂಧನ ಬಳಕೆಗೆ ಕಾನೂನು ಮಾನ್ಯತೆ ನೀಡಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಘೋಷಿಸಿದ್ದಾರೆ.



ನರೇಂದ್ರ ಮೋದಿ ಪ್ರಧಾನಿಯಾಗಿ 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ನಾಗ್ಪುರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ಆಮದು ಮಾಡಿಕೊಳ್ಳುವ ಪಳೆಯುಳಿಕೆ ಇಂಧನ ಮತ್ತು ಶುದ್ಧ ಇಂಧನದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಇದೊಂದು ಪ್ರಮುಖ ಹೆಜ್ಜೆಯಾಗಿದ್ದು, ಈಗ ಸಂಪೂರ್ಣ ಎಥೆನಾಲ್ ಬಳಸಿಕೊಂಡು ವಾಹನಗಳನ್ನು ಓಡಿಸಲು ಅನುಮತಿಸಲಾಗುತ್ತದೆ ಎಂದು ತಿಳಿಸಿದರು.

ಈ ಅನುಮೋದನೆಯು ಎಥೆನಾಲ್ ಅನ್ನು ಪೆಟ್ರೋಲ್‌ಗೆ ಕಾರ್ಯಸಾಧ್ಯವಾದ ಪರ್ಯಾಯ ಇಂಧನವಾಗಿ ಹೊರಹೊಮ್ಮಲು ಅನುವು ಮಾಡಿಕೊಡುತ್ತದೆ. ಭಾರತದ ವಾರ್ಷಿಕ ಪಳೆಯುಳಿಕೆ ಇಂಧನ ಆಮದುಗಳಿಂದಾಗುತ್ತಿರುವ 22 ಲಕ್ಷ ಕೋಟಿ ಹೊರೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಈ ಸಂಬಂಧಿತ ಆದೇಶದ ಕಡತಕ್ಕೆ ಶುಕ್ರವಾರ ರಾತ್ರಿ ಸಹಿ ಹಾಕಲಾಗಿದೆ. ಶೇ.100ರಷ್ಟು ಎಥೆನಾಲ್ ಬಳಕೆಗೆ ಅನುವು ಮಾಡಿಕೊಡಲು ನಿಯಂತ್ರಕ ಚೌಕಟ್ಟನ್ನು ಅಂತಿಮಗೊಳಿಸಲಾಗುತ್ತಿದೆ. ವಾಹನಗಳಿಗೆ ಶೇ.100ರಷ್ಟು ಎಥೆನಾಲ್ ಬಳಕೆಗೆ ನಿಯಮ ರೂಪಿಸುವ ಕಡತಕ್ಕೆ ಕಳೆದ ರಾತ್ರಿ ನಾನು ಸಹಿ ಹಾಕಿ, ಕಾನೂನು ಪ್ರಕ್ರಿಯೆಗೆ ಕಳುಹಿಸಿದ್ದೇನೆ ಎಂದು ಹೇಳಿದರು. ■6ನೇ ಪುಟಕ್ಕೆ

ಮಳೆಯ ಕೊರತೆ: ಕೆಆರ್‌ಎಸ್‌ನಲ್ಲಿ ನೀರಿನ ಮಟ್ಟ ತೀವ್ರ ಕುಸಿತ

ಕಳೆದ ವರ್ಷ ಇದೇ ವೇಳೆ 108 ಅಡಿ ನೀರಿತ್ತು, ಆದರೆ ಈಗ ಕೇವಲ 81 ಅಡಿ

● ಕಬಿನಿ ಜಲಾಶಯದಲ್ಲಿ ಕಳೆದ ವರ್ಷ ಇದೇ ವೇಳೆ 2,276 ಅಡಿ ನೀರಿತ್ತು, ಆದರೆ ಈಗಿರುವುದು ಕೇವಲ 2,252 ಅಡಿ ● ಕೊಡಗು, ಕೇರಳದ ವಯನಾಡಿನಲ್ಲಿ ಮುಂಗಾರು ಮಳೆ ದುರ್ಬಲ ● ಆಕಾಶ ದಿಟ್ಟಿಸಿ ಮಳೆಗಾಗಿ ಕಾಯುತ್ತಿರುವ ರೈತರು ● ಮಳೆ ಕ್ಷೀಣತೆಗೆ ಎಲ್ ನಿನೊ ಕಾರಣ ● ಪರಿಸ್ಥಿತಿ ಹೀಗೆ ಮುಂದುವರೆದರೆ ಕುಡಿಯುವ ನೀರಿಗೂ ಅಭಾವ ಸಾಧ್ಯತೆ

ಮೈಸೂರು, ಜೂ.14(ಬಿಎಲ್‌ಯು)– ಎಲ್ ನಿನೊ ಪರಿಣಾಮ ಮುಂಗಾರು ದುರ್ಬಲಗೊಂಡಿದ್ದು, ಮೈಸೂರು ಜಿಲ್ಲೆ, ಕೊಡಗು ಜಿಲ್ಲೆ ಹಾಗೂ ಕೇರಳದ ವೈನಾಡು ಪ್ರದೇಶದಲ್ಲಿ ವಾಡಿಕೆಯಂತೆ ಮಳೆಯಾಗಿಲ್ಲ. ಇದರಿಂದ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದ ನೀರಿನ ಮಟ್ಟ ದಿನಕಳೆದಂತೆ ಇಳಿಕೆಯಾಗುತ್ತಿದೆ. ಜಲಾಶಯ ಬರಿದಾಗುತ್ತಿರುವ ಸನ್ನಿವೇಶ ಸಹಜವಾಗಿಯೆ ರೈತಾಪಿ ಜನರನ್ನು ಆತಂಕಗೊಳಿಸಿದೆ.

ಕಳೆದ ವರ್ಷ ಇದೇ ದಿನದಂದು ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 108 ಅಡಿ ಇದ್ದರೆ, ಈ ದಿನ ಕೇವಲ 81 ಅಡಿ ನೀರಿದೆ. ವರುಣನ ಅವಕೃಪೆ ರೈತರು ಮಾತ್ರವಲ್ಲದೆ ಕುಡಿಯುವ ನೀರಿಗಾಗಿ ಎರಡು ಜಲಾಶಯಗಳನ್ನು ಅವಲಂಬಿಸಿರುವ ಮೈಸೂರು, ಮಂಡ್ಯ ಹಾಗೂ ಬೆಂಗಳೂರು ನಗರದ ಜನರನ್ನು ಚಿಂತಾಕ್ರಾಂತರನ್ನಾಗಿಸಿದೆ. ಜೂನ್ ತಿಂಗಳು ಬಂತೆಂದರೆ ಸಾಕು ವರುಣ ಆರ್ಭಟಿಸುತ್ತಿದ್ದ. ಕೆರೆ–ಕಟ್ಟೆ, ಅಣೆಕಟ್ಟು ಭರ್ತಿ ಆಗುವ ಹಂತ ತಲುಪುತ್ತಿತ್ತು. ರೈತಾಪಿ ವರ್ಗದವರು ಕೃಷಿ ಚಟುವಟಿಕೆಯಲ್ಲಿ ಬಿಡುವಿಲ್ಲದೆ ತೊಡಗುತ್ತಿದ್ದರು. ದಟ್ಟ ಮೋಡ ಆವರಿಸಿ ಪ್ರತಿದಿನ ಮಳೆಯಾಗುತ್ತಿದ್ದ ಕಾರಣ ವಾತಾವರಣ ಕೂಡ ತಂಪಾಗಿರುತ್ತಿತ್ತು. ಆದರೆ ಈ ಬಾರಿ ನಿರೀಕ್ಷೆಯಂತೆ ಮುಂಗಾರು ಮಳೆ ಬೀಳುತ್ತಿಲ್ಲ. ಜೂನ್ 5ರಂದೆ ಮುಂಗಾರು ಮಾರುತ ಕೇರಳ ಮೂಲಕ ಕರ್ನಾಟಕವನ್ನು ಪ್ರವೇಶಿಸಿದ್ದರೂ ಹಳೆ ಮೈಸೂರು ಭಾಗದಲ್ಲಿ ಮಳೆಯ ಲಕ್ಷಣಗಳು ಗೋಚರವಾಗುತ್ತಿಲ್ಲ. ಕೆಲವು ಭಾಗಗಳಲ್ಲಿ ಅಲ್ಲಲ್ಲಿ ಮಳೆಯಾಗಿರುವುದನ್ನು ಬಿಟ್ಟರೆ ಒಟ್ಟಾರೆ ಎಲ್ಲಾ ಸ್ಥಳಗಳಲ್ಲೂ ನಿರೀಕ್ಷೆಯಂತೆ ಮಳೆಯಾಗಿಲ್ಲ. ಇದರಿಂದ ಈಗಾಗಲೇ ಕೃಷಿ ಚಟುವಟಿಕೆಯಲ್ಲಿ ಬಿರುಸಿನಿಂದ ನಿರತನಾಗಬೇಕಿದ್ದ ರೈತ ಈಗ ಮಳೆಗಾಗಿ ಆಕಾಶವನ್ನು ದಿಟ್ಟಿಸಿ ನೋಡುತ್ತಾ ಯಾವಾಗ ಮಳೆಯಾಗುತ್ತದೆಯೊ ಎಂದು ಕಾಯುತ್ತಾ ಕೂತಿದ್ದಾನೆ. ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ ನಾಲ್ಕು ಹನಿಯ ಚೆಲ್ಲಿ ಎಂಬ ಪದ ಆಡುತ್ತಿದ್ದರೂ ವರುಣ ದೇವ ಮಾತ್ರ ಕೃಪೆ ತೋರುತ್ತಿಲ್ಲ. ಇದರಿಂದ ಸಹಜವಾಗಿಯೇ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ದಿನ ಕಳೆದಂತೆ ಇಳಿಕೆಯಾಗುತ್ತಿದೆ. ಕಳೆದ ವರ್ಷ ಇದೇ ದಿನದಂದು ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ 108.92 ಅಡಿ ಇತ್ತು. 2,770 ಕ್ಯುಸೆಕ್ಸ್ ನೀರು ಜಲಾಶಯಕ್ಕೆ ಹರಿದು ಬರುತ್ತಿತ್ತು. ಹಾಗೆಯೇ ಜಲಾಶಯದಿಂದ 897 ಕ್ಯುಸೆಕ್ಸ್ ನೀರನ್ನು ಹೊರಗೆ ಬಿಡಲಾಗುತ್ತಿತ್ತು. ಆದರೆ ಈ ಬಾರಿಯ ಚಿತ್ರಣವೆ ಬದಲಾಗಿದೆ. 124.80 ಅಡಿ ಎತ್ತರದ ಕೆಆರ್‌ಎಸ್ ಜಲಾಶಯದ ಇಂದಿನ ■6ನೇ ಪುಟಕ್ಕೆ


ಬರಿದಾಗುತ್ತಿರುವ ಕೆಆರ್‌ಎಸ್ ಡ್ಯಾಂ

ಮೆಟ್ಟೂರು ಜಲಾಶಯದ ಗರಿಷ್ಠ 120 ಅಡಿ; ಈಗಿನ ನೀರಿನ ಮಟ್ಟ 79 ಅಡಿ

ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಿಂದ ಹೊರ ಹೋಗುವ ನೀರು ತಮಿಳುನಾಡಿನ ಮೆಟ್ಟೂರು ಅಣೆಕಟ್ಟು ತಲುಪುತ್ತದೆ. ಆದರೆ ಮಳೆ ಇಲ್ಲದೆ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದ ನೀರಿನ ಮಟ್ಟ ಇಳಿಮುಖವಾಗಿರುವ ಹಿನ್ನೆಲೆಯಲ್ಲಿ ಮೆಟ್ಟೂರು ಜಲಾಶಯದ ನೀರಿನ ಮಟ್ಟ ಕೂಡ ಕಡಿಮೆಯಾಗಿದೆ. ಮೆಟ್ಟೂರು ಜಲಾಶಯದ ಗರಿಷ್ಠ ನೀರಿನ ಮಟ್ಟ 120 ಅಡಿಗಳಾಗಿದೆ. ಆದರೆ ಇಂದು ಜಲಾಶಯದಲ್ಲಿ ಕೇವಲ 79.56 ಅಡಿ ನೀರಿದೆ. ತಮಿಳುನಾಡಿನ ತಿರುಚಿರಾಪಳ್ಳಿ, ತಂಜಾವೂರು, ತಿರುವರೂರ್, ನಾಗಪಟ್ಟಣಂ, ಮೈಲಾಡತುರೈ ಹಾಗೂ ಕಡಲೂರು ಜಿಲ್ಲೆಗಳು ಕಾವೇರಿ ಅಚ್ಚುಕಟ್ಟಿನ ವ್ಯಾಪ್ತಿಯಲ್ಲಿವೆ. ಸುಮಾರು 44,000 ಚದರ ಕಿಲೋ ಮೀಟರ್‌ನಲ್ಲಿ ಕಾವೇರಿ ಅಚ್ಚುಕಟ್ಟು ಆವರಿಸಿದ್ದು, ಸಮೃದ್ಧ ಬೆಳೆ ಬೆಳೆಯುತ್ತಾರೆ. ಆದರೆ ಕೊಡಗು ಹಾಗೂ ವಯನಾಡಿನಲ್ಲಿ ಮಳೆಯಾಗದ ಹಿನ್ನೆಲೆಯಲ್ಲಿ ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯದಂತೆ ಮೆಟ್ಟೂರು ಅಣೆಕಟ್ಟಿನಲ್ಲಿ ಕೂಡ ನೀರಿಲ್ಲದಂತಾಗಿದೆ. ಇದರಿಂದ ಈ ಭಾಗದ ರೈತರು ಕೂಡ ಚಿಂತಾಕ್ರಾಂತರಾಗಿದ್ದಾರೆ.

ಕೊಡಗಿನಲ್ಲಿ 795 ಮಿ.ಮೀ. ಬದಲು ಈಗ ಕೇವಲ 249 ಮಿ.ಮೀ. ಮಳೆ

ಕೊಡಗು ಜಿಲ್ಲೆಯಲ್ಲಿ ಕಳೆದ 24 ಗಂಟೆ ಅವಧಿಯಲ್ಲಿ ಸರಾಸರಿ ಕೇವಲ 3.49 ಮಿಲಿಮೀಟರ್ ಮಳೆಯಾಗಿದೆ. ಕಳೆದ ವರ್ಷ ಇದೇ ದಿನದಂದು 7.49 ಮಿಲಿಮೀಟರ್ ಮಳೆಯಾಗಿತ್ತು. ಜನವರಿ ತಿಂಗಳಿನಿಂದ ಇಲ್ಲಿವರೆಗೆ 249.04 ಮಿಲಿಮೀಟರ್ ಮಳೆಯಾಗಿದೆ. ಆದರೆ ಕಳೆದ ವರ್ಷ ಇದೇ ಅವಧಿಯಲ್ಲಿ 795.85 ಮಿಲಿಮೀಟರ್ ಮಳೆಯಾಗಿತ್ತು. ಇದು ಕೊಡಗು ಜಿಲ್ಲೆಯ ಮಳೆಯ ಪ್ರಮಾಣ ಕ್ಷೀಣವಾಗಿರುವುದನ್ನು ಬಿಂಬಿಸಿದೆ. ಕೊಡಗು ಜಿಲ್ಲೆಯಲ್ಲಿ ವಾಡಿಕೆಯಷ್ಟು ಮಳೆಯಾಗದಿದ್ದರೆ ಈ ವರ್ಷ ಕೆಆರ್‌ಎಸ್ ಜಲಾಶಯ ಭರ್ತಿಯಾಗುವುದು ಅನುಮಾನ.

ಮಹಿಳಾ ಸೈಕ್ಲಿಂಗ್ ಲೀಗ್ ಯಶಸ್ವಿ

50ಕ್ಕೂ ಹೆಚ್ಚು ಬಾಲಕಿಯರು ಉತ್ಸಾಹದಿಂದ ಭಾಗಿ



ಅಸ್ಮಿತಾ ಖೇಲೋ ಇಂಡಿಯಾ ಮಹಿಳಾ ಸಿಟಿ ಲೀಗ್ 2026ರ ಮೈಸೂರು ಲೀಗ್ ಮೈಸೂರಿನ ಲಲಿತಾದ್ರಿಪುರದಲ್ಲಿ ಯಶಸ್ವಿಯಾಗಿ ಜರುಗಿತು.

ಮೈಸೂರು,ಜೂ.14(ಜಿಎ)–ಮೈಸೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಅಸೋಸಿಯೇಷನ್ ವತಿಯಿಂದ ಅಸ್ಮಿತಾ ಖೇಲೋ ಇಂಡಿಯಾ ಮಹಿಳಾ ಸಿಟಿ ಲೀಗ್ 2026ರ ಮೈಸೂರು ಲೀಗ್ ಮೈಸೂರಿನ ಲಲಿತಾದ್ರಿಪುರದಲ್ಲಿ ಯಶಸ್ವಿಯಾಗಿ ಜರುಗಿತು.

ಭಾರತ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಖೇಲೋ ಇಂಡಿಯಾ ಯೋಜನೆಯಡಿ ಕ್ರೀಡಾ ಪ್ರಾಧಿಕಾರ, ಸೈಕ್ಲಿಂಗ್ ಫೆಡರೇಷನ್ ಆಫ್ ಇಂಡಿಯಾ ಹಾಗೂ ಕರ್ನಾಟಕ ರಾಜ್ಯ ಸೈಕ್ಲಿಂಗ್ ಅಸೋಸಿಯೇಷನ್ ಸಹಯೋಗದಲ್ಲಿ ಈ ಸ್ಪರ್ಧೆ ನಡೆಯಿತು.

ಮಹಿಳೆಯರ ಕ್ರೀಡಾ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು ಹಾಗೂ ತಳಮಟ್ಟದಲ್ಲಿ ಸೈಕ್ಲಿಂಗ್ ಕ್ರೀಡೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಸ್ಪರ್ಧೆಯಲ್ಲಿ ವಿವಿಧ ವಿಭಾಗಗಳಲ್ಲಿ 50ಕ್ಕೂ ಹೆಚ್ಚು ಬಾಲಕಿಯರು ಉತ್ಸಾಹದಿಂದ ಭಾಗವಹಿಸಿ ತಮ್ಮ ಪ್ರತಿಭೆ ಮತ್ತು ಸೈಕ್ಲಿಂಗ್ ಕೌಶಲ್ಯವನ್ನು ಪ್ರದರ್ಶಿಸಿದರು.

ಕಾರ್ಯಕ್ರಮಕ್ಕೆ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಉಪನಿರ್ದೇಶಕಿ ಯಶಸ್ವಿನಿ ಚಾಲನೆ ನೀಡಿ, ಮಾತನಾಡಿ, ಮಹಿಳೆಯರು ಕ್ರೀಡಾ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವ ಅಗತ್ಯ ಯುವತಿಯರು ತಮ್ಮ ಸರ್ವತೋಮುಖ ಅಭಿವೃದ್ಧಿ ಹಾಗೂ ಸಬಲೀಕರಣಕ್ಕಾಗಿ ಕ್ರೀಡೆಯಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಶಾಲೆಯ ಪ್ರಾಂಶುಪಾಲೆ ದೀಪ್ತಿ, ಮೈಸೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಅಸೋಸಿಯೇಷನ್‌ನ ಗೌರವಾಧ್ಯಕ್ಷ ರಮೇಶ್ ನರಸಯ್ಯ, ಸಂಘದ ಪದಾಧಿಕಾರಿಗಳು, ಸದಸ್ಯರು, ಪೋಷಕರು, ಸೈಕ್ಲಿಂಗ್ ಅಭಿಮಾನಿಗಳು ಉಪಸ್ಥಿತರಿದ್ದರು.

ಕಳ್ಳರೆಂದು ತಪ್ಪಾಗಿ ಭಾವಿಸಿ ಬೈಕ್ ಸವಾರರ ಬೆನ್ನಟ್ಟಿದ ಪೊಲೀಸರು

ಪೊಲೀಸರ ನೋಡಿ ಭಯಭೀತರಾಗಿ ಬೈಕ್ ಚಾಲನೆ ಮಾಡಿ ಬಿದ್ದು ಗಾಯಗೊಂಡ ವಿದ್ಯಾರ್ಥಿಗಳು

ಮೈಸೂರು, ಜೂ.14(ಬಿಎಲ್‌ಯು)–ಕಳ್ಳರೆಂದು ತಿಳಿದು ಪೊಲೀಸ್ ಇಲಾಖೆ '112' ವಾಹನ ಬೆನ್ನಟ್ಟಿದಾಗ ಆಕಸ್ಮಿಕವಾಗಿ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ವಿದ್ಯಾರ್ಥಿಗಳಿಬ್ಬರಿಗೆ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ಮೈಸೂರಿನ ಕುವೆಂಪುನಗರದಲ್ಲಿ ಸಂಭವಿಸಿದೆ.

ಕುವೆಂಪುನಗರದ ವಾಸಿಯೊಬ್ಬರು ಮುಂಜಾನೆ 2.45 ಗಂಟೆಯಲ್ಲಿ ದೂರವಾಣಿ ಕರೆ ಮಾಡಿ, ಯಾರೂ ಅಪರಿಚಿತರು ನಮ್ಮ ಮನೆ ಬಾಗಿಲು ತಟ್ಟುತ್ತಿದ್ದು, ಅವರು ಕಳ್ಳರೇ ಇರಬಹುದು ಎಂದು ದೂರು ನೀಡಿದ್ದಾರೆ.

ಈ ವಿಚಾರವನ್ನು ಕಂಟ್ರೋಲ್ ರೂಂ ಮೂಲಕ ಕುವೆಂಪುನಗರ ವ್ಯಾಪ್ತಿಯ 112 ವಾಹನದ ಸಿಬ್ಬಂದಿಗೆ ತಿಳಿಸಿ ಸ್ಥಳಕ್ಕೆ ಹೋಗುವಂತೆ ಸೂಚಿಸಲಾಗಿದೆ.

ಪೊಲೀಸ್ ಸಿಬ್ಬಂದಿ ಆ ಮನೆಯ ರಸ್ತೆ ಬಳಿ ಹೋಗುವಾಗ ಇಬ್ಬರು ವೇಗವಾಗಿ ಬೈಕ್‌ನಲ್ಲಿ ಹೋಗುತ್ತಿದ್ದರು. ಇವರು ಕಳ್ಳರೆ ಇರಬೇಕೆಂದು ಭಾವಿಸಿದ ಪೊಲೀಸರು ಆ ವಾಹನ ಬೆನ್ನಟ್ಟಿದರು. ವೇಗವಾಗಿ ಹೋಗುತ್ತಿದ್ದ ಬೈಕ್ ಅನ್ನು ಪೊಲೀಸರು ಬೆನ್ನಟ್ಟುವಾಗ ಆಕಸ್ಮಿಕವಾಗಿ ಬೈಕ್‌ಗೆ ಡಿಕ್ಕಿಯಾಗಿದೆ. 112 ವಾಹನ ಡಿಕ್ಕಿ ಹೊಡೆದ ರಭಸಕ್ಕೆ ಇಬ್ಬರು ಕೆಳಗೆ ಬಿದ್ದರು. ಈ ದೃಶ್ಯ ಮನೆಯೊಂದರ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ನಂತರ ಅವರನ್ನು ಪೊಲೀಸರು ವಿಚಾರಣೆಗೊಳಪಡಿಸಿದಾಗ ಮದ್ಯಪಾನ ಮಾಡಿದ್ದ ಕಾರಣ ನಿಮ್ಮನ್ನು ನೋಡಿ ಹೆದರಿಕೆಯಿಂದ ವೇಗವಾಗಿ ಬೈಕ್ ಚಾಲನೆ ಮಾಡುತ್ತಿದ್ದೆವು ಎಂದು ಸ್ಪಷ್ಟಪಡಿಸಿದರು. ಈ ಅಪಘಾತದಿಂದ ಇಬ್ಬರು ವಿದ್ಯಾರ್ಥಿಗಳಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ನಂತರ ಪೊಲೀಸರು ಅವರಿಗೆ ಬುದ್ಧಿವಾದ ಹೇಳಿ ಕಳುಹಿಸಿದ್ದಾರೆ.

ಮೂರು ತಿಂಗಳಲ್ಲಿ ದಿನಗೂಲಿ ನೌಕರಿ ಖಾಯಂಗೆ ಆದೇಶ

ಮೈಸೂರು, ಜೂ.14(ಜಿಎ)–ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮೈಸೂರು ಕಚೇರಿಯಲ್ಲಿ ಕಳೆದ 20 ವರ್ಷಗಳಿಂದ ದಿನಗೂಲಿ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಕೆ.ಎಸ್.ಸರಸ್ವತಿ ಅವರ ಸೇವೆಯನ್ನು 3 ತಿಂಗಳೊಳಗೆ ಖಾಯಂಗೊಳಿಸುವಂತೆ ಔದ್ಯೋಗಿಕ ನ್ಯಾಯಾಧೀಕರಣ ನೀಡಿರುವ ತೀರ್ಪು ಐತಿಹಾಸಿಕ. ಇದು ಇತರರಿಗೂ ಅನ್ವಯಿಸುತ್ತದೆ ಎಂದು ಕಾರ್ಮಿಕ ಮುಖಂಡ ಪ್ರಮೋದ್ ಚಿಕ್ಕಮಣ್ಣೂರ್ ತಿಳಿಸಿದರು.

ಔದ್ಯೋಗಿಕ ನ್ಯಾಯಾಧೀಕರಣ ತೀರ್ಪು ಐತಿಹಾಸಿಕವಾಗದು

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾಯಮೂರ್ತಿ ಪಿ.ಸಂಧ್ಯಾ ರಾವ್ ಈ ಮಹತ್ವದ ತೀರ್ಪು ನೀಡಿದ್ದಾರೆ. ಇಲ್ಲಿವರೆಗೆ ಸರ್ವೋಚ್ಚ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯಗಳು ಮಾತ್ರ ದಿನಗೂಲಿ ನೌಕರರ ಸೇವೆ ಸಕ್ರಮ ಕುರಿತಂತೆ ಅನೇಕ ಆದೇಶ ಹೊರಡಿಸಿವೆ. ಆದರೆ ಕಾರ್ಮಿಕ ನ್ಯಾಯಾಲಯವೊಂದು ಈ ರೀತಿಯ ತೀರ್ಪು ನೀಡಿರುವುದು ಇದೇ ಪ್ರಥಮ. ಹೀಗಾಗಿ ಇದು ಅನೇಕ ನೊಂದ ನೌಕರರ ಪಾಲಿಗೆ ಆಶಾದಾಯಕವಾಗಿದೆ. ತಮ್ಮ ಸುದೀರ್ಘ ಹೋರಾಟಕ್ಕೆ ಸಂದ ಜಯ ಸಹಾ ಆಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಕೆ.ಎಸ್.ಸರಸ್ವತಿ ದಿನಗೂಲಿ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು. ಇವರ ಸೇವೆ ಸಕ್ರಮ ನಿರಾಕರಿಸಿದಾಗ ತಾವು ವಿಷಯ ಕೈಗೆತ್ತಿಕೊಂಡು ಕಾರ್ಮಿಕ ಕಾನೂನು ಬಳಸಿಕೊಂಡು ಕಾರ್ಮಿಕ ಇಲಾಖೆಗೆ ಸಲ್ಲಿಸಿದ ಮನವಿ ಪರಿಶೀಲಿಸಿ ಕಾರ್ಮಿಕ ಇಲಾಖೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಇದರಿಂದಾಗಿ ಈ ತೀರ್ಪು ಹೊರ ಬಿದ್ದಿದ್ದು, 3 ತಿಂಗಳೊಳಗೆ ಸೇವೆ ಖಾಯಂಗೊಳಿಸದಿದ್ದರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದರು. ಈ ವೇಳೆ ಗೋಷ್ಠಿಯಲ್ಲಿ ಕಾರ್ಮಿಕ ಮುಖಂಡರಾದ ವೆಂಕಟರಾಜು, ಗಂಗಾಧರಸ್ವಾಮಿ, ಶಿವಸ್ವಾಮಿ, ಮಹಾಲಿಂಗ ಉಪಸ್ಥಿತರಿದ್ದರು.

ಪ್ರಶಂಸನಾ ದಿನಾಚರಣೆ....



ಮೈಸೂರಿನ ರೋಟರಿ ಬೃಂದಾವನ್ ಕ್ಲಬ್‌ನ ರೋಟರಿ ಬೃಂದಾವನ ಶಾಲೆಯ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪ್ರಶಂಸನಾ ದಿನಾಚರಣೆಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿದರು. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

ಶತಾಯುಷಿ ಬೋಳೇಗೌಡ ನಿಧನ



ಮೈಸೂರು, ಜೂ.14– ಮೈಸೂರು ಜಿಲ್ಲೆಯ ಎಚ್.ಡಿ ಕೋಟೆ ತಾಲೂಕಿನ ಜಿಬಿ ಸರಗೂರು ಗ್ರಾಮದ ನಿವಾಸಿ ಬೋಳೇಗೌಡ (110) ಅವರು ನಿಧನರಾದರು. ಮೃತರು ಪತ್ನಿ ಶ್ರೀಮತಿ ಬೋರಮ್ಮ, ಮಕ್ಕಳಾದ ರವಿಗೌಡ, ಪವಿತ್ರ ನಾಗೇಗೌಡ, ಆಶಾ ವಸಂತಸ್ವಾಮಿ, ಮೊಮ್ಮಕ್ಕಳಾದ ನಿಂಗರಾಜು, ಉಮೇಶ್, ಚಂದ್ರ, ಮಾದೇವ, ರಾಜು, ಗಗನ್, ಯೋಗೇಶ್, ತನುಜ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾಕೇತ್ ರಾಜನ್ ನಂತರ ನಕ್ಸಲ್ ಚಟುವಟಿಕೆಯಲ್ಲಿ ಮೈಸೂರಿನ ಮತ್ತೊಬ್ಬ ಭಾಗಿ

ಭಾರತದ ನಕ್ಸಲ್ ಚಟುವಟಿಕೆಗೆ ವಿದೇಶದಿಂದ 95 ಕೋಟಿ ಹಂಚಿಕೆ

ಮೈಸೂರು, ಜೂ.14(ಬಿಎಲ್‌ಯು)–ಕರ್ನಾಟಕದ ನಕ್ಸಲ್ ಚಳವಳಿಯ ರೂವಾರಿ ಮೈಸೂರಿನ ಸಾಕೇತ್ ರಾಜನ್ ಅಲಿಯಾಸ್ ಮಾಸ್ಟರ್ ಮೃತಪಟ್ಟ ನಂತರ ನಕ್ಸಲ್ ಚಟುವಟಿಕೆಯಲ್ಲಿ ಮೈಸೂರಿನ ಮತ್ತೊಬ್ಬ ಗುರುತಿಸಿಕೊಂಡಿರುವ ಆತಂಕಕಾರಿ ವಿಚಾರ ಬಯಲಾಗಿದ್ದು ದೇಶದ ನಕ್ಸಲ್ ಚಟುವಟಿಕೆಗೆ ವಿದೇಶದಿಂದ 95 ಕೋಟಿ ರೂ. ಸಂದಾಯವಾಗಿರುವ ಅಂಶ ಬೆಳಕಿಗೆ ಬಂದಿದೆ.

ಮೈಸೂರು ಮೂಲದ ಸುಪ್ರೀಂ ಜಾಯ್ ನಕ್ಸಲ್ ಚಳವಳಿಯಲ್ಲಿ ಭಾಗಿಯಾಗಿರುವ ವ್ಯಕ್ತಿಯಾಗಿದ್ದಾನೆ.

ಮೂಲತಃ ಮೈಸೂರು ನಗರದವನಾದ ಸಾಕೇತ್ ರಾಜನ್ ಕರ್ನಾಟಕದ ನಕ್ಸಲ್ ಚಳವಳಿಯ ಪ್ರಮುಖ ಸಿದ್ಧಾಂತಿಯಾಗಿದ್ದನು. ನಕ್ಸಲ್ ಚಳವಳಿಯಲ್ಲಿ ಪ್ರಮುಖ ನಾಯಕನಾಗಿದ್ದ ಸಾಕೇತ್ ರಾಜನ್ ನನ್ನು ಫೆಬ್ರವರಿ 6, 2005ರಲ್ಲಿ ಚಿಕ್ಕಮಗಳೂರು ಜಿಲ್ಲೆ ಮೆಣಸಿನಹಾಡ್ಯ ಕಾಡಿನಲ್ಲಿ ಪೊಲೀಸರು ಎನ್‌ಕೌಂಟರ್ ಮಾಡಿದ್ದರು.

ಜಾರಿ ನಿರ್ದೇಶನಾಲಯದಿಂದ ಪ್ರಕರಣ ಬಯಲು



ಸಾಕೇತ್ ರಾಜನ್ ನಂತರ ಸುಪ್ರೀಂ ಜಾಯ್ ನಕ್ಸಲ್ ಚಟುವಟಿಕೆಯಲ್ಲಿ ಭಾಗಿಯಾಗಿರುವ ಮೈಸೂರಿನ ಮತ್ತೊಬ್ಬ ವ್ಯಕ್ತಿಯಾಗಿದ್ದಾನೆ. ಸಾಕೇತ್ ರಾಜನ್ ಕಾರ್ಯವ್ಯಾಪ್ತಿ ಭಾರತಕ್ಕೆ ಮಾತ್ರ ಸೀಮಿತವಾಗಿತ್ತು. ಆದರೆ ಸುಪ್ರೀಂ ಜಾಯ್ ನಕ್ಸಲ್ ಚಟುವಟಿಕೆ ಅಂತರರಾಷ್ಟ್ರೀಯ ಮಟ್ಟಕ್ಕೂ ವ್ಯಾಪಿಸಿದೆ. ಭಾರತದಲ್ಲಿ ಅದರಲ್ಲೂ ಛತ್ತೀಸ್‌ಗಢದ ನಕ್ಸಲ್ ಚಟುವಟಿಕೆಗಳಿಗೆ ವಿದೇಶಿ ಮೂಲದ ಹಣವನ್ನು ಈತ ಹಾಗೂ ಸಹಚರರು ಹಂಚಿಕೆ ಮಾಡುತ್ತಿದ್ದರು.

ಅಮೆರಿಕ ಮೂಲದ ಸಂಸ್ಥೆಗಳಿಂದ ಭಾರತದ ನಕ್ಸಲ್ ಚಟುವಟಿಕೆಗಳಿಗೆ ಹಣ ಹಂಚಿಕೆ ಮಾಡುತ್ತಿದ್ದರು. ಅರ್ಬನ್ ನಕ್ಸಲ್ ಆಗಿ ಕಾರ್ಯ ಚಟುವಟಿಕೆ ನಡೆಸುತ್ತಿದ್ದ ಸುಪ್ರೀಂ ಜಾಯ್ ಹಿನ್ನೆಲೆ ನಿಗೂಢವಾಗಿದೆ.

ಸುಪ್ರೀಂ ಜಾಯ್ ಸೇರಿದಂತೆ ಇತರರು 95 ಕೋಟಿಗೂ ಹೆಚ್ಚು ವಿದೇಶಿ ಹಣ ಬಳಕೆ ಮಾಡಿರುವುದನ್ನು ಜಾರಿ ನಿರ್ದೇಶನಾಲಯ ಏಪ್ರಿಲ್ ತಿಂಗಳಲ್ಲಿ ಬೆಳಕಿಗೆ ತಂದಿತ್ತು. ತರುವಾಯ ಇ.ಡಿ ಈ ಪ್ರಕರಣದ ಬಗ್ಗೆ ಇನ್ನು ಆಳಕ್ಕೆ ಇಳಿದು ತನಿಖೆ ನಡೆಸುತ್ತಿದೆ. ಈಗ ಬೆಂಗಳೂರಿನ ಕೊತ್ತನೂರು ಪೊಲೀಸರು ಸುಪ್ರೀಂ ಜಾಯ್ ಸೇರಿದಂತೆ ಏಳು ಜನರ ವಿರುದ್ಧ ಎಫ್‌ಐಆರ್ ದಾಖಲಿಸಿದ್ದು, ಸುಪ್ರೀಂ ಜಾಯ್ ಜಾಡು ಹಿಡಿದು ಹೊರಟಿದ್ದಾರೆ.


ಎನ್‌ಐಎ ತನಿಖೆ ನಡೆಸುವ ಸಾಧ್ಯತೆ

ವಿದೇಶಿ ಹಣ ಬಳಕೆ ಸೇರಿದಂತೆ ನಕ್ಸಲ್ ಉಗ್ರವಾದ ಪ್ರಕರಣವಾಗಿರುವ ಹಿನ್ನೆಲೆಯಲ್ಲಿ ಈ ಪ್ರಕರಣದ ಬಗ್ಗೆ ಎನ್‌ಐಎ ತನಿಖೆ ನಡೆಸುವ ಸಾಧ್ಯತೆ ಇದೆ. ಭಾರತವನ್ನು ನಕ್ಸಲ್ ಮುಕ್ತ ಮಾಡಿದ್ದೇವೆ ಎಂದು ಗೃಹ ಸಚಿವ ಅಮಿತ್ ಶಾ ಹೇಳಿದ್ದರು. ಆದರೆ ಗೃಹ ಇಲಾಖೆ ಸೇರಿದಂತೆ ದೇಶದ ಯಾವುದೇ ತನಿಖಾ ಸಂಸ್ಥೆಗಳ ಅರಿವಿಗೆ ಬಾರದಂತೆ ನಕ್ಸಲ್ ಚಟುವಟಿಕೆಗಳಿಗೆ ವಿದೇಶಿ ಹಣ ಹಂಚಿಕೆ ಮಾಡಲಾಗುತ್ತಿತ್ತು. ಬಹಳ ಗುಪ್ತವಾಗಿ ನಡೆಯುತ್ತಿದ್ದ ನಕ್ಸಲ್ ಚಟುವಟಿಕೆಯ ವಿದೇಶ ಹಣಕಾಸು ವಹಿವಾಟನ್ನು ಈಗ ಇಡಿ ಬಹಿರಂಗಗೊಳಿಸಿದೆ. ಬೆಂಗಳೂರಿನ ಕೊತ್ತನೂರು ಪೊಲೀಸ್ ಠಾಣೆಯಲ್ಲಿ ಈ ಪ್ರಕರಣದ ಬಗ್ಗೆ ಎಫ್‌ಐಆರ್ ದಾಖಲಾಗಿದ್ದರೂ, ಇದರ ಸಂಪೂರ್ಣ ತನಿಖೆಯನ್ನು ಎನ್‌ಐಎ ವಹಿಸಿಕೊಳ್ಳುವ ಸಾಧ್ಯತೆ ಇದೆ.

ಇನ್ನೂ ಯಾರನ್ನು ಬಂಧಿಸಿಲ್ಲ

"ನಕ್ಸಲ್ ಚಟುವಟಿಕೆಗಳಿಗೆ ವಿದೇಶಿ ಹಣ ಹಂಚಿಕೆ ಮಾಡುತ್ತಿರುವ ಆರೋಪದ ಮೇಲೆ ಮೈಸೂರಿನ ಸುಪ್ರೀಂ ಜಾಯ್ ಸೇರಿದಂತೆ ಏಳು ಜನರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಜಾರಿ ನಿರ್ದೇಶನಾಲಯವು ನೀಡಿದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ. ಆದರೆ ಇನ್ನು ಯಾರನ್ನು ಈ ತನಕ ಬಂಧಿಸಿಲ್ಲ. ಈ ಪ್ರಕರಣದ ಬಗ್ಗೆ ದಾಖಲಾತಿ ಮತ್ತು ವಿವರ ನೀಡುವಂತೆ ಇಡಿಗೆ ಪತ್ರ ಬರೆಯಲಾಗಿದೆ. ಪ್ರಾಯಶಃ ಎನ್‌ಐಎ (ನ್ಯಾಷನಲ್ ಇನ್ವೆಸ್ಟಿಗೇಷನ್ ಏಜೆನ್ಸಿ–ರಾಷ್ಟ್ರೀಯ ತನಿಖಾ ಸಂಸ್ಥೆ) ಈ ಪ್ರಕರಣದ ತನಿಖೆ ನಡೆಸುವ ಸಾಧ್ಯತೆ ಇದೆ. ಈ ಬಗ್ಗೆ ಸ್ಪಷ್ಟತೆ ಇಲ್ಲ. **–ಚಂದನ್, ಎಸಿಪಿ, ಸಂಪಿಗೆಹಳ್ಳಿ ವೃತ್ತ, ಬೆಂಗಳೂರು.**

ಜೂ.21, ಡಾ.ಎಸ್.ಎಲ್.ಭೈರಪ್ಪ ಸಂಸ್ಮರಣೆ



ಮೈಸೂರು: ಪ್ರಿಯದರ್ಶನ ಸಾಂಸ್ಕೃತಿಕ ವೇದಿಕೆ ವತಿಯಿಂದ ಶ್ರೀರಂಗಪಟ್ಟಣ ನಗರದ ಬಿಎಸ್‌ಎಸ್ ವಿದ್ಯೋದಯ ಸಂಸ್ಥೆಯ ಪದ್ಮಜಾ ಶ್ರೀನಿವಾಸ ಸಭಾಂಗಣದಲ್ಲಿ ಜೂ.21ರ ಭಾನುವಾರ ಸಂಜೆ ಸಂಜೆ 4 ಗಂಟೆಗೆ ಸರಸ್ವತೀ ಸಮ್ಮಾನ್ ಪುರಸ್ಕೃತ ಡಾ॥ ಎಸ್.ಎಲ್.ಭೈರಪ್ಪ ಸಂಸ್ಮರಣೆ' ಕಾರ್ಯಕ್ರಮ ಹಮ್ಮಿಕೊಂಡಿದೆ. ಸಂಸ್ಮರಣೆ ಭಾಷಣಕಾರರಾಗಿ ಡಾ.ಅಜಕ್ಕಳ ಗಿರೀಶ್ ಭಟ್ ಹಾಗೂ ಚಿಂತಕ, ವಿದ್ವಾನ್ ಗ.ನಾ.ಭಟ್ ಪಾಲ್ಗೊಳ್ಳುವರು. ಮುಖ್ಯ ಅತಿಥಿಗಳಾಗಿ ಹಿರಿಯ ಸಂಸ್ಕೃತ ವಿದ್ವಾಂಸ ಡಾ॥ ಹೆಚ್.ವಿ.ನಾಗರಾಜರಾವ್, ಬಿಎಸ್‌ಎಸ್ ವಿದ್ಯೋದಯದ ಗೌರವ ಕಾರ್ಯದರ್ಶಿ ಆರ್.ವಾಸುದೇವ ಭಟ್ ಭಾಗವಹಿಸುವರು. ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಅಧ್ಯಕ್ಷತೆ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ಬಿಜೆಪಿ ಗ್ರಾಮಾಂತರ ವಿಭಾಗಕ್ಕೆ ಜವಾಬ್ದಾರಿ ನೀಡಿ ಆಯ್ಕೆ

ಮೈಸೂರು, ಜೂ. 14(ಜಿಎ)–ಮೈಸೂರು ಬಿಜೆಪಿ ಗ್ರಾಮಾಂತರ ವಿಭಾಗದಲ್ಲಿ ಸಂಘಟನಾತ್ಮಕ ದೃಷ್ಟಿಯಿಂದ ಮೈಸೂರು ಗ್ರಾಮಾಂತರ ಜಿಲ್ಲಾಧ್ಯಕ್ಷರ ಸೂಚನೆ ಮೇರೆಗೆ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷ ಜೆ.ಎಸ್.ರಮೇಶ್‌ಕುಮಾರ್ ಗ್ರಾಮಾಂತರ ರೈತ ಮೋರ್ಚಾಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ಜವಾಬ್ದಾರಿಯನ್ನು ನೀಡಿದ್ದಾರೆ.

ನೂತನ ಉಪಾಧ್ಯಕ್ಷರಾಗಿ ಎಸ್.ಬಿ. ಸುರೇಶ್, ಬಿ.ಎಸ್.ಮಂಜುನಾಥ್, ಕೆ.ಬಿ. ಗಂಗಾಧರ್‌ಸ್ವಾಮಿ, ಚಂದ್ರಶೇಖರ್, ಮಂಜು, ವೆಂಕಟರಮಣ, ಶ್ಯಾಮ್ ಪಟೇಲ್, ಪ್ರಕಾಶ್ ಭೇರ್ಯ ನೇಮಕಗೊಂಡಿದ್ದಾರೆ.

ಪ್ರಧಾನಕಾರ್ಯದರ್ಶಿಗಳಾಗಿ ಶಿವಕುಮಾರ್, ಮುರಳಿ ಮೋಹನ್, ಕಾರ್ಯದರ್ಶಿಗಳಾಗಿ ರೇಚಣ್ಣ, ಮಹೇಶ್ ಬದನವಾಳು, ಸಿ.ಜಗದೀಶ್, ಕುಮಾರ್ ಬಿದರಗೂಡು, ನಿತ್ಯಾನಂದ, ಸತೀಶ್ ಗುಬ್ಬಳ್ಳಿ, ಮಂಜುನಾಥ್, ರಾಜೇಂದ್ರ, ಮಲ್ಲೇಶ್, ಖಜಾಂಚಿ ಮಹೇಶ್, ಸಾಮಾಜಿಕ ಜಾಲತಾಣ ಸಂಚಾಲಕರಾಗಿ ಜೆ.ಜಿ.ಮಂಜು ಹಾಗೂ ಕಾರ್ಯಕಾರಿಣಿ ಸದಸ್ಯರಾಗಿ ಚೆನ್ನಗೌಡ, ನಾಗೇಂದ್ರ ನಾಯಕ, ಕೃಷ್ಣಚಾರಿ, ಮಹೇಶ್ ಕಾಳಿಹುಂಡಿ, ಅರುಣ ರಾಜೇ ಅರಸ್, ಜೆ.ಎಸ್.ಮಹೇಶ್, ಗುರುಮೂರ್ತಿ, ಚಿನ್ನಸ್ವಾಮಿ, ಸೋಮಶೇಖರ್, ಮಹದೇವ ನಾಯಕ, ರೇವಣ್ಣ, ಹರೀಶ್, ನಾಗೇಗೌಡ, ನಾಗರಾಜ್‌ಶೆಟ್ಟಿ, ರಾಮಸ್ವಾಮಿ, ಎಂ.ಮಹದೇವಪ್ರಭು, ಬಸವನಾಯಕ, ನಾಗರಾಜು, ಶೇಖರ್, ಬಸವಣ್ಣ, ಪ್ರಭುಸ್ವಾಮಿ, ಶಿವಣ್ಣ, ಚಿಕ್ಕಣ್ಣ ಅವರಿಗೆ ಜವಾಬ್ದಾರಿ ನೀಡಲಾಗಿದೆ.

ತಾಂತ್ರಿಕ ಜ್ಞಾನ, ಕೌಶಲ್ಯದೊಂದಿಗೆ ರೋಗಿಗಳ ಬಗ್ಗೆ ಕಾಳಜಿ ಬಹಳ ಮುಖ್ಯ

ಪದ್ಮಶ್ರೀ ಪುರಸ್ಕೃತ ಡಾ. ಸಿ.ಎನ್.ಮಂಜುನಾಥ್ ಸಲಹೆ



ಕಾವೇರಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಹಾಗೂ ಸೇಂಟ್ ಅಲ್ಫೋನ್ಸಾ ಕಾಲೇಜಿನ 19ನೇ ಪದವಿ ಪ್ರದಾನ ಸಮಾರಂಭಕ್ಕೆ ಸಂಸದ ಡಾ.ಸಿ.ಎನ್.ಮಂಜುನಾಥ್ ಚಾಲನೆ ನೀಡಿದರು.

ಮೈಸೂರು, ಜೂ.14(ಎಂಟಿವೈ)– ಆರೋಗ್ಯ ಕ್ಷೇತ್ರದಲ್ಲಿ ಕೇವಲ ತಾಂತ್ರಿಕ ಜ್ಞಾನ ಮತ್ತು ಕೌಶಲ್ಯಗಳಿದ್ದರೆ ಸಾಲದು, ಉತ್ತಮ ಸಂವಹನ ಕೌಶಲ್ಯ, ಮಾನವೀಯತೆ, ಸಹಾನುಭೂತಿ, ಕರುಣೆಯೊಂದಿಗೆ ರೋಗಿಗಳ ಜೊತೆ ಆತ್ಮೀಯ ವರ್ತನೆ ಅತ್ಯಂತ ಮುಖ್ಯ ಎಂದು ಸಂಸದರೂ ಹಾಗೂ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಮಾಜಿ ನಿರ್ದೇಶಕರಾದ ಪದ್ಮಶ್ರೀ ಡಾ.ಸಿ.ಎನ್.ಮಂಜುನಾಥ್ ಅಭಿಪ್ರಾಯಪಟ್ಟಿದ್ದಾರೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ನಡೆದ ಕಾವೇರಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಹಾಗೂ ಸೇಂಟ್ ಅಲ್ಫೋನ್ಸಾ ಕಾಲೇಜಿನ 19ನೇ ಪದವಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಆಸ್ಪತ್ರೆಗೆ ದಾಖಲಾಗಿರುವ ರೋಗಿಗಳಿಗೆ ಅಗತ್ಯ ಚಿಕಿತ್ಸೆ ನೀಡುವುದರೊಂದಿಗೆ ಕಾಳಜಿ ವಹಿಸುವುದು ಬಹಳ ಮುಖ್ಯ ಎಂದರು.

ವೈದ್ಯರು ಅಥವಾ ಆರೋಗ್ಯ ಸಿಬ್ಬಂದಿಗಳ ಮಾತಿನ ಸೌಮ್ಯತೆ, ನಗುಮುಖ, ಕಾಳಜಿ ಹಾಗೂ ಮಾನವೀಯ ಸ್ಪರ್ಶವನ್ನು ರೋಗಿಗಳು ಹೆಚ್ಚು ನೆನಪಿಟ್ಟುಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಆರೋಗ್ಯ ಸೇವೆಯಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬರೂ 'ತಾಯಿಯ ಹೃದಯ' ಹೊಂದಿರಬೇಕು. ಇತರರ ನೋವನ್ನು ಅರ್ಥಮಾಡಿಕೊಳ್ಳುವ ಗುಣವೇ ಉತ್ತಮ ಆರೋಗ್ಯ ಸೇವೆಯ ಮೂಲವಾಗಿದೆ ಎಂದು ಅಭಿಪ್ರಾಯಪಟ್ಟರು.

ಕೇಂದ್ರ ಸರ್ಕಾರದ ಆಯುಷ್ಮಾನ್ ಭಾರತ್ ಯೋಜನೆ ಹಾಗೂ ಜನಔಷಧಿ ಕೇಂದ್ರಗಳಿಂದ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ನೆರವಾಗುತ್ತಿದೆ. ಕಡಿಮೆ ವೆಚ್ಚದಲ್ಲಿ ಗುಣಮಟ್ಟದ ಆರೋಗ್ಯ ಸೇವೆ ಮತ್ತು ಔಷಧಿಗಳನ್ನು ಒದಗಿಸುವಲ್ಲಿ ಈ ಯೋಜನೆಗಳು ಮಹತ್ತರ ಪಾತ್ರ ವಹಿಸುತ್ತಿವೆ ಎಂದು ತಿಳಿಸಿದರು.

ಪದವಿ ಪ್ರದಾನವು ಕೇವಲ ಪ್ರಮಾಣ ಪತ್ರ ಪಡೆಯುವ ಕಾರ್ಯಕ್ರಮವಲ್ಲ. ಅದು ಕಲಿಕೆಯಿಂದ ಜವಾಬ್ದಾರಿಯತ್ತ ಕನಸಿನಿಂದ ಸಾಧನೆಯತ್ತ ಹಾಗೂ ಜ್ಞಾನದಿಂದ ವಿವೇಕದತ್ತ ಸಾಗುವ ಮಹತ್ವದ ಘಟ್ಟವಾಗಿದೆ. ಕಲಿಕೆಗೆ ಯಾವುದೇ ಮಿತಿಯಿಲ್ಲ. ಜೀವನ ಎಂದಿಗೂ ಪಾಠ ಹೇಳುವುದನ್ನು ನಿಲ್ಲಿಸುವುದಿಲ್ಲ. ಆದ್ದರಿಂದ ನಿರಂತರ ಕಲಿಕೆಯನ್ನು ಮುಂದುವರಿಸಬೇಕು. ಸಮಾಜದ ಎಲ್ಲ ವರ್ಗದ ಜನರಿಗೆ ಗುಣಮಟ್ಟದ ಹಾಗೂ ಕೈಗೆಟುಕುವ ಆರೋಗ್ಯ ಸೇವೆಯನ್ನು ಒದಗಿಸುವುದು ಪ್ರತಿಯೊಬ್ಬ ಆರೋಗ್ಯ ವೃತ್ತಿಪರರ ಕರ್ತವ್ಯವಾಗಿದೆ. ಸೇವಾ ಮನೋಭಾವ, ಪ್ರಾಮಾಣಿಕತೆ ಮತ್ತು ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ನಿಜವಾದ ಯಶಸ್ಸು ದೊರೆಯುತ್ತದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಬದಲಾಗುತ್ತಿರುವ ಜೀವನಶೈಲಿ, ಆಹಾರ ಪದ್ಧತಿ ಹಾಗೂ ಒತ್ತಡದ ಬದುಕಿನಿಂದ ಹೃದ್ರೋಗ ಸೇರಿದಂತೆ ಅನೇಕ ಸಾಂಕ್ರಾಮಿಕವಲ್ಲದ ಕಾಯಿಲೆಗಳು ಹೆಚ್ಚಾಗುತ್ತಿವೆ. ಅದರಲ್ಲೂ ಯುವಜನರಲ್ಲಿ ಹೆಚ್ಚಿನ ಆರೋಗ್ಯ ಸಮಸ್ಯೆ ಕಂಡು ಬರುತ್ತಿದೆ. ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾವೇರಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಅಧ್ಯಕ್ಷ ಡಾ.ಜಿ.ಆರ್.ಚಂದ್ರಶೇಖರ್ ವಹಿಸಿದ್ದರು. ಸುರಕ್ಷಾ ಎಜುಕೇಶನ್ ಟ್ರಸ್ಟ್ ಅಧ್ಯಕ್ಷರು ಹಾಗೂ ಕಾವೇರಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ವ್ಯವಸ್ಥಾಪಕ ನಿರ್ದೇಶಕರಾದ ಡಾ. ಸರಳಾ ಚಂದ್ರಶೇಖರ್, ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದಿನಿಂದ ಮುದ್ರಾ ಪ್ರಾಣಾಯಾಮ ಶಿಬಿರ

ಮೈಸೂರು: ಮೈಸೂರಿನ ಧನ್ಯ ಸ್ಕೂಲ್ ಆಫ್ ಯೋಗ, ಮುದ್ರಾ ಪ್ರಾಣಾಯಾಮ ಸೆಂಟರ್ ವತಿಯಿಂದ ಮುದ್ರಾಪ್ರಾಣಾಯಾಮ ಹಾಗೂ ಸಂಕಲ್ಪ ಸಿದ್ಧಿ ಧ್ಯಾನ ಶಿಬಿರವನ್ನು ಜೆಎಲ್‌ಬಿ ರಸ್ತೆಯ ಮಹಿಳಾ ಸಮಾಜದಲ್ಲಿ ಇಂದಿನಿಂದ 5 ದಿನಗಳ ಕಾಲ ಪ್ರತಿದಿನ ಸಂಜೆ 5.30ರಿಂದ 7.30 ರವರೆಗೆ ಏರ್ಪಡಿಸಲಾಗಿದೆ. ಮಧುಮೇಹ, ರಕ್ತದೊತ್ತಡ, ಬೊಜ್ಜು, ಅಸ್ತಮಾ, ಅಲರ್ಜಿ, ಬೆನ್ನುನೋವು, ಸೊಂಟನೋವು, ಮಂಡಿನೋವು, ಅಸಿಡಿಟಿ, ಅಲ್ಸರ್, ಮಲ ಬದ್ಧತೆ, ಥೈರಾಯಿಡ್, ಸ್ತ್ರೀಯರ ಮಾಸಿಕ ಸಮಸ್ಯೆಗಳು, ಬಂಜೆತನ, ನಿದ್ರಾಹೀನತೆ, ಖಿನ್ನತೆ, ಕೋಪ ಮುಂತಾದ ಸಮಸ್ಯೆಗಳಿಗೆ ಶಿಬಿರದಲ್ಲಿ ಚಿಕಿತ್ಸೆ ನೀಡಲಾಗುತ್ತದೆ. ಮಾಹಿತಿಗೆ ಮೊ: 9945614565, 9141096102 ಮೂಲಕ ಸಂಪರ್ಕಿಸಬಹುದು.

ಇಂದು ಅಲಂಕಾರಿಕ ಸಸ್ಯ ಕುಂಡಗಳ ಅನಾವರಣ

ಮೈಸೂರು: ಮೈಸೂರು ನಗರವನ್ನು ಸ್ವಚ್ಛ, ಹಸಿರು ನಗರವನ್ನಾಗಿಸುವ ಉದ್ದೇಶದಿಂದ ಮೈಸೂರಿನ ಡಿ.ದೇವರಾಜ ಅರಸು ರಸ್ತೆ ವ್ಯಾಪಾರಿಗಳ ಸಂಘದ ವತಿಯಿಂದ ಡಿ.ದೇವರಾಜ ಅರಸು ರಸ್ತೆಯ ಇಕ್ಕೆಲಗಳಲ್ಲಿ ಅಲಂಕಾರಿಕ ಸಸ್ಯಗಳ ಕುಂಡಗಳನ್ನು ಸ್ಥಾಪಿಸುವ ಯೋಜನೆಗೆ ಇಂದು ಬೆಳಗ್ಗೆ 11.30ಕ್ಕೆ ಮೈಸೂರು ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಚಾಲನೆ ನೀಡಲಿದ್ದಾರೆ

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

15.06.2026 ಸೋಮವಾರ, ಮಳೆ ನಕ್ಷತ್ರ: ಮೃಗಶಿರ 08.06.2026ರಿಂದ 21.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಮೊದಲ ವರ್ಷದ ಪದವಿ ವಿದ್ಯಾರ್ಥಿಗಳ ಪರಿಚಯ, ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ, ಉದ್ಘಾಟನೆ: ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಸ್ವಾಮಿ ಸರ್ವಜಯಾನಂದಜಿ ಮಹಾರಾಜ್, ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಗೌರವಾಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿ: ಐಎಎಸ್ ಅಧಿಕಾರಿ ಕಿರಣ್ ಕಾಮಟೆ, ವಿವಿಎಸ್ ಕಾರ್ಯದರ್ಶಿ ಪಿ.ವಿಶ್ವನಾಥ್, ಸ್ಥಳ: ಕಾಲೇಜು ಆವರಣ, ಶೇಷಾದ್ರಿ ಅಯ್ಯರ್ ರಸ್ತೆ, ಬೆಳಿಗ್ಗೆ 10 ಗಂಟೆಗೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆನ್ನುನೋವು, ಕತ್ತು ನೋವಿನ ಸಮಸ್ಯೆಗಳಿಗೆ ಆಕ್ಯುಪಂಕ್ಚರ್,ಯೋಗ ಚಿಕಿತ್ಸಾ ಶಿಬಿರ, ಅರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ಕುತ್ತಿಗೆ ನೋವು ಹಾಗೂ ಬೆನ್ನು ನೋವು ತಪಾಸಣಾ ಚಿಕಿತ್ಸಾ ಶಿಬಿರ, ಸಯಾಟೀಕ್/ಗೃದ್ರಸಿ ರೋಗದ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ. ಬೆಳಗ್ಗೆ 9.30 ರಿಂದ.
- **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಮಾರೋಪ ಕಾರ್ಯಕ್ರಮ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ,ಅಗ್ರಹಾರ, ಸಂಜೆ 5.30ಕ್ಕೆ.
- **ಶ್ರೀ ರಾಮಕೃಷ್ಣ ಸೇವಾಸಂಘ, ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿಪೂರ್ವ ಕಾಲೇಜು:** ವಿಶೇಷ ಉಪನ್ಯಾಸ ಮತ್ತು ಗೌರವ ಸಮರ್ಪಣೆ, ವಿಷಯ: ಸ್ಪರ್ಧಾತ್ಮಕ ಪರೀಕ್ಷೆಗಳು, ವಿಷಯ ಮಂಡನೆ: ಐಎಎಸ್ ಅಧಿಕಾರಿ ಕಿರಣ್ ಕಾಮಟೆ, ದಿವ್ಯ ಉಪಸ್ಥಿತಿ: ಸ್ವಾಮಿ ಯುಕ್ತೇಶಾನಂದಜೀ ಮಹಾರಾಜ್, ಅಧ್ಯಕ್ಷತೆ: ಶ್ರೀ ರಾಮಕೃಷ್ಣ ಸೇವಾ ಸಂಘದ ಗೌರವ ಅಧ್ಯಕ್ಷರಾದ ಎಂ.ಪಾಪೇಗೌಡ, ಅಧ್ಯಕ್ಷರಾದ ಪ್ರೊ.ಜಿ. ಚಂದ್ರಶೇಖರ್, ಸ್ಥಳ: ಶ್ರೀ ಶಾರದಾ ಸಭಾಂಗಣ, ರಾಮಕೃಷ್ಣನಗರ, ಮೈಸೂರು, ಮಧ್ಯಾಹ್ನ 2.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ರುಮಾಟಾಯ್ಡ್ ಅರ್ಥ್ರೈಟಿಸ್ (ಆಮವಾತ), ತುರಿಕೆ, ಮಕ್ಕಳಲ್ಲಿ ಕಂಡು ಬರುವ ಕೆಮ್ಮು, ಜ್ವರ, ಅಸ್ತಮಾ ಸಮಸ್ಯೆಗಳಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಮೈಸೂರು, ಬೆಳಗ್ಗೆ 9.30ರಿಂದ


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಗೀತಾರಾಧನ, 6.30 ಚಿಂತನ–ಪ್ರೊ.ಮಂಜುನಾಥ ಲಮಾಣಿ, 6.35 ಮತ್ತು ಸಂಜೆ 6.10: ಸಸ್ಯ ಸಿರಿ–ಆಹಾರವಾಗಿ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಶ್ರೀ ಪಾದ ಹೆಗಡೆ, 7.45 ಚಿತ್ರಗೀತೆಗಳು, 8.30 ಯೋಗದತ್ತ ಜಗತ್ತು–ಅಂತಾರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ, 9.00–ನೆನಪಿನಂಗಳ–ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ. ಹಿರಿಯ ಸಂಗೀತ ಶಾಸ್ತ್ರಜ್ಞರಾದ ಪ್ರೊ.ರಾ.ವಿಶ್ವೇಶ್ವರನ್ ಅವರೊಂದಿಗೆ ಜಿ.ರಾಜಲಕ್ಷ್ಮೀ ಶ್ರೀಧರ್ ಅವರು ನಡೆಸಿದ್ದ ಸಂವಾದದ ಎರಡನೇ ಭಾಗ. 10.05 ಕರ್ನಾಟಕ ಶಾಸ್ತ್ರೀಯ ಸಂಗೀತ –ಡಾ.ಆರ್.ಎನ್. ತಾರಾನಾಥನ್–ಹಾಡುಗಾರಿಕೆಯಲ್ಲಿ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳು. 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, ಗೇಮ್ ಷೋ. ಪ್ರಸ್ತುತಿ–ದಿಗ್ವಿಜಯ್.ಬಿ, **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ–ಮೀರಾ ಮಂಜುನಾಥ್, 12.45 ನಮ್ಮ ಆರೋಗ್ಯ–ಹಿರಿಯ ನಾಗರಿಕರ ಸಂರಕ್ಷಣೆ ಈ ಕುರಿತು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯ ವಯೋವೃದ್ಧರ ವಿಭಾಗದ ಮುಖ್ಯಸ್ಥರು ಹಾಗೂ ಪ್ರೊಫೆಸರ್ ಡಾ.ಪ್ರತಿಭಾ ಪೆರೇರಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ –ಪ್ರಧಾನಮಂತ್ರಿ ಆಟಿಕೆಗಳ ನವೋದ್ಯಮ ಯೋಜನೆ ಕುರಿತು ಮಾಹಿತಿ. 1.20 ಭಾವಗೀತೆಗಳು–ಅಮೃತಾ ನಿತಿನ್ ಶಾಸ್ತ್ರಿ, 2.30–ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಸಾಯಿತೇ ಜಸ್ ಚಂದ್ರಶೇಖರ್–ಹಾಡುಗಾರಿಕೆ4.00 ಮಹಿಳಾರಂಗ–ನನ್ನ ಹಕ್ಕು ನನ್ನ ಜವಾಬ್ದಾರಿ–ಮಹಿಳಾ ಕಾನೂನು ಜಾಗೃತಿ ಕಾರ್ಯಕ್ರಮ. ಭಾಗವಹಿಸುತ್ತಾರೆ–ನಿವೃತ್ತ ಸರ್ಕಾರಿ ಅಭಿಯೋಜಕರು ಹಾಗೂ ಕರ್ನಾಟಕ ಉಚ್ಚ ನ್ಯಾಯಾಲಯದ ವಕೀಲರಾದ ಕಾಮಾಕ್ಷಿ.ಬಿ.ಕೆ., ಪ್ರಸ್ತುತಿ–ಸಹನಾ, 4.30 ಹಿಂದಿ ಚಿತ್ರಗೀತೆಗಳು, 4.45 ಭಾಷಾಭಾರತಿ–ವಿಶೇಷ ಹಿಂದಿ ಪಾಠ ಸರಣಿ–ಸಹಯೋಗ ಭಾರತೀಯ ಭಾಷಾ ಸಂಸ್ಥಾನ, ಮೈಸೂರು. ಭಾಗವಹಿಸುವವರು–ಡಾ.ಬೀರೇಶ್‌ಕುಮಾರ್, ಡಾ.ಅಮಿತ್‌ಕುಮಾರ್ ಝಾ ಹಾಗೂ ಚೇತನ್ ಬಾಜಿ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ಜಿಲ್ಲಾ ವಾರ್ತಾ ಪತ್ರ, 6.51 ಕೃಷಿರಂಗ: ಕೃಷಿ ದೀವಿಗೆ–ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಮುಂಗಾರಿಗೆ ಸೂಕ್ತವಾದ ದ್ವಿದಳಧಾನ್ಯ ಬೆಳೆಗಳು ಹಾಗೂ ಅವುಗಳ ಉತ್ಪಾದನಾ ತಾಂತ್ರಿಕತೆಗಳನ್ನ ಕುರಿತು ಸಂವಾದ. ಭಾಗವಹಿಸುತ್ತಾರೆ–ಮಂಡ್ಯದ, ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕರಾದ ಡಾ.ಪಿ.ಮಹದೇವು ಮತ್ತು ಸಹಾಯಕ ಪ್ರಾಧ್ಯಾಪಕರಾದ ಡಾ.ಡಿ.ಎಸ್.ಪ್ರಭುದೇವ. ಪ್ರಸ್ತುತಿ–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಮೈಸೂರಿನ ವಿಜಯನಗರದಲ್ಲಿರುವ ಸದ್ವಿದ್ಯಾ ಸೆಮಿ ರೆಸಿಡೆನ್ಷಿಯಲ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಕಾರ್ಯಕ್ರಮ ವೈವಿಧ್ಯ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಬಾಂಬೆ ಸಹೋದರಿಯರ ಹಾಡುಗಾರಿಕೆ, 10.00 'ಶ್ರೀ ವಿದ್ಯಾವಿಶಾರದ' ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ–ವಿದ್ವಾನ್ ವಿ.ನಂಜುಂಡಸ್ವಾಮಿ, 10.30 ಕೇಂದ್ರ ಸರ್ಕಾರ 12 ವರ್ಷಗಳನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ ವಿದೇಶಿ ನೀತಿ ವಿಷಯದ ಕುರಿತು ವಿಶೇಷ ದ್ವಿಭಾಷಾ ಕಾರ್ಯಕ್ರಮ.

ಸಂಸದ ಯದುವೀರ್ ಒಡೆಯರ್‌ಗೆ 'ಸರಸ್ವತಿಪುರಂ ನಾಗರೀಕ ಸನ್ಮಾನ'

ಕರ್ನಾಟಕಕ್ಕೆ ಒಳ್ಳೆಯ ಆಡಳಿತ ನೀಡಬೇಕೆಂಬುದು ನಮ್ಮ ಪಕ್ಷದ ಗುರಿ; ಯದುವೀರ್ ಒಡೆಯರ್


ಸಂಸದ ಯದುವೀರ್ ಒಡೆಯರ್ ಅವರಿಗೆ 'ಸರಸ್ವತಿಪುರಂ ನಾಗರೀಕ ಸನ್ಮಾನ' ನೀಡಲಾಯಿತು.

ಮೈಸೂರು,ಜೂ.14(ಪಿಎಂ)–ಸರಸ್ವತಿಪುರಂನ 2ನೇ ಮುಖ್ಯ ರಸ್ತೆಯ ತೆಂಗಿನ ತೋಟದ ಶ್ರೀ ರಾಮ ಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರಿಗೆ 'ಸರಸ್ವತಿಪುರಂ ನಾಗರೀಕ ಸನ್ಮಾನ' ನೀಡಲಾಯಿತು.

ಮಾಜಿ ಮೇಯರ್ ಆರ್.ಲಿಂಗಪ್ಪ ಹಾಗೂ ಸ್ನೇಹಿತರ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಈ ಸಮಾರಂಭದಲ್ಲಿ ಸರಸ್ವತಿಪುರಂ ಬಡಾವಣೆಯ ಸಮಸ್ತ ನಾಗರಿಕರ ಒತ್ತಾಸೆಯ ಮೇರೆಗೆ ಸಂಸದರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಬಳಿಕ ಮಾತನಾಡಿದ ಯದುವೀರ್ ಒಡೆಯರ್, ಶಿಕ್ಷಣಕ್ಕೆ ಹೆಸರುವಾಸಿಯಾದ ಸ್ಥಳವಾದ ಕಾರಣ ಸರಸ್ವತಿಪುರಂ ಎಂದು ಇಲ್ಲಿಗೆ ನಾಮಕರಣವಾಯಿತು. ಒಳ್ಳೆಯ ಇತಿಹಾಸ ಇರುವ ಪ್ರದೇಶ ಇದಾಗಿದ್ದು, ಅಂತಹ ಸ್ಥಳದಲ್ಲಿ ನನಗೆ ಸ್ಮನಾನ ದೊರೆತಿರುವುದನ್ನು ವಿನಮ್ರವಾಗಿ ಸ್ವೀಕರಿಸಿದ್ದೇನೆ. ನಿಮ್ಮೆಲ್ಲರ ಮತದಾನದ ಮೂಲಕ ಸಂಸದನಾಗುವ ಅವಕಾಶ ಸಿಕ್ಕಿದೆ. ಅದಕ್ಕಾಗಿ ನಾನು ಅಭಾರಿಯಾಗಿದ್ದೇನೆ ಎಂದು ಹೇಳಿದರು.

ತಾವೂ ಸೇರಿದಂತೆ ಇಡೀ ಕ್ಷೇತ್ರದ ಜನತೆ ನೀಡಿರುವ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಕೆಲಸ ಮಾಡುತ್ತಿದ್ದು, ಅದೇ ನನ್ನ ಸೌಭಾಗ್ಯ. ವ್ಯಕ್ತಿಯ ವ್ಯಕ್ತಿತ್ವ ರೂಪಿಸುವುದು ಆತನ ಸುತ್ತಮುತ್ತ ಇರುವ ನಾಗರಿಕರು. ಅಂತೆಯೇ ನನ್ನ ಹಾಗೂ ನನ್ನ ಪೂರ್ವಜರಲ್ಲಿ ಉತ್ತಮ ವ್ಯಕ್ತಿತ್ವ ರೂಪುಗಳ್ಳಲು ಇಲ್ಲಿನ ನಾಗರಿಕರೇ ಕಾರಣ. ನಾನೇನಾದರೂ ಒಳ್ಳೆಯದನ್ನು ಮಾಡುತ್ತಿದ್ದರೆ ಅದಕ್ಕೆಲ್ಲಾ ನೀವೇ ಕಾರಣ ಎಂದರು.

ಕರ್ನಾಟಕದಲ್ಲಿ ಒಳ್ಳೆಯ ಆಡಳಿತ ರೂಪಿಸಿ ಕನ್ನಡಿಗರಿಗೆ ಒಳ್ಳೆಯ ಭವಿಷ್ಯ ಕೊಟ್ಟು ಪ್ರಗತಿಯತ್ತ ಸಾಗಿಸಬೇಕೆಂಬುದು ನಮ್ಮ ಪಕ್ಷದ ಗುರಿ. ಆ ನಿಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡುತ್ತಿದ್ದೇವೆ. ಬಹುಶಃ ಸಕಾರಾತ್ಮಕ ಬೆಳವಣಿಗೆ ಆಗುತ್ತದೆ. ನಮಗೆ ನಿಜಕ್ಕೂ ಪ್ರೇರಣೆಯಾದವರು ಪ್ರಧಾನಿ ನರೇಂದ್ರಮೋದಿ. ಅವರು ನಮ್ಮೆಲ್ಲರಿಗೂ ದಾರಿ ತೋರುತ್ತಿದ್ದಾರೆ. ನಾನು ರಾಜಕೀಯಕ್ಕೆ ಬರಬೇಕೇ? ಬೇಡವೇ? ಎನ್ನುವ ಪ್ರಶ್ನೆ ಇದ್ದ ಸಂದರ್ಭದಲ್ಲಿ ರಾಜಕೀಯ ಪ್ರವೇಶಿಸಲು ಸ್ಫೂರ್ತಿಯಾಗಿದ್ದು ಪ್ರಧಾನಿಗಳೇ ಎಂದು ಹೇಳಿದರು.

ಉತ್ತಮ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಪ್ರಧಾನಿ ನರೇಂದ್ರ ಮೋದಿಯವರು ದೇಶದ ಪ್ರಗತಿಗೆ ಕಾರಣರಾಗಿದ್ದಾರೆ. ನೀತಿ ಆಯೋಗದ ವರದಿಯಂತೆ ಕಳೆದ 12 ವರ್ಷಗಳಲ್ಲಿ 33 ಕೋಟಿ ಜನರ ಪೈಕಿ ಸುಮಾರು 25 ಕೋಟಿ ಜನ ಬಹು ಆಯಾಮದ ಬಡತನದಿಂದ ಆಚೆ ಬಂದಿದ್ದಾರೆ. ಬಾಕಿ ಇರುವವರೂ ಬಹು ಆಯಾಮದ ಬಡತನದಿಂದ ಹೊರಬರಲು ಸುವರ್ಣ ಅವಕಾಶ ಇದೆ. ಪ್ರಧಾನಿಗಳ ಒಳ್ಳೆಯ ಯೋಜನೆಗಳು ಈ ಪ್ರಗತಿಗೆ ಕಾರಣ ಎಂದರು.


ಅಭಿನಂದನಾ ಭಾಷಣ ಮಾಡಿದ ಶಾಸಕ ಟಿ.ಎಸ್.ಶ್ರೀವತ್ಸ, ಪ್ರಧಾನಿ ನರೇಂದ್ರಮೋದಿಯವರು 2021ರ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಆ ಸಂದರ್ಭದಲ್ಲಿ ಮೈಸೂರು ಅರಮನೆಗೆ ಭೇಟಿ ನೀಡಿ ಒಬ್ಬ ಈ ರಾಜ್ಯದ ಉದಯೋನ್ಮುಖ ತರುಣನನ್ನು ಏಕೆ ಆಯ್ಕೆ ಮಾಡಬಾರದು ಎಂಬ ದೂರದೃಷ್ಟಿ ಇಟ್ಟುಕೊಂಡು ಮೈಸೂರು ಕೊಡಗು ಲೋಕಸಭಾ ಕ್ಷೇತ್ರಕ್ಕೆ ಪಕ್ಷದ ಅಭ್ಯರ್ಥಿಯಾಗಿ ಯದುವೀರ್ ಒಡೆಯರ್ ಅವರನ್ನು ಆಯ್ಕೆ ಮಾಡಿದ್ದರು. ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗುವ ಪೂರ್ವದಲ್ಲಿ ಸಹ ಯದುವೀರ ಒಡೆಯರ್ ಅವರು ಸಾಮಾಜಿಕ ಸೇವಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು ಎಂದು ಹೇಳಿದರು.

ಯದುವೀರ್ ಒಡೆಯರ್ ಅವರು ಸಾಮಾನ್ಯರಲ್ಲೇ ಸಾಮಾನ್ಯರಾಗಿ ನಡೆದುಕೊಳ್ಳುವ ಉದಾತ್ತ ಗುಣ ಹೊಂದಿದ್ದು, ಎಲ್ಲಾ ನಾಗರಿಕರೊಂದಿಗೆ ಬೆರೆಯುತ್ತಾರೆ. ಆ ಕಾರಣಕ್ಕೆ ಅವರು ಲಕ್ಷದ 39 ಸಾವಿರ ಲೀಡ್‌ನಲ್ಲಿ ಜಯಶಾಲಿಯಾದರು. ಗೆದ್ದಿದ್ದು ಮಾತ್ರವಲ್ಲ, ಜನರಿಗೆ ನೀಡಿದ್ದ ವಾಗ್ದಾನವನ್ನು ಮರೆಯಲಿಲ್ಲ. ಅಭಿವೃದ್ಧಿ ಕೆಲಸದಲ್ಲಿ ಎತ್ತಿದ್ದ ಕೈ ಅವರದು. ಕೇವಲ ಒಂದೂವರೆ ವರ್ಷದ ಅವಧಿಯಲ್ಲಿ ಜನರಿಗೆ ಬೇಕಿರುವುದನ್ನು ಮಾಡಿ ತೋರಿಸುತ್ತಿದ್ದಾರೆ ಎಂದು ಶ್ಲಾಘಿಸಿದರು.

ಮಾಜಿ ಶಾಸಕ ಎಲ್.ನಾಗೇಂದ್ರ ಕಾರ್ಯಕ್ರಮ ಉದ್ಘಾಟಿಸಿದರು. ಮಾಜಿ ಮೇಯರ್ ಆರ್.ಲಿಂಗಪ್ಪ, ಸರಸ್ವತಿಪುರಂ ಶಂಕರ ಜಯಂತಿ ಸಭಾ ಅಧ್ಯಕ್ಷ ಸುಂದರೇಶ್, ಸರಸ್ವತಿಪುರಂ ಶ್ರೀ ವಾಸವಿ ಸ್ನೇಹಿ ವೃಂದದ ಅಧ್ಯಕ್ಷ ಶಾಂತರಾಮ್ ಮತ್ತಿತರರು ಹಾಜರಿದ್ದರು.

ವಿಧಾನ ಪರಿಷತ್ ಬಿಜೆಪಿ ಅಭ್ಯರ್ಥಿಯಾಗಿ

ರಘು ಕೌಟಿಲ್ಯರ ಆಯ್ಕೆಗಾಗಿ ಪಕ್ಷದ ವರಿಷ್ಠರಿಗೆ ಕೃಷಿ ವಿಜ್ಞಾನಿ ಡಾ.ವಸಂತ ಕುಮಾರ್ ತಿಮ್ಮಕಾಪುರ ಅಭಿನಂದನೆ


ರಘು ಕೌಟಿಲ್ಯ


ವಸಂತ ಕುಮಾರ್

ಮೈಸೂರು,ಜೂ.14(ಪಿಎಂ)– ಕರ್ನಾಟಕ ವಿಧಾನ ಪರಿಷತ್ ಚುನಾವಣೆಗೆ ರಘು ಕೌಟಿಲ್ಯ ಅವರನ್ನು ಪಕ್ಷದ ಅಭ್ಯರ್ಥಿಯಾಗಿ ಆಯ್ಕೆ ಮಾಡಿರುವ ನಿರ್ಧಾರಕ್ಕಾಗಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಸಂಸದೀಯ ಮಂಡಳಿಯ ಸದಸ್ಯರಿಗೆ ಕೃಷಿ ವಿಜ್ಞಾನಿ ಮತ್ತು ಸಸ್ಯರೋಗ ತಜ್ಞ ಡಾ.ವಸಂತ ಕುಮಾರ್ ತಿಮ್ಮಕಾಪುರ ಅಭಿನಂದಿಸಿದ್ದಾರೆ.

ರಘು ಕೌಟಿಲ್ಯರ ಈ ಆಯ್ಕೆ ಮಹತ್ವದ ಹಾಗೂ ದೂರದೃಷ್ಟಿಯ ನಿರ್ಧಾರ. ಇದು ಬಿಜೆಪಿ ಪಕ್ಷವು ವ್ಯಕ್ತಿಯ ಸಾಮಾಜಿಕ ಹಿನ್ನೆಲೆಯನ್ನು ನೋಡದೆ ಪ್ರತಿಭೆ, ನಿಷ್ಠೆ, ಸಮರ್ಪಣೆ ಮತ್ತು ಸಮಾಜ ಸೇವೆಯನ್ನು ಗುರುತಿಸಿ ಗೌರವಿಸುತ್ತದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ರಘು ಕೌಟಿಲ್ಯ ಮಡಿವಾಳ ಸಮುದಾಯಕ್ಕೆ ಸೇರಿದವರು. ಹಿಂದುಳಿದ ಮತ್ತು ಸಮಾಜದ ಮುಖ್ಯವಾಹಿನಿಯಿಂದ ದೂರವಿದ್ದ ವರ್ಗದಿಂದ ಬಂದ ವ್ಯಕ್ತಿಗೆ ಇಂತಹ ಮಹತ್ವದ ಅವಕಾಶವನ್ನು ನೀಡಿರುವುದು ಸಾಮಾಜಿಕ ನ್ಯಾಯ, ಸಮಾನ ಅವಕಾಶ ಮತ್ತು ಸಮಗ್ರ ಅಭಿವೃದ್ಧಿಯ ಮೇಲಿನ ಪಕ್ಷದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ.

ರಘು ಅವರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಗಮನಿಸಿದಾಗ, ಅವರು ಈ ಜವಾಬ್ದಾರಿಗೆ ಅತ್ಯಂತ ಅರ್ಹ ವ್ಯಕ್ತಿ. ಮೈಸೂರಿನಲ್ಲಿ ಅತ್ಯಾಧುನಿಕ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿ ಯಶಸ್ವಿಯಾಗಿ ಮುನ್ನಡೆಸುತ್ತಿರುವ ಮೂಲಕ ಅವರು ಶಿಕ್ಷಣ ಕ್ಷೇತ್ರಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಅವರು ಅತ್ಯಂತ ಸರಳ, ವಿನಯಶೀಲ ಮತ್ತು ಜನಸಾಮಾನ್ಯರೊಂದಿಗೆ ಬೆರೆತು ಬದುಕುವ ವ್ಯಕ್ತಿಯಾಗಿದ್ದಾರೆ. ನಾನೊಬ್ಬ ವಿಜ್ಞಾನಿಯಾಗಿ ಹಾಗೂ ಗ್ರಾಮೀಣ ಸಮುದಾಯ ಮತ್ತು ರೈತರೊಂದಿಗೆ ದೀರ್ಘಕಾಲದಿಂದ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಯಾಗಿ, ರಘು ಕೌಟಿಲ್ಯ ಅವರ ಬಗ್ಗೆ ನನಗೆ ಅಪಾರ ಗೌರವವಿದೆ. ಜ್ಞಾನ, ದೃಷ್ಟಿಕೋನ, ನಾಯಕತ್ವದ ಗುಣಗಳು ಮತ್ತು ಸಾಮಾಜಿಕ ಬದ್ಧತೆಯನ್ನು ಹೊಂದಿರುವ ಅವರು ವಿಧಾನ ಪರಿಷತ್ತಿಗೆ ಆಯ್ಕೆಯಾಗಿ ಜನರ ಆಶೋತ್ತರಗಳಿಗೆ ಪರಿಣಾಮ ಕಾರಿಯಾಗಿ ಧ್ವನಿಯಾಗಬಲ್ಲರು ಎಂಬ ವಿಶ್ವಾಸ ನನಗಿದೆ ಎಂದು ಪ್ರಕಟಣೆಯಲ್ಲಿ ಅವರು ತಿಳಿಸಿದ್ದಾರೆ.

ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದಿಂದ ಪ್ರತಿಭಾ ಪುರಸ್ಕಾರ...



ಮೈಸೂರಿನ ಮೂಗೂರು ಕರ್ನಾಟಕ ಬ್ರಾಹ್ಮಣ ಸಂಘದ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಸಮುದಾಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ, ಗೌರವಿಸಲಾಯಿತು. ಸಂಘದ ಅಧ್ಯಕ್ಷ ವಿಶ್ವನಾಥಯ್ಯ, ಪ್ರಧಾನ ಕಾರ್ಯದರ್ಶಿ ಕೆ.ಆರ್.ಮಂಜುನಾಥ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಮ.ವಿ.ರಾಮಪ್ರಸಾದ್, ಕಾರ್ಯಕಾರಿ ಸಮಿತಿ ನಿರ್ದೇಶಕರು ಉಪಸ್ಥಿತರಿದ್ದರು.

ಮಹಿಳಾ ಟಿ20 ವಿಶ್ವಕಪ್: ಪಾಕ್ ಮಣಿಸಿ ಭಾರತ ಶುಭಾರಂಭ



ಬರ್ಮಿಂಗ್ ಹ್ಯಾಮ್, ಜೂ.14– ಸ್ಮೃತಿ ಮಂಧಾನ ಅವರ ಆಕರ್ಷಕ ಅರ್ಧಶತಕ ಹಾಗೂ ದೀಪ್ತಿ ಶರ್ಮಾ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಬದ್ಧ ಎದುರಾಳಿ ಪಾಕಿಸ್ತಾನ ವಿರುದ್ಧ ಭಾರತ 64 ರನ್‌ಗಳ ಅಮೋಘ ಜಯ ಸಾಧಿಸಿದೆ. ಆ ಮೂಲಕ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಭರ್ಜರಿ ಶುಭಾರಂಭ ಮಾಡಿದೆ.


ಇಲ್ಲಿನ ಎಜ್‌ಬಾಸ್ಟನ್ ನಡೆದ ಹೈವೋಲ್ಟೇಜ್ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 170ರನ್ ಗಳಿಸಿತು. 171 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಾಕಿಸ್ತಾನ 17 ಓವರ್‌ಗಳಲ್ಲಿ 106 ರನ್‌ಗಳಿಗೆ ಸರ್ವಪತನ ಕಂಡಿತು.

ಪಾಕಿಸ್ತಾನದ ಪರ ಮುನೀಬಾ ಅಲಿ 35 ಎಸೆತಗಳಲ್ಲಿ 41 ರನ್ ಗಳಿಸಿದ್ದು ಹೊರತುಪಡಿಸಿದರೇ ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬರಲಿಲ್ಲ. ಪರಿಣಾಮ ಭಾರತೀಯ ಸ್ಪಿನ್ನರ್‌ಗಳಾದ ದೀಪ್ತಿ ಶರ್ಮಾ ಹಾಗೂ ಶ್ರೀಚರಣಿ ಮಾರಕ ಸ್ಪಿನ್ ದಾಳಿಗೆ ತತ್ತರಿಸಿ ಪೆವಿಲಿಯನ್ ಪರೇಡ್ ನಡೆಸಿದರು. ಉಳಿದಂತೆ ಅಲಿಯಾ ರಿಯಾಝ್ 18, ಆಯೆಷಾ ಝಫರ್, ಗುಲ್ ಫಿರೋಜಾ ತಲಾ 12 ರನ್ ಗಳಿಸಿದರು. ಭಾರತದ ಪರ ದೀಪ್ತಿ ಶರ್ಮಾ 5 ವಿಕೆಟ್ ಕಬಳಿಸಿದರೆ, ಶ್ರೀ ಚರಣಿ 3 ವಿಕೆಟ್ ತಮ್ಮದಾಗಿಸಿಕೊಂಡರು. ಶೆಫಾಲಿ ವರ್ಮಾ ಒಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡದ ಮೊತ್ತ 18 ರನ್ ಆಗುವಷ್ಟರಲ್ಲಿ ಶೆಫಾಲಿ ವರ್ಮಾ (6), ಜೆಮಿಮಾ ರೊಡ್ರಿಗಸ್(1) ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ಉಪನಾಯಕಿ ಸ್ಮೃತಿ ಮಂಧಾನ ಮತ್ತು ನಾಯಕಿ ಹರ್ಮನ್ ಪ್ರೀತ್ ಕೌರ್ 91 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಆಸರೆಯಾದರು. ಈ ವೇಳೆ ಆಕರ್ಷಕ ಅರ್ಧಶತಕ ಸಿಡಿಸಿ ಶತಕದತ್ತ ಮುನ್ನುಗ್ಗುತ್ತಿದ್ದ ಮಂಧಾನ 2 ಸಿಕ್ಸರ್, 9 ಬೌಂಡರಿ ಒಳಗೊಂಡ 68 ರನ್ ಗಳಿಸಿ ಔಟಾದರು. ಇವರ ಹಿಂದೆಯೇ ನಾಯಕಿ ಹರ್ಮನ್ ಪ್ರೀತ್ ಕೌರ್ 36 ರನ್ ಗಳಿಸಿ ನಿರ್ಗಮಿಸಿದರು. ಅಂತಿಮ ಓವರ್‌ಗಳಲ್ಲಿ ರಿಚಾ ಘೋಷ್ 17 ಎಸೆತಗಳಲ್ಲಿ 5 ಬೌಂಡರಿ, 1 ಸಿಕ್ಸರ್ ಒಳಗೊಂಡ 34 ರನ್ ಸ್ಪರ್ಧಾತ್ಮಕ ಮೊತ್ತಕ್ಕೆ ಕಾರಣರಾದರು. ಉಳಿದಂತೆ ದೀಪ್ತಿ ಶರ್ಮಾ 12 ರನ್ ಗಳಿಸಿದರು. ಪಾಕ್ ಪರ ಸಾದಿಯಾ ಇಕ್ಬಾಲ್ ಮತ್ತು ಫಾತಿಮಾ ಸನಾ ತಲಾ 2, ತಸ್ಮೀಯಾ ರುಬಾಬ್, ರಮೀನ್ ಶಮೀಮ್ ತಲಾ ಒಂದೊಂದು ವಿಕೆಟ್ ಗಳಿಸಿದರು. 5 ವಿಕೆಟ್ ಕಬಳಿಸಿದ ದೀಪ್ತಿ ಶರ್ಮಾ ಅವರು ಅರ್ಹವಾಗಿ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಒಂದು ವರ್ಷದಲ್ಲೇ ಶೇ.76ರಷ್ಟು ಹೆಚ್ಚು ನೆರವು ಕರ್ನಾಟಕಕ್ಕೆ ಸಿಗುತ್ತಿದೆ

ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಾಹಿತಿ



ಬೆಂಗಳೂರು: ಕೇಂದ್ರ ಸರ್ಕಾರ ಯಾವುದೇ ಅನುದಾನ ನೀಡುತ್ತಿಲ್ಲ ಎಂದು ರಾಜ್ಯದ ಕಾಂಗ್ರೆಸ್ ಸರ್ಕಾರ ನಿರಂತರವಾಗಿ ಆರೋಪಿಸುತ್ತಿದೆ. ಆದರೆ ಯುಪಿಎ ಸರ್ಕಾರದ 10 ವರ್ಷಗಳ ಅವಧಿಯಲ್ಲಿ ರಾಜ್ಯಕ್ಕೆ ಸಿಗುತ್ತಿದ್ದ ಅನುದಾನಕ್ಕಿಂತ ಕೇವಲ ಒಂದು ವರ್ಷದಲ್ಲೇ ಕರ್ನಾಟಕಕ್ಕೆ ಶೇ.76 ರಷ್ಟು ಹೆಚ್ಚು ಅನುದಾನ ದೊರೆತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಬೆಂಗಳೂರಿನಲ್ಲಿಂದು ಬಿಜೆಪಿ ವಿಕಸಿತ ಭಾರತ ಸಂಕಲ್ಪ ಸಮಾವೇಶದಲ್ಲಿ ಮಾತನಾಡಿದ ಅವರು, ಹಣಕಾಸು ಆಯೋಗದ ಅಂಕಿಅಂಶಗಳನ್ನೇ ಇಂದು ನಿಮ್ಮ ಮುಂದಿಡುತ್ತಿದ್ದೇನೆ, 2014ರಿಂದ 2026ರ ನಡುವೆ 4 ಲಕ್ಷ ಕೋಟಿ ರೂಪಾಯಿ ತೆರಿಗೆ ಕರ್ನಾಟಕಕ್ಕೆ ನೀಡಲಾಗಿದೆ. ಅದು 2014ಕ್ಕಿಂತ ಹಿಂದೆ ಯುಪಿಎ ಅವಧಿಯಲ್ಲಿ ನೀಡಿದ್ದಕ್ಕಿಂತ 5 ಪಟ್ಟು ಹೆಚ್ಚಾಗಿದೆ. ಆದರೆ ಯುಪಿಎಯ 10 ವರ್ಷದ ಅವಧಿಯಲ್ಲಿ ಸಿಕ್ಕಿದ್ದು 60 ಸಾವಿರ ಕೋಟಿ ರೂಪಾಯಿ ಮಾತ್ರ ಎಂದರು.

ಪ್ರಧಾನಿ ಮೋದಿಯವರು, ರಾಜ್ಯಗಳು ಅಭಿವೃದ್ಧಿಯಾಗದೆ ದೇಶ ಅಭಿವೃದ್ಧಿ ಹೊಂದುವುದಿಲ್ಲ ಎಂಬ ಪರಿಕಲ್ಪನೆ ಹೊಂದಿದ್ದಾರೆ. ಹೀಗಾಗಿ ರಾಜ್ಯಗಳಿಗೆ ಬಡ್ಡಿರಹಿತ ಸಾಲ ನೀಡುತ್ತಿದ್ದೇವೆ. 18 ಸಾವಿರ ಕೋಟಿಗಿಂತಲೂ ಅಧಿಕ ಹಣವನ್ನು ಹಣಕಾಸು ಆಯೋಗದ ಶಿಫಾರಸು ಇಲ್ಲದಿದ್ದರೂ ರಾಜ್ಯಗಳಿಗೆ ನೀಡಿದ್ದೇವೆ, ಅದು ಕರ್ನಾಟಕಕ್ಕೂ ಸಿಕ್ಕಿದೆ ಎಂದು ಹೇಳಿದರು.

ಮಕ್ಕಳಿಗೆ ಪಠ್ಯದ ಜೊತೆ ಬದುಕುವ ಕಲೆ ಕಲಿಸಿ

ವಿಧಾನಪರಿಷತ್ ಮಾಜಿ ಸದಸ್ಯ ಮಾದೇಗೌಡ ಅಭಿಪ್ರಾಯ


ಕನ್ನಿಕಾ ಶಾಲೆಯ ನೂತನ ಗ್ರಂಥಾಲಯವನ್ನು ಡಾ.ಡಿ.ಮಾದೇಗೌಡ ಉದ್ಘಾಟಿಸಿದರು.

ಮೈಸೂರು, ಜೂ.14– ಮಕ್ಕಳಿಗೆ ಪಠ್ಯದ ಜೊತೆಗೆ ಬದುಕನ್ನು ರೂಪಿಸಿಕೊಳ್ಳುವ ಕಲೆಯನ್ನು ಕಲಿಸಬೇಕು ಎಂದು ಮಾಜಿ ವಿಧಾನಪರಿಷತ್ ಸದಸ್ಯ ಡಾ.ಡಿ.ಮಾದೇಗೌಡ ಅಭಿಪ್ರಾಯಿಸಿದರು.

ಮೈಸೂರು ಸಸ್ಯಾರಾಧನಾ ಸಮಿತಿ ಮತ್ತು ಡಾ.ಡಿ.ಮಾದೇಗೌಡ ಸೇವಾ ಪ್ರತಿಷ್ಠಾನದ ವತಿಯಿಂದ ಹೆಬ್ಬಾಳಿನ ಕನ್ನಿಕಾ ಕಾವೇರಿ ಶಾಲೆಯಲ್ಲಿ ಭಾನುವಾರ ಆಯೋಜಿಸಿದ್ದ 'ಸಸ್ಯಾರಾಧನೆ' ವಿಷಯದ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ಶಾಲಾ ಮಕ್ಕಳಿಗೆ ಪ್ರಶಸ್ತಿ ವಿತರಿಸಿ ಮಾತನಾಡಿದರು.

ಭವಿಷ್ಯದಲ್ಲಿ ದೇಶವನ್ನಾಳುವ ಮಕ್ಕಳಲ್ಲಿ ಛಲದಿಂದ ಬದುಕುವ ಕಲೆ ಕಲಿಸದಿದ್ದರೆ, ಅವರು ಕಲಿಯುವ ಯಾವ ಶಿಕ್ಷಣವೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಶಿಕ್ಷಕರು ವಿದ್ಯಾರ್ಥಿಗಳಿಗೆ ಪಠ್ಯೇತರ ವಿಷಯವಾಗಿ ಬದುಕುವ ಕಲೆ ಕಲಿಸಬೇಕು ಎಂದರು.

ವಿದ್ಯಾವಂತರಲ್ಲೇ ಬದುಕುವ ಬಗ್ಗೆ ಅಸಹನೆ, ಅಶಿಸ್ತು ಹೆಚ್ಚಾಗುತ್ತಿದೆ. ಸಣ್ಣ ಪುಟ್ಟ ಕಷ್ಟಗಳಿಗೂ ಹೆದರಿ ಆತ್ಮಹತ್ಯೆ ಮಾಡಿಕೊಳ್ಳುವ ಪ್ರವೃತ್ತಿ ಬೆಳೆಯುತ್ತಿದೆ. ಅದರಲ್ಲೂ ಹೆಣ್ಣು ಮಕ್ಕಳಲ್ಲಿ ಆತ್ಮಹತ್ಯೆ ಪಿಡುಗು ಹೆಚ್ಚಾಗುತ್ತಿದೆ. ಇದನ್ನು ದಿಟ್ಟತನದಿಂದ ಹೆದರಿಸುವ ಮನಸ್ಥಿತಿಯನ್ನು ಬೆಳೆಸಿಕೊಳ್ಳುವಂತೆ ಮಕ್ಕಳಲ್ಲಿ ಸ್ಫೂರ್ತಿ ತುಂಬಬೇಕು ಎಂದರು.

ಈ ವೇಳೆ ಶಾಲೆಯ ನೂತನ ಗ್ರಂಥಾಲಯ ಮತ್ತು ವಿಜ್ಞಾನ ಪ್ರಯೋಗಾಲಯವನ್ನು ಡಾ.ಡಿ.ಮಾದೇಗೌಡ ಉದ್ಘಾಟಿಸಿದರು. ಸಮಾರಂಭದಲ್ಲಿ ಡಾ.ಡಿ.ಮಾದೇಗೌಡ ಸೇವಾ ಪ್ರತಿಷ್ಠಾನದ ಪ್ರಧಾನಕಾರ್ಯದರ್ಶಿ ಕುಂಬಾರಕೊಪ್ಪಲು ದಿನೇಶ್, ಕನ್ನಿಕಾ ಕಾವೇರಿ ಶಾಲೆಯ ಅಧ್ಯಕ್ಷ ಲೋಕೇಶ್ ಅಪ್ಪಣ್ಣ, ಕಾರ್ಯದರ್ಶಿ ಶ್ರೀಮತಿ ಎಂ.ಸಿ.ಚೋಂದಮ್ಮ, ಮುಖ್ಯೋಪಾಧ್ಯಾಯಿನಿ ಕೆ.ಎ.ಮನೋರಮ, ಗ್ರಂಥಾಲಯ ಮುಖ್ಯಸ್ಥ ವಿ.ಪ್ರಶಾಂತ್ ಮತ್ತು ವಿಜ್ಞಾನ ಪ್ರಯೋಗಾಲಯದ ನಿರ್ವಾಹಕಿ ಶ್ರೀಮತಿ ಹೇಮಲತಾ ಉಪಸ್ಥಿತರಿದ್ದರು.

ಸಂಚಾರಿ ನಿಯಮ ಉಲ್ಲಂಘನೆ, ಫುಟ್‌ಪಾತ್ ಒತ್ತುವರಿ ಸಂಬಂಧ ಕ್ರಮ ಕೈಗೊಳ್ಳದ ಬಗ್ಗೆ ಎಂಜಿಪಿ ಅಸಮಾಧಾನ

ಸಂಚಾರಿ ನಿಯಮ ಉಲ್ಲಂಘನೆಯ ಬಾಕಿ ವಸೂಲಿಗೆ ಕ್ರಮ


ಸಂಚಾರಿ ನಿಯಮ ಉಲ್ಲಂಘನೆ, ಫುಟ್‌ಪಾತ್ ಒತ್ತುವರಿ ಸಂಬಂಧ ಎಂಜಿಪಿ ಕಚೇರಿಯಲ್ಲಿ ಭಾನುವಾರ ಸಭೆ ಜರುಗಿತು

ಮೈಸೂರು, ಜೂ.14(ಎಸ್‌ಪಿಎನ್)– ಸಂಚಾರಿ ನಿಯಮ ಉಲ್ಲಂಘಿಸುವವರು, ಫುಟ್‌ಪಾತ್ ಒತ್ತುವರಿ ಮಾಡಿಕೊಳ್ಳುವವರ ವಿರುದ್ಧ ಪೊಲೀಸ್ ಇಲಾಖೆ ಮತ್ತು ಮೈಸೂರು ನಗರ ಪಾಲಿಕೆ ಪರಿಣಾಮಕಾರಿಯಾಗಿ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಎಂಜಿಪಿ ಬೇಸರ ವ್ಯಕ್ತಪಡಿಸಿದೆ.

ಮೈಸೂರಿನ ಯಾದವಗಿರಿಯಲ್ಲಿರುವ ಮೈಸೂರು ಗ್ರಾಹಕ ಪರಿಷತ್ ಕಚೇರಿ ಆವರಣದಲ್ಲಿ ಭಾನುವಾರ ನಡೆದ ಮಾಸಿಕ ಸಾಮಾನ್ಯ ಸಭೆಯಲ್ಲಿ ಈ ವಿಷಯ ಪ್ರಸ್ತಾಪಗೊಂಡಿತು. ಜೊತೆಗೆ ಸಂಚಾರಿ ನಿಯಮ ಉಲ್ಲಂಘಿಸಿದ ಪ್ರಕರಣದಲ್ಲಿ ಬಾಕಿ ಉಳಿದಿರುವ 412 ಕೋಟಿ ರೂ. ದಂಡದ ಮೊತ್ತ ವಸೂಲಿಯನ್ನು ಖಾಸಗಿ ಸಂಸ್ಥೆ (ಎನ್‌ಜಿಓ)ಗಳಿಗೆ ನೀಡಬೇಕೆಂದು ಆಗ್ರಹಿಸಲಾಯಿತು.

ಸಂಚಾರಿ ನಿಯಮ ಉಲ್ಲಂಘಿಸಿ ಹಲವು ವರ್ಷಗಳಿಂದ ಬಾಕಿ ಉಳಿಸಿಕೊಂಡಿರುವ 412 ಕೋಟಿ ರೂ.ದಂಡ ವಸೂಲಿಗೆ ಪೊಲೀಸ್ ಇಲಾಖೆ ಮುಂದಾಗುತ್ತಿಲ್ಲ ಎಂದು ಎಂಜಿಪಿ ಸಂಸ್ಥಾಪಕ ಸದಸ್ಯ ಬಾಮೀ ವಿ.ಶೆಣೈ ಬೇಸರ ವ್ಯಕ್ತಪಡಿಸಿದರು. ಇದಕ್ಕೆ ಉತ್ತರಿಸಿದ ಸಂಚಾರಿ ವಿಭಾಗದ ಎಸಿಪಿ ಶಿವಶಂಕರ್, ಈಗಾಗಲೇ ದಂಡದ ಮೊತ್ತದ ವಸೂಲಿಗೆ ವಿಶೇಷ ಕಾರ್ಯಾಚರಣೆ ನಡೆಸಿ, ಜನರಲ್ಲಿ ಸಂಚಾರ ನಿಯಮದ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ. ಸರ್ಕಾರವೇ ದಂಡದ ಮೊತ್ತ ಪಾವತಿಸಲು ಶೇ.50ರಷ್ಟು ಹಣ ವಿನಾಯ್ತಿ ನೀಡಿದೆ. ಆದರೂ ಜನ ದಂಡದ ಮೊತ್ತವನ್ನು ಕಟ್ಟಲು ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಮುಖ ವೃತ್ತಗಳಲ್ಲಿ ಸಂಚಾರಿ ಪೊಲೀಸರನ್ನು ಕಂಡರೆ ಮಾತ್ರ ಸಂಚಾರಿ ನಿಯಮ ಪಾಲನೆ ಮಾಡಬೇಕು. ಇಲ್ಲದಿದ್ದರೆ ಉಲ್ಲಂಘನೆ ಮಾಡಿದರೂ ನಡೆಯುತ್ತದೆ ಎನ್ನುವ ಮನಸ್ಥಿತಿಯಿಂದ ಜನರು ಹೊರಬೇಕು. ಪಕ್ಕದ ಶ್ರೀಲಂಕಾ, ಭೂತಾನ್, ಥೈಲ್ಯಾಂಡ್, ಸಿಂಗಾಪುರ್ ಸೇರಿದಂತೆ ಇತರೆ ದೇಶದಲ್ಲಿ ಸಂಚಾರ ನಿಯಮ ಉಲ್ಲಂಘನೆ ಮಾಡಲು ಸವಾರರು ನೂರು ಬಾರಿ ಯೋಚಿಸುತ್ತಾರೆ. ಆದರೆ, ನಮ್ಮ ದೇಶದ ಜನ ಸಂಚಾರ ನಿಯಮ ಉಲ್ಲಂಘನೆ ಎಂದರೆ ತುಂಬಾ ಸಲೀಸು ಎಂಬಂತೆ ವರ್ತಿಸುತ್ತಿರುವುದು ಬೇಸರದ ಸಂಗತಿ ಎಂದರು.

ಮೈಸೂರಿನ ಸಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತ, ಜಯಲಕ್ಷ್ಮಿಪುರಂನ ಕಾಳಿದಾಸ ರಸ್ತೆ, ವಿಜಯನಗರ 2ನೇ ಹಂತದ ಅಭಿಷೇಕ್ ಸರ್ಕಲ್, ಶಾರದಾದೇವಿ ನಗರದ ಮೈಸೂರು ದಿಗಂತ್ ವೃತ್ತ, ರಾಮಕೃಷ್ಣನಗರ ವೃತ್ತ ಹಾಗೂ ಕನಕದಾಸನಗರ ವೃತ್ತ, ವಿವೇಕಾನಂದ ಸರ್ಕಲ್, ಮಹದೇವಪುರ ರಸ್ತೆ, ಅಗ್ರಹಾರ ವೃತ್ತ, ಗಾಂಧಿಚೌಕ ಸೇರಿದಂತೆ ಇತರೆಡೆ ಫುಟ್‌ಪಾತ್ ಒತ್ತುವರಿ ತೆರವುಗೊಳಿಸಲು ಪೊಲೀಸ್ ಇಲಾಖೆ, ಮೈಸೂರು ನಗರಪಾಲಿಕೆ ಅಧಿಕಾರಿಗಳು ಜಂಟಿ ಕಾರ್ಯಾಚರಣೆ ನಡೆಸಿ, ಪಾದಚಾರಿಗಳ ಓಡಾಟಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಪೊಲೀಸರು ಮತ್ತು ಪಾಲಿಕೆ ಅಧಿಕಾರಿಗಳಲ್ಲಿ ಭಾಮಿ ವಿ.ಶೆಣೈ ಮನವಿ ಮಾಡಿದರು.

ಸಭೆಯಲ್ಲಿ ವಿವಿ ಸಂಚಾರ ಠಾಣೆಯ ಇನ್ಸ್‌ಪೆಕ್ಟರ್ ಮಮತಾ, ಎಸ್‌ಐ ಮೋಹನ್, ವಲಯ ಕಚೇರಿ –4ರ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಜೂನಿಯರ್ ಇಂಜಿನಿಯರ್ ಕವಿತಾ, ಮೈಗ್ರಾಪ ಅಧ್ಯಕ್ಷ ರಾಯ್ ಜೋಸೆಫ್, ಕಾರ್ಯಾಧ್ಯಕ್ಷ ಎಸ್.ಕೆ.ದಿನೇಶ್, ಟಿ.ಆರ್. ರವೀಂದ್ರ, ಸದಸ್ಯರಾದ ಶೈಲಜೇಶ್, ವಿಶ್ವನಾಥ್, ಶೋಭನ ಸಾಂಭಶಿವನ್, ಸಂಚಾಲಕರಾದ ಡಿ.ವಿ.ದಯಾನಂದಸಾಗರ್, ಕೆ.ವಿ.ಬಾನು ಪ್ರಶಾಂತ್, ಸಹಕಾರ್ಯದರ್ಶಿ ಪ್ರಭಾ ನಂದೀಶ್, ಎಂ.ಹರ್ಷಿತಾ, ಅಭಿಷೇಕ್, ಪಿ.ಪಲ್ಲವಿ, ಎಸ್.ಸುಮಿತ್ರ, ವಸಂತ್ ಕುಮಾರ್ ಮೈಸೂರ್‌ಮಠ್, ಸಿ.ತುಳಸಿರಾಮನ್, ಪಿ.ರಾಕೇಶ್, ಎಸ್.ಮಧುಕೇಶ್ವರ್ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು, ಜೂ.14– 2026–27ನೇ ಶೈಕ್ಷಣಿಕ ಸಾಲಿನ ಲ್ಯಾಟರಲ್ ಎಂಟ್ರಿ ಹಾಗೂ ಡಿಪ್ಲೋಮಾ ಕೋರ್ಸುಗಳ ಪ್ರವೇಶಕ್ಕಾಗಿ ಸರ್ಕಾರಿ ಸಿ.ಪಿ.ಸಿ. ಪಾಲಿಟೆಕ್ನಿಕ್, ಮೈಸೂರು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಆಟೋಮೊಬೈಲ್, ಸಿವಿಲ್, ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್, ಮೆಕ್ಯಾನಿಕಲ್ ಹಾಗೂ ಮಷಿನ್ ಟೂಲ್ ಟೆಕ್ನಾಲಜಿ ಸೇರಿದಂತೆ ವಿವಿಧ ಇಂಜಿನಿಯರಿಂಗ್ ಕೋರ್ಸುಗಳ ದ್ವಿತೀಯ ವರ್ಷದ ಲ್ಯಾಟರಲ್ ಎಂಟ್ರಿ ಪ್ರವೇಶಕ್ಕೆ ಅಭ್ಯರ್ಥಿಗಳು ಜೂನ್ 20, 2026ರೊಳಗೆ ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.

ಅರ್ಹ ಅಭ್ಯರ್ಥಿಗಳಿಗೆ ಪ್ರಾಂಶುಪಾಲರ ಹಂತದಲ್ಲಿ ನೇರ ಪ್ರವೇಶ ನೀಡಲಾಗುವುದು. ಜೊತೆಗೆ, ನಾನ್–ಇಂಜಿನಿಯರಿಂಗ್ ವಿಭಾಗದ ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟಿಸ್ (ಕನ್ನಡ) ಹಾಗೂ (ಇಂಗ್ಲಿಷ್) ಕೋರ್ಸುಗಳ ಉಳಿಕೆ ಸೀಟುಗಳಿಗೂ ನೇರ ಪ್ರವೇಶ ಅವಕಾಶ ಕಲ್ಪಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಅಭ್ಯರ್ಥಿಗಳು ಸರ್ಕಾರಿ ಸಿ.ಪಿ.ಸಿ. ಪಾಲಿಟೆಕ್ನಿಕ್, ಮೈಸೂರು ಕಚೇರಿಯನ್ನು ಸಂಪರ್ಕಿಸಬಹುದು ಅಥವಾ https://dtek.karnataka.gov.in ನಲ್ಲಿ ವಿವರ ಪಡೆಯಬಹುದಾಗಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಡಾಕ್ಟರ್ : ಗುಂಡನನ್ನು ಪರೀಕ್ಷಿಸುತ್ತಾ: ನಿಮಗೆ ಮದುವೆ ಆಗಿದೆಯಾ?
ಗುಂಡ : ಹೂಂ ಹುಡುಗಿ ಜೊತೆ ಆಗಿದೆ.
ಡಾಕ್ಟರ್ : ಎಲ್ಲರಿಗೂ ಹುಡುಗಿ ಜೊತೆನೇ ಆಗೋದು.
ಗುಂಡ : ಇಲ್ಲ... ನನ್ನ ತಂಗಿಗೆ ಹುಡುಗನ ಜೊತೆ ಆಗಿದೆ.

ಮೈಸೂರು ಮಿತ್ರ
ಸೋಮವಾರ, ಜೂನ್ 15, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಒಳ್ಳೆಯ ಹೃದಯ ಮತ್ತು ಒಳ್ಳೆಯ ಚಿಂತನೆಗಳು ಜೀವನದ ನಿಜವಾದ ಸಂಪತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ದುರ್ಭಿಕ್ಷಾ ಕಾಲದಲ್ಲಿ ಅಧಿಕ ಮಾಸ

ನಿಮ್ಮ ಪತ್ರಗಳು

ಸರ್ಕಾರಿ ಶಾಲೆಯಲ್ಲಿ ಸರ್ಕಾರಿ ನೌಕರರ ಮಕ್ಕಳ ಸೇರಿಸುವ ಕಾಯ್ದೆ ಜಾರಿಯಾಗಲಿ

ಮಾನ್ಯರೆ,

ಸರ್ಕಾರಿ ಶಾಲೆಗಳಿಗೆ ಮಕ್ಕಳು ಬರುತ್ತಿಲ್ಲ ಅಂತ ನೆಪ ಹೇಳಿ ಸರ್ಕಾರಿ ಶಾಲೆಗಳ ಮುಚ್ಚುತ್ತಿದೆ ಎಂದು ಹೇಳಿಕೊಳ್ಳಲಾಗುತ್ತಿದೆ. ಆದರೆ ಕೆಲವು ಸರ್ಕಾರಿ ನೌಕರರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸುತ್ತಿರುವುದು ಇದಕ್ಕೆ ಕಾರಣ.

ಈ ಸರ್ಕಾರಿ ನೌಕರರೆಲ್ಲರೂ ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿದರೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಬಹುದು. ಇದರಿಂದ ಶಾಲೆಗಳ ಉನ್ನತೀಕರಣ ಆಗಬಹುದು. ಸರ್ಕಾರಿ ನೌಕರರು ಸರ್ಕಾರದಿಂದ ಪ್ರತಿಯೊಂದು ಸೌಲಭ್ಯವನ್ನು ಮತ್ತು ಜೀವನವನ್ನು ಸುರಕ್ಷಿತವಾಗಿಡಲು ಸರ್ಕಾರಿ ನೌಕರಿಯೇ ಕಾರಣ. ಇದರಿಂದ ತಮ್ಮ ಜೀವನದ ಭದ್ರಬುನಾದಿಯನ್ನು ರೂಪಿಸಿಕೊಳ್ಳುತ್ತಾರೆ.

(ನಾವು ಶ್ರಮಪಟ್ಟು ಕೆಲಸ ಮಾಡುವುದಕ್ಕೆ ಸರ್ಕಾರ ನನಗೆ ಕೆಲಸ ಕೊಟ್ಟಿದೆ ಎನ್ನಬಹುದು. ಆದರೆ ವೃತ್ತಿ ಪ್ರೇಮ ಮತ್ತು ಅವಿನಾಭಾವ ಸಂಬಂಧ ಇರಬೇಕಲ್ಲವೇ)

ಅವರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಲು ಹಿಂಜರಿಯುತ್ತಾರೆ. ಸರ್ಕಾರಿ ಶಾಲೆ ಉಳಿಸಲು ಸರ್ಕಾರ ಅನೇಕ ಕಾರ್ಯಕ್ರಮ ರೂಪಿಸಿದರೂ ಸರ್ಕಾರಿ ಶಾಲೆಗೆ ಬರುವವರ ಸಂಖ್ಯೆ ಕಡಿಮೆಯಾಗಿದೆ. ಎಷ್ಟೋ ಸರ್ಕಾರಿ ನೌಕರರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಸೇರಿಸಲು ಮುಂದಾಗುತ್ತಾರೆ. ತಮ್ಮ ಬದುಕನ್ನು ಸುರಕ್ಷಿತವಾಗಿಡಲು ಸಹಕರಿಸಿದ ಸರ್ಕಾರಕ್ಕೆ ತಮ್ಮ ಮಕ್ಕಳನ್ನು ಸರಕಾರಿ ಶಾಲೆಗೆ ಸೇರಿಸಲು ಮನಸ್ಸು ಮಾಡದ ನೌಕರರಿಗೆ ಸರ್ಕಾರಿ ನೌಕರರ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವ ಕಾಯ್ದೆ ರೂಪಿಸಿ. ಸರ್ಕಾರ ಶಾಲೆ ಉಳಿಸಿ ಬೆಳೆಸಲಿ. –ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಕಡೆಗೂ ಬಂತು ದೊಡ್ಡಣ್ಣನಿಗೆ ಬುದ್ಧಿ!

ಮಾನ್ಯರೆ,

ಪಶ್ಚಿಮ ಏಷ್ಯಾ ಸಂಘರ್ಷ ತಣಿಸಲು ನಡೆಯುತ್ತಿರುವ ರಾಜತಾಂತ್ರಿಕ ಪ್ರಯತ್ನಗಳ ನಡುವೆ ಇರಾನ್ ವಿರುದ್ಧ ಸೇನಾ ಕಾರ್ಯಾಚರಣೆ ಮುಂದುವರೆಸಿದರೆ, ಇಸ್ರೇಲ್ ಏಕಾಂಗಿಯಾಗಲಿದೆ ಎಂಬ ಎಚ್ಚರಿಕೆಯನ್ನು ತನ್ನ ಜಿಗ್ರಿ ದೋಸ್ತಿ ಇಸ್ರೇಲಿಗೆ ನೀಡಿರುವ ಅಮೇರಿಕಾದ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಕಡೆಗೂ ಬುದ್ಧಿ ಬಂದ ಹಾಗಿದೆ. ಇಸ್ರೇಲ್ ಪ್ರಧಾನಿ ನೆತನ್ಯಾಹು ವಿರುದ್ಧ ತೀಕ್ಷವಾದ ವಾಗ್ದಾಳಿ ನಡೆಸಿರುವ ಟ್ರಂಪ್, ಸಂಧಾನ ಮಾತುಕತೆಯನ್ನು ಹಳ್ಳ ಹಿಡಿಸುವಂತಹ ಯಾವುದೇ ಮಾತುಕತೆಗಳು ಇಸ್ರೇಲ್ ಅನ್ನು ಒಂಟಿಯಾಗಿ ಮಾಡಲಿದೆ ಎಂದು ಹೇಳುವ ಮೂಲಕ ಇಸ್ರೇಲ್ ಪ್ರಧಾನಿ ನೆತನ್ಯಾಹುಗೆ ಗಂಭೀರ ಎಚ್ಚರಿಕೆ ನೀಡಿದ್ದಾರೆ. ಇತ್ತೀಚಿನ ವರದಿಗಳ ಪ್ರಕಾರ ಮಧ್ಯಪ್ರಾಚ್ಯ ಸಂಘರ್ಷ ಕೊನೆಗೊಳಿಸಲು ಇರಾನ್ ಜೊತೆ ಮುಂದಿನ ಎರಡು ದಿನಗಳಲ್ಲಿ ಒಪ್ಪಂದ ಅಂತಿಮಗೊಳ್ಳಲಿದೆ ಎಂಬ ಟ್ರಂಪ್ ಅವರ ಹೇಳಿಕೆ ಆಶಾದಾಯಕವಾಗಿದೆ. ಆ ಇಸ್ರೇಲ್ ಪ್ರಧಾನಿ ನೆತನ್ಯಾಹು ಮಾತು ಕೇಳಿಕೊಂಡು ಇರಾನ್ ವಿರುದ್ಧ ಯುದ್ಧ ಪ್ರಾರಂಭಿಸಿದ ಈ ಟ್ರಂಪ್ ಅವರಿಗೆ ಕಡೆಗೂ ತಮ್ಮ ತಪ್ಪು ಅರಿವಾಗಿರುವುದು ಸ್ವಾಗತಾರ್ಹವಾಗಿದ್ದು. ಇಡೀ ವಿಶ್ವಾದ್ಯಂತ ತಲ್ಲಣ ಸೃಷ್ಟಿಸಿರುವ ಈ ಯುದ್ಧ ಆದಷ್ಟು ಬೇಗ ಕೊನೆಗೊಳ್ಳಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ನೇರಳೆ ಅಭಿವೃದ್ಧಿಗೆ ಸರ್ಕಾರ ಸಹಕರಿಸಲಿ

ಮಾನ್ಯರೇ,



ನೇರಳೆ ಹಣ್ಣಿನ ಬೀಜಗಳ ಅತ್ಯದ್ಭುತ ಔಷಧೀಯ ಮೌಲ್ಯವನ್ನು ಪರಿಗಣಿಸಿ ಸರ್ಕಾರವು ಇವುಗಳ ಸಂರಕ್ಷಣೆ ಮತ್ತು ಮೌಲ್ಯವರ್ಧನೆಗೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ. ಮೊದಲನೆಯದಾಗಿ ತೋಟಗಾರಿಕಾ ಇಲಾಖೆಯು ರೈತರು ಮತ್ತು ಸಣ್ಣ ವ್ಯಾಪಾರಿಗಳಿಂದ ನೇರಳೆ ಬೀಜಗಳನ್ನು ನ್ಯಾಯಯುತ ಬೆಲೆಗೆ ನೇರವಾಗಿ ಖರೀದಿಸಲು ಗ್ರಾಮೀಣ ಭಾಗಗಳಲ್ಲಿ ಅಧಿಕೃತ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಬೇಕು. ಇವುಗಳಲ್ಲಿನ ಪ್ರಬಲ ಔಷಧೀಯ ಗುಣಗಳಿಂದಾಗಿ ಮಧುಮೇಹ ನಿಯಂತ್ರಣಕ್ಕೆ ದೇಶೀಯವಾಗಿ ಗುಣಮಟ್ಟದ 'ಬೀಜದ ಪುಡಿ' ತಯಾರಿಸಲು ಸಣ್ಣ ಕೈಗಾರಿಕೆಗಳಿಗೆ ಸರ್ಕಾರವು ಆರ್ಥಿಕ ಸಬ್ಸಿಡಿ ಮತ್ತು ತಾಂತ್ರಿಕ ತರಬೇತಿ ನೀಡಬೇಕು. ಆಯುಷ್ ಸಚಿವಾಲಯದ ಮೂಲಕ ಜಾಗತಿಕ ಮಾರುಕಟ್ಟೆಗೆ ಇದರ ರಫ್ತು ಉತ್ತೇಜಿಸಬೇಕು. ಅಲ್ಲದೆ ಕೇವಲ 3ರಿಂದ 4 ವರ್ಷಗಳಲ್ಲಿ ಇಳುವರಿ ನೀಡುವ ಸುಧಾರಿತ ಕಸಿ ಸಸಿಗಳನ್ನು ಉಚಿತವಾಗಿ ವಿತರಿಸುವ ಮೂಲಕ ಸರ್ಕಾರವು ರೈತರ ಆದಾಯವನ್ನು ದ್ವಿಗುಣಗೊಳಿಸಬಹುದು. –ಡಾ.ವಿಜಯಕುಮಾರ್ ಎಚ್.ಕೆ., ಮೈಸೂರು.

ರಕ್ತದಾನದ ಬಗ್ಗೆ ಜಾಗೃತಿ ಮೂಡಿಸಲಿ

ಮಾನ್ಯರೆ,



ಜೂನ್ 14ರಂದು ರಕ್ತದಾನದ ದಿನ ಆ ದಿನದಲ್ಲಿ ರಕ್ತದಾನದ ಬಗ್ಗೆ ತಿಳಿದುಕೊಂಡರೆ ಸಾಕೇ ಖಂಡಿತ ಇಲ್ಲ. ಜೂನ್ 14ರಂದು ರಕ್ತ ದಾನದ ದಿನ ಎಂದು ಎಷ್ಟೋ ಜನರಿಗೆ ತಿಳಿದಿಲ್ಲ. ನಮ್ಮ ರಕ್ತ ಮತ್ತೊಬ್ಬರ ಜೀವ ಉಳಿಸಲು ಸಹಾಯವಾಗುತ್ತದೆ. ಗಂಡು ಮಕ್ಕಳು ಮೂರು ತಿಂಗಳಿಗೊಮ್ಮೆ ಹೆಣ್ಣು ಮಕ್ಕಳು ನಾವು ತಿಂಗಳಿಗೊಮ್ಮೆ ಮಾಡಬಹುದು. ರಕ್ತದಾನದ ಬಗ್ಗೆ ಅರಿವು ಶಾಲಾ ಕಾಲೇಜು ಮಟ್ಟದಲ್ಲಿ ಪ್ರಾರಂಭಿಸಬೇಕು. ವಿಡಿಯೋ, ರೇಡಿಯೋ, ಪೇಪರ್ ದೂರದರ್ಶನದಲ್ಲಿ ಪ್ರತಿನಿತ್ಯ ರಕ್ತದಾನದ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬೇಕು. ನಾವು ರಕ್ತದಾನ ಮಾಡಿದಷ್ಟು ನಮ್ಮ ದೇಹದಲ್ಲಿ ರಕ್ತ ಶುದ್ಧೀಕರಿಸಲ್ಪಡುತ್ತದೆ ರಕ್ತದಾನದ ಬಗ್ಗೆ ಪ್ರತಿಯೊಬ್ಬರಲ್ಲಿ ಜಾಗೃತಿ ಮೂಡಿಸಿ ಮತ್ತೊಂದು ಜೀವದ ಉಳಿವಿಗೆ ಕಾರಣರಾಗಬೇಕು. ಶಾಲೆಗೆ ಸೇರುವಾಗ ಆಧಾರ್ ಕಾರ್ಡ್‌ನಲ್ಲಿ ಪಾಸ್ ಬುಕ್‌ಗಳಲ್ಲಿ ನಮ್ಮ ರಕ್ತದ ಗುಂಪು ಯಾವುದೆಂದು ತಿಳಿಸಿರಬೇಕು ನಮ್ಮ ರಕ್ತದ ಗುಂಪು ಯಾವುದೆಂದು ತಿಳಿದಿದ್ದರೆ ದಾನ ಮಾಡಿದರು ಸರಿ ಅಥವಾ ರಕ್ತ ಪಡೆದುಕೊಳ್ಳುವಾಗ ರಕ್ತದ ಗುಂಪು ತಿಳಿದಿ ದ್ದರೆ ಕ್ಷಣಮಾತ್ರದಲ್ಲಿ ಅನಾನುಕೂಲವನ್ನು ತಪ್ಪಿಸಬಹುದು ರಕ್ತದಾನದ ಬಗ್ಗೆ ರೈಲ್ವೆ ಸ್ಟೇಷನ್, ಬಸ್ ಸ್ಟ್ಯಾಂಡ್ ಪ್ರತಿಯೊಂದು ಕಡೆ ಅದರ ಪ್ರಯೋಜನವನ್ನು ತಿಳಿಸಬೇಕು. ಇದರಿಂದ ಎಷ್ಟೋ ಜನರ ಉಳಿವಿಗೆ ಕಾರಣವಾಗುತ್ತದೆ.

–ಎಂ.ಎಸ್.ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಬದುಕಿನ ಯಶಸ್ಸಿಗೆ ಗಳಿಸಿದ್ದನ್ನು ಉಳಿಸಿಕೊಳ್ಳೋಣ

ಅವನೇ ಮಾತನಾಡಿಸಬಹುದಿತ್ತಲ್ಲ; ಚಿಕ್ಕವನಾಗಿ ಅವನಿಗೇ ಅಷ್ಟು ಕೋಪ, ಜಂಭ ಇರಬೇಕಾದರೆ ನನಗೆಷ್ಟು ಇರಬೇಡ? ಆತ್ಮೀಯ, ಒಡನಾಡಿ, ಗೆಳೆಯ, ಸಂಬಂಧಿಯಾಗಿದ್ದವನು ಇದ್ದಕ್ಕಿದ್ದಂತೆ ಮೌನವಾಗಿ ದೂರ ಉಳಿದಾಗ ಮನದಲ್ಲಿ ಮೂಡಿನಿಂತ ಪ್ರಶ್ನೆಗಳು ಮನುಷ್ಯನ ಆಳ್ತನದಲ್ಲಿ ಹುದುಗಿರುವ ಸಣ್ಣತನದ ಪರಿಚಯವನ್ನು ಮಾಡಿಕೊಟ್ಟಿತು.

ಮಾನವ ಜೀವನವು ಅನೇಕ ಅನುಭವಗಳು, ಸಂಬಂಧಗಳು, ಮೌಲ್ಯಗಳು ಮತ್ತು ಸಾಧನೆಗಳ ಸಂಕಲನವಾಗಿದೆ. ಈ ಎಲ್ಲವನ್ನೂ ಗಳಿಸಿಕೊಳ್ಳಲು ಅಪಾರವಾದ ಶ್ರಮ, ಸಮಯ, ತಾಳ್ಮೆ ಮತ್ತು ಸಮರ್ಪಣೆ ಅಗತ್ಯವಾಗಿರುತ್ತದೆ. ಆದರೆ, ಅವುಗಳನ್ನು ಕಳೆದುಕೊಳ್ಳಲು ಕೆಲವೊಮ್ಮೆ ಒಂದು ಕ್ಷಣದ ಅಜಾಗರೂಕತೆ, ಒಂದು ತಪ್ಪು ನಿರ್ಧಾರ ಅಥವಾ ಒಂದು ದುರ್ಬುದ್ಧಿಯೇ ಸಾಕಾಗುತ್ತದೆ. ಆದ್ದರಿಂದಲೇ 'ಗಳಿಸಿಕೊಳ್ಳುವುದು ಕಷ್ಟ, ಕಳೆದುಕೊಳ್ಳುವುದು ಸುಲಭ' ಎಂಬ ಮಾತು ಜೀವನದ ಶಾಶ್ವತ ಸತ್ಯವನ್ನು ಪ್ರತಿಬಿಂಬಿಸುತ್ತದೆ.

ವಿಶ್ವಾಸ, ಗೌರವ, ಸ್ನೇಹ, ಪ್ರೀತಿ, ಜ್ಞಾನ, ಆರೋಗ್ಯ, ಸಂಪತ್ತು ಹಾಗೂ ಉತ್ತಮ ವ್ಯಕ್ತಿತ್ವ, ಇವುಗಳನ್ನು ಗಳಿಸಿಕೊಳ್ಳುವುದು ಸುಲಭ ಸಾಧ್ಯವಲ್ಲ. ನಿರಂತರ ಪರಿಶ್ರಮ, ಉತ್ತಮ ನಡವಳಿಕೆ ಮತ್ತು ಸತತ ಪ್ರಯತ್ನಗಳ ಮೂಲಕವೇ ಇವುಗಳನ್ನು ಸಂಪಾದಿಸಬಹುದು. ಆದರೆ ಒಮ್ಮೆ ಗಳಿಸಿದ ಈ ಅಮೂಲ್ಯ ಸಂಪತ್ತನ್ನು ಜಾಗರೂಕತೆಯಿಂದ ಕಾಪಾಡಿಕೊಳ್ಳದಿದ್ದರೆ ಅದು ಕ್ಷಣಾರ್ಧದಲ್ಲೇ ಕೈತಪ್ಪಿ ಹೋಗಬಹುದು. ವರ್ಷಗಳ ಕಾಲ ಕಟ್ಟಿದ ವಿಶ್ವಾಸವನ್ನು ಒಂದು ಸುಳ್ಳು ಮಾತು ಹಾಳುಮಾಡಬಹುದು; ದೀರ್ಘಕಾಲದ ಸ್ನೇಹವನ್ನು ಒಂದು ತಪ್ಪು ಅರ್ಥೈಸುವಿಕೆ ಮುರಿಯಬಹುದು; ಕಷ್ಟಪಟ್ಟು ಸಂಪಾದಿಸಿದ ಆರೋಗ್ಯವನ್ನು ಕೆಲವು ಕೆಟ್ಟ ಅಭ್ಯಾಸಗಳು ಹಾನಿಗೊಳಿಸಬಹುದು.

ಹೀಗಾಗಿ ಜೀವನದಲ್ಲಿ ಏನನ್ನಾದರೂ ಗಳಿಸುವುದಕ್ಕಿಂತ ಅದನ್ನು ಉಳಿಸಿಕೊಳ್ಳುವುದು ಮತ್ತು ಕಾಪಾಡಿಕೊಳ್ಳುವುದು ಇನ್ನೂ ಹೆಚ್ಚಿನ ಜವಾಬ್ದಾರಿಯ ಕೆಲಸವಾಗಿದೆ. ನಾವು ಗಳಿಸಿದ ಮೌಲ್ಯಗಳು, ಸಂಬಂಧಗಳು ಮತ್ತು ಸಾಧನೆಗಳ ಮಹತ್ವವನ್ನು ಅರಿತು ಅವುಗಳನ್ನು ಸಂರಕ್ಷಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಈ ನಿಟ್ಟಿನಲ್ಲಿ 'ಗಳಿಸಿಕೊಳ್ಳುವುದು ಕಷ್ಟ, ಕಳೆದುಕೊಳ್ಳುವುದು ಸುಲಭ' ಎಂಬ ಸಾಲು ವ್ಯಕ್ತಿಯ ಬದುಕಿಗೆ ಅಮೂಲ್ಯವಾದ ಜೀವನಪಾಠವನ್ನು ನೀಡುತ್ತದೆ.

ಜೀವನದಲ್ಲಿ ಏನು ಬೇಕಾದರೂ ಪಡೆಯಲು ಸಾಧ್ಯವಿದೆ. ಆದರೆ ಅದಕ್ಕೆ ಅಗಾಧವಾದ ಪರಿಶ್ರಮ, ಸಮಯ, ಸತತ ಪ್ರಯತ್ನ ಬೇಕಾಗಿರುತ್ತದೆ. ಅಸಾಧ್ಯವಾದುದನ್ನು ಸಾಧ್ಯವಾಗಿಸಿಕೊಳ್ಳಬಹುದು. ಆದರೆ ಸಾಧಿಸಿದ್ದನ್ನು ಉಳಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಹಾಗಾಗಿಯೇ ಹೇಳುವುದು ಗಳಿಸಿಕೊಳ್ಳುವುದು ಕಷ್ಟ. ಕಳೆದುಕೊಳ್ಳುವುದು ಸುಲಭ ಎಂದು. ಸಂಬಂಧ, ಪ್ರೀತಿ, ಅಧಿಕಾರ, ಹಣ, ಪದವಿ, ಶಿಕ್ಷಣ, ನಡವಳಿಕೆ, ಸಂಸ್ಥೆ ಹೀಗೆ ಯಾವುದನ್ನಾಗಲೀ ಗಳಿಸಿಕೊಳ್ಳುವುದು ಕಷ್ಟ. ಆದರೆ ಕಳೆದುಕೊಳ್ಳುವುದು ಸುಲಭ.

ಸಂಬಂಧ: ಗಾಜು, ಕನ್ನಡಿಯಂತೆ ಸಂಬಂಧವೂ ಬಹಳ ನಾಜೂಕು. ಅಪ್ಪಿತಪ್ಪಿ ಕೊಂಚ ಎಚ್ಚರ ತಪ್ಪಿದರೂ ಸಂಬಂಧದಲ್ಲಿ ಬಿರುಕು ಬಿಡುವುದಂತು ನಿಶ್ಚಿತ. ಹಾಗಾಗಿ ಸಂಬಂಧವನ್ನು ಗಳಿಸಿಕೊಳ್ಳುವಾಗ ಅಥವಾ ಸಂಬಂಧವನ್ನು ಗಟ್ಟಿಗೊಳ್ಳಿಸುವಾಗ ಪಡುವ ಪಾಡಂತೂ ಅನುಭವಿಸಿದವರಿಗೆ ಗೊತ್ತು. ಸಂಬಂಧ ಯಾವುದೇ ಆಗಿರಲಿ ಅದನ್ನು ಭದ್ರಪಡಿಸಿಕೊಳ್ಳುವಾಗ, ನಂಬಿಕೆ ಬೆಳೆಸಿಕೊಂಡು ಮತ್ತಷ್ಟು ಸುರಕ್ಷಿತಪಡಿಸಿಕೊಳ್ಳುವಾಗ ಕಷ್ಟಪಡಬೇಕಾಗುತ್ತದೆ. ಅದಕ್ಕಾಗಿ ಸತತವಾಗಿ ಪರೀಕ್ಷೆಗೆ ಒಳಪಡುವ ಸಂದರ್ಭವೇ ಏರ್ಪಡುತ್ತದೆ. ಅದೇ ಸಂಬಂಧ ಎಷ್ಟೇ ಗಟ್ಟಿಯಾಗಿದ್ದರೂ ಕೆಲವೊಮ್ಮೆ ಅದನ್ನು ಮಾತಿನ ಭರದಲ್ಲಿಯೋ, ಕ್ಷಣಿಕ ಕೋಪದ ಉದ್ವೇಗದಲ್ಲಿಯೋ, ಪರಿಸ್ಥಿತಿಯ ಕೈಗೊಂಬೆಗಳಾಗಿ ಮಾರ್ಪಟ್ಟು ಕಳೆದುಕೊಳ್ಳುವ ಅನಿವಾರ್ಯತೆಗೆ ಜಾರುತ್ತೇವೆ.

ಸಂಬಂಧ ಗಳಿಸಿಕೊಳ್ಳಬೇಕಾದಾಗ ಪಡುವಷ್ಟು ಕಷ್ಟ, ಅದನ್ನು ಕಳೆದುಕೊಳ್ಳಬೇಕಾದಾಗ ಇರುವುದಿಲ್ಲ. ಏಕೆಂದರೆ ಬೆಟ್ಟ, ಪರ್ವತ, ಮೆಟ್ಟಿಲು ಯಾವುದನ್ನೇ ಆಗಲೀ ಹತ್ತುವುದು ಕಷ್ಟ, ಇಳಿಯುವುದು ಸುಲಭವಲ್ಲವೇ? ಹಾಗೆಯೇ ಸಂಬಂಧದಲ್ಲಿ ಸಣ್ಣ ಭಿನ್ನಾಭಿಪ್ರಾಯನುಸುಳಿದರೂ ಅದು ಕುಟುಂಬದಲ್ಲಾಗಬಹುದು, ಗೆಳೆಯರಲ್ಲಾಗಬಹುದು, ಸಹದ್ಯೋಗಿಗಳಲ್ಲಾಗಬಹುದು ಯಾವುದೇ ಸಂಬಂಧವಾದರೂ ಬೃಹತ್ತಾದ ಹಡಗನ್ನು ಒಂದು ಸಣ್ಣ ರಂಧ್ರ ಮುಳುಗಿಸುವಂತೆ ಸಂಬಂಧಗಳಲ್ಲಿ ಮೂಡುವ ಬಿರುಕು ಅತ್ಯಂತ ಅಪಾಯಕಾರಿ. ಹಾಗಾಗದಂತೆ ಎಚ್ಚರಿಕೆ ವಹಿಸಿ ಸಂಬಂಧಗಳ ಮೌಲ್ಯಗಳನ್ನು ಉಳಿಸಿಕೊಳ್ಳುವುದು, ಬಿಡುವುದು ನಮ್ಮ ಕೈಯಲ್ಲಿಯೇ ಇರುತ್ತದೆ.

ನಂಬಿಕೆ: ಇದನ್ನು ಗಳಿಸಿಕೊಳ್ಳಲು ಹರಸಾಹಸಪಡಬೇಕು. ಆದರೆ, ಕಳೆದುಕೊಳ್ಳಲು ಸಣ್ಣತಪ್ಪು ಸಾಕಾಗಬಹುದು. ನಂಬಿಕೆ ಗಳಿಸಿಕೊಳ್ಳಲು ಕಾಲಮಿತಿಯೇ ಇರುವುದಿಲ್ಲ. ದಿನ, ವಾರ, ವರ್ಷಗಳೇ ಕಳೆದರೂ ನಂಬಿಕೆಯ ಮರ ಕೆಲವೊಮ್ಮೆ ಗಟ್ಟಿಯಾಗಿ ಬೇರೂರುವುದೇ ಇಲ್ಲ. ಒಂದು ಸಣ್ಣ ಮನಃಸ್ತಾಪ ಬಂದರೆ ಸಾಕು ಅಥವಾ ಒಂದಷ್ಟು ಸುಳ್ಳು ಸುದ್ದಿಗಳನ್ನು ಹರಡಿದರೆ ಸಾಕು ಅದು ಎಂತಹ ಹೆಮ್ಮರವಾದರೂ ಬುಡಸಮೇತ ಧರೆಗುರುಳಿಸುವಂತೆ ಮಾಡುತ್ತದೆ.

ಪ್ರಸ್ತುತ ದಿನಗಳಲ್ಲಿ ನಂಬಿಕೆ ಗಳಿಸಿಕೊಳ್ಳುವುದು ಗಗನ ಕುಸುಮವೇ ಆಗಿದೆ. ಯಾಂತ್ರೀಕರಣದ ಬದುಕಿನಿಂದಾಗಿ ಯಾರ ಮೇಲೆ ಯಾರಿಗೂ ನಂಬಿಕೆ ಉಳಿದಿರಲಾರದಂತಹ ವಿಷಮ ಪರಿಸ್ಥಿತಿ ಬಂದೊದಗಿದೆ. ಮೊದಲೆಲ್ಲಾ ಬರೀ ಮಾತಲ್ಲಿ ಹೇಳಿದರೂ ಅದಕ್ಕೆ ಮಹತ್ವವಿರುತ್ತಿತ್ತು. ಅವರು ಮಾತು ಕೊಟ್ಟಿದ್ದಾರೆ, ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಾರೆಂಬ ಭರವಸೆ ಇರುತ್ತಿತ್ತು. ಆದರೆ ಈಗ ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಛಾಪಾ ಕಾಗದ ಮಾಡಿಸಿದರೂ ತುಂಬಾ ಸುಲಭವಾಗಿ ನಂಬಿಕೆ ಕಳೆದುಕೊಳ್ಳುವಂತೆ ಮಾಡ ಬಹುದಾಗಿದೆ. ನನಗೆ ಈ ಮಾತನ್ನು ಹೇಳುವಾಗ ಹಿಂದೊಮ್ಮೆ ಕೇಳಿದ ಕಥೆಯೊಂದು ನೆನಪಿಗೆ ಬರುತ್ತಿದೆ.



> ಕಳೆದುಕೊಳ್ಳುವುದಕ್ಕಿಂತ ಉಳಿಸಿಕೊಳ್ಳುವ, ಭದ್ರಪಡಿಸಿಕೊಳ್ಳುವ ಮತ್ತಷ್ಟು, ಮಗದಷ್ಟು ಉತ್ತಮಪಡಿಸಿಕೊಳ್ಳುವ, ಕುಳಿತು ಮಾತನಾಡಿ ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡೋಣ. ಜೀವನದಲ್ಲಿ ದೊರೆತ ಪ್ರತಿಯೊಂದೂ ಕೂಡ ಶ್ರಮದ ಫಲ. ಗಳಿಸುವುದಕ್ಕಿಂತ ಅದನ್ನು ಉಳಿಸಿಕೊಳ್ಳುವ ಜವಾಬ್ದಾರಿ ದೊಡ್ಡದು. ಸಂಬಂಧವಾಗಲಿ, ನಂಬಿಕೆಯಾಗಲಿ, ಪ್ರೀತಿಯಾಗಲಿ, ಕಳೆದುಕೊಳ್ಳಲು ಕ್ಷಣಮಾತ್ರ ಸಾಕು. ಉಳಿಸಿಕೊಳ್ಳುವುದು ಬದುಕಿನ ಸಾಧನೆಯೇ ಸರಿ.

ಕಥೆ: ರಾಜನೊಬ್ಬ ಕುದುರೆ ಸವಾರಿ ಮಾಡುತ್ತಾ ಬರುತ್ತಿದ್ದನಂತೆ, ಅವನಿಗೆ ಮಾರ್ಗ ಮಧ್ಯೆ ಜನರಿಲ್ಲದ ಪ್ರದೇಶದಲ್ಲಿ ನಡೆಯಲಾಗದೇ ಕುಂಟುತ್ತಾ, ನರಳುತ್ತಾ ಆಯಾಸದಿಂದ ಪ್ರಯಾಣ ಮಾಡುತ್ತಿದ್ದ ಮನುಷ್ಯನೊಬ್ಬನನ್ನು ನೋಡಿದನು. ತಕ್ಷಣವೇ ರಾಜ ಕುದುರೆಯಿಂದ ಕೆಳಗಿಳಿದು ಆ ಪ್ರಯಾಣಿಕನ ಸಮಸ್ಯೆಯನ್ನು ವಿಚಾರಿಸಿದ. ಪ್ರಯಾಣಿಕ ನಡೆಯಲು ಸಾಧ್ಯವಾಗದಿರುವ ತನ್ನ ಅಸಹಾಯಕತೆಯನ್ನು ರಾಜನಿಗೆ ಹೇಳಿದನು. ಆಗ ರಾಜ ಚಿಂತಿಸದಿರು ನನ್ನ ಕುದುರೆ ಮೇಲೆ ಕುಳಿತುಕೊ, ನಾನು ನಿನ್ನ ಸ್ಥಳಕ್ಕೆ ಕರೆದ್ಯೊಯ್ಯುವೆನೆಂದು ಆಶ್ವಾಸನೆಯಿತ್ತು ತನ್ನ ಕುದುರೆಯ ಮೇಲೆ ಕೂರಿಸಿದನಂತೆ. ತಕ್ಷಣವೇ ಆ ಪ್ರಯಾಣಿಕ ಜೋರಾಗಿ ಕುದುರೆ ಸವಾರಿ ಮಾಡುತ್ತ, ತಾನೊಬ್ಬ ಕಳ್ಳನೆಂದು ರಾಜನಿದ್ದ ಕುದುರೆಯ ಕದಿಯಲು ಮೋಸ ಮಾಡಿದೆನೆಂದು ಗಹಗಹಿಸಿ ನಗುತ್ತಾನೆ. ಆಗ ರಾಜ ಈ ರೀತಿ ಕೂಗಿ ಆ ಕಳ್ಳನಿಗೆ ಹೇಳುತ್ತಾನೆ–'ಯಾರಿಗೂ ಅಸಹಾಯಕನಂತೆ ನಟನೆ ಮಾಡಿ ಕುದುರೆ ಕದ್ದೆನೆಂದು ಹೇಳಬೇಡ'.

ಪ್ರಯಾಣಿಕ ಸೋಗಿನಲ್ಲಿದ್ದ ಕಳ್ಳನಿಗೆ ರಾಜನ ಮಾತು ವಿಚಿತ್ರವೆನಿಸಿ ಮರಳಿ ಬಂದು ರಾಜ ಏಕೆ ಈ ರೀತಿ ಹೇಳಿದ್ದರ ಕಾರಣವೇನೆಂದು ಕೇಳಿದಾಗ ರಾಜ 'ನೋಡು ನೀನು ಅಸಹಾಯಕ ನಂತೆ ನಟನೆ ಮಾಡಿ ಕುದುರೆ ಕದ್ದ ಕಥೆ ಹೇಳಿದರೆ ಅದು ಒಬ್ಬರಿಂದ ಒಬ್ಬರಿಗೆ ತಲುಪಿ ನಿಜವಾಗಿ ಅಸಹಾಯಕರಾದವರಿಗೆ ಸಹಾಯ ಮಾಡಲು ಯಾರು ಮುಂದೆ ಬಾರದ ಸಂದರ್ಭ ಬರಬಹುದು. ಹಾಗಾಗಿ ಯಾರಿಗೂ ಹೇಳಬೇಡ' ಎಂದು ಹೇಳಿದನಂತೆ. ರಾಜನ ಈ ಮನುಷ್ಯತ್ವದ ನುಡಿಗೆ ಮನಸೋತ ಕಳ್ಳ, ಕುದುರೆಯನ್ನು ಅವನಿಗೆ ಮರಳಿ ಕೊಟ್ಟು ಹೋದನಂತೆ.

ಈ ಕಥೆಯಲ್ಲಿ ಸತ್ಯ/ಸುಳ್ಳನ್ನು ಹುಡುಕುವ ಮುನ್ನ ನಂಬಿಕೆ ಅನ್ನುವುದು ಏಕೆ ಮುಖ್ಯವಾಗುತ್ತದೆ ಎಂಬ ಅಂಶವನ್ನು ಗಮನಿಸಿದರೆ ನಂಬಿಕೆಗಿರುವ ಮಹತ್ವದ ಅರಿವಾಗುತ್ತದೆ.

ಹಣ, ಅಧಿಕಾರ, ಪದವಿ

ಹಣವನ್ನು ಗಳಿಸುವುದು ಬಹಳ ಕಷ್ಟ. ಅದು ನೇರವಾದ ಮಾರ್ಗದಲ್ಲಿ, ಯಾರಿಗೂ ಮೋಸ ಮಾಡದಂತೆ, ಆತ್ಮಸಾಕ್ಷಿ ಒಪ್ಪುವಂತೆ ಸಂಪಾದಿಸುವುದಂತೂ ಇಂದಿನ ಕಾಲದಲ್ಲಿ ಸಾಹಸವೇ ಸರಿ. ಮನುಷ್ಯನ ಗುಣಕ್ಕಿಂತ ಹಣಕ್ಕೆ ಕೊಡುವ ಮರ್ಯಾದೆ, ಗೌರವಗಳನ್ನು ಗಮನಿಸಿದರೆ ಸಾಕು ಅದಕ್ಕಿರುವ ಮೌಲ್ಯದ ಅರಿವಾಗುತ್ತದೆ. ಅಂತಹ ಹಣವನ್ನು ಗಳಿಸಿಕೊಳ್ಳುವುದಕ್ಕೆ ಪಡುವ ಪಾಡು ಹೇಳತೀರದ್ದು. ನಮ್ಮಂತಹ ಮಧ್ಯಮ ವರ್ಗದವರಿಗಂತೂ ಹಣವನ್ನು ಉಳಿಸುವುದಕ್ಕಿಂತ ಅದನ್ನು ಗಳಿಸಿಕೊಳ್ಳುವುದೇ ದೊಡ್ಡ ತಾಪತ್ರಯ. ಆದರೆ ಅದೇ ಹಣವನ್ನು ತುಂಬಾ ಸುಲಭವಾಗಿ ಬೇಕಾಬಿಟ್ಟಿಯಾಗಿ, ಮನಸ್ಸಿಗೆ ಬಂದಂತೆ ಧಾರಾಳವಾಗಿ ವ್ಯರ್ಥವಾಗಿ ಕಳೆಯಬಹುದು. ಆದರೆ ಕಳೆದಂತೆ ಸುಲಭವಾಗಿ ಸಂಪಾದಿಸಲಾಗದು. ಅಧಿಕಾರದ ಬಗ್ಗೆ ಹೇಳುವುದೇ ಬೇಡವೆನಿಸುತ್ತದೆ. ಹೇಗಾದರೂ ಸರಿ ಒಬ್ಬರ ಮೇಲೆ ಮತ್ತೊಬ್ಬರು ಆಕ್ರಮಣ ಮಾಡಿಯಾದರೂ, ಇಲ್ಲಸಲ್ಲದ ಆರೋಪ, ಅಪವಾದಗಳನ್ನು ಹೊರಿಸಿಯಾದರೂ ಸರಿ, ವಾಮಮಾರ್ಗವನ್ನೇ ಅನುಸರಿಸಿಯಾದರೂ ಸರಿ ಅಧಿಕಾರ ಪಡೆಯುತ್ತಾರೆ. ಲಕ್ಷ, ಕೋಟಿ ಎಂಬುದಕ್ಕೆ ಬೆಲೆ ಇಲ್ಲದಂತೆ ನೀರಿನಂತೆ ಹಣ ಚೆಲ್ಲಿ ಅಧಿಕಾರದ ಚುಕ್ಕಾಣಿ ಹಿಡಿಯುವ ರಾಜಕಾರಣಿಗಳನ್ನೂ, ಒಳಗೊಂಡಂತೆ ಒಳಗೊಳಗೆ ಕತ್ತಿ ಮಸೆಯುವ ನಾಯಕರನ್ನೂ ಕಾಣಬಹುದು.

ಅಧಿಕಾರವನ್ನು, ಪದವಿಯನ್ನು ಪಡೆಯಲು ನಡೆಸುವ ಕಸರತ್ತುಗಳು, ಸಾಹಸಗಳನ್ನು ಪ್ರಸ್ತುತದ ರಾಜಕೀಯವನ್ನು ಗಮನಿಸಿದರೆ ಸಾಕು ಕಣ್ಣೆದುರಿಗೆ ಜೀವಂತ ಸಾಕ್ಷಿಯ ದರ್ಶನವಾಗುತ್ತದೆ. ಹಾಗೆಯೇ ಅಂತಹ ಅಧಿಕಾರ, ಪದವಿಗಳನ್ನು ಅತಿ ಸುಲಭವಾಗಿ ಕಳೆದುಕೊಳ್ಳುವುದನ್ನು ಕಾಣಬಹುದು. ಪಡೆಯುವಾಗ ಪಡುವ ಸಾಹಸವನ್ನು ಕಳೆದುಕೊಳ್ಳುವಾಗ ಮಾಡಬೇಕಿಲ್ಲ. ಸ್ವಲ್ಪ ಮೈ ಮರೆತರೆ, ಕಾಲು ಜಾರಿದರೆ, ಮಾತಿನಲ್ಲಿ ಎಡವಿದರೆ, ಇಂದ್ರಿಯ ನಿಗ್ರಹದ ಸಂಯಮ ಕಳೆದುಕೊಂಡರೆ ಸಾಕು ಅತಿ ಸುಲಭವಾಗಿ ಅಧಿಕಾರ, ಪದವಿಗಳು ಹೇಳ ಹೆಸರಿಲ್ಲದಂತೆ ಕಣ್ಮರೆಯಾಗುತ್ತದೆ.

ಸಂಸ್ಥೆ: ಒಂದು ಸಂಸ್ಥೆಯನ್ನು ಕಟ್ಟಿ ಅದನ್ನು ಹಂತಹಂತವಾಗಿ ಮೇಲೆ ತಂದು ಹಲವು ಜನರ ಶ್ರಮ, ಅವಿರತ ಪ್ರಯತ್ನ, ನಿಸ್ವಾರ್ಥ ಸೇವೆಯ ಮನೋಭಾವ ಇವುಗಳಿಂದ ಹೆಮ್ಮರವಾಗಿ ಬೆಳೆದು ನಿಲ್ಲಿಸಬಹುದು. ಈ ಪ್ರಯತ್ನದಲ್ಲಿ ಹಲವು ಜನರ ನಿಸ್ವಾರ್ಥ ಸೇವಾ ಮನೋಭಾವ, ಸತತ ಪರಿಶ್ರಮ ಅಡಗಿರುತ್ತದೆ. ಅದೇ ಸಂಸ್ಥೆಯನ್ನು ಹೆಸರಿಲ್ಲದಂತೆ ಮಾಡಲು, ಶಾಶ್ವತವಾಗಿ ಮುಚ್ಚುವಂತೆ ಮಾಡಲು ಸ್ವಾರ್ಥ ತುಂಬಿದ ಜನ, ನಿರ್ಲಕ್ಷ್ಯ, ಅಸಡ್ಡೆ ಎಂಬಂತಹ ನಕಾರಾತ್ಮಕ ಅಂಶಗಳೇ ಸಾಕು. ಎಷ್ಟೇ ಹಳೆಯ ಸಂಸ್ಥೆಯಾದರೂ ಶತಮಾನದಿಂದ ಯಶಸ್ವಿಯಾಗಿ ನಡೆದು ಬಂದಿದ್ದರೂ ಸುಲಭವಾಗಿ ಅಧಃಪತನಕ್ಕಿಳಿಯುತ್ತದೆ. ಕಾಲಕ್ಕೆ ತಕ್ಕಂತೆ ಬದಲಾವಣೆ ಮಾಡಿ ಕೊಳ್ಳದೇ ಹೊಸ, ಹೊಸ ಆಲೋಚನೆಗಳಿಗೆ ಬೆಂಬಲ ನೀಡದೇ, ಎಲ್ಲವೂ ಹಿಂದಿನಂತೆ ಇದ್ದರೆ ಸಾಕು, ನಾನು ಬದುಕಿನಲ್ಲಿ ಭದ್ರವಾಗಿ ತಳವೂರಿದ್ದೇನೆ, ಸಂಸ್ಥೆ ಇನ್ನು ಮುಚ್ಚಿ ಹೋದರೂ ಚಿಂತೆ ಇಲ್ಲ ಎನ್ನುವ ಸ್ವಾರ್ಥ ಮನೋಭಾವವೂ ಇದಕ್ಕೆ ಪ್ರಮುಖ ಕಾರಣವಾಗುತ್ತದೆ. ಸಂಸ್ಥೆಯಿಂದ ನಾವು ಅನ್ನುವುದನ್ನು ಬಿಟ್ಟು ನನ್ನಿಂದ ಸಂಸ್ಥೆ ಎನ್ನುವ ಅಹಂಕಾರದ ಆಲೋಚನೆಗಳು ಮನಸ್ಸಿಗೆ ಬಂದರಂತೂ ಆ ಸಂಸ್ಥೆಯನ್ನೇ ನಂಬಿಕೊಂಡು ಬದುಕುವ ಕುಟುಂಬಗಳು ಬೀದಿಗೆ ಬೀಳುವ ಪರಿಸ್ಥಿತಿ ಎದುರಾಗುತ್ತದೆ.

ಶಿಕ್ಷಣ : ನಿಜ ಇಂದು ವ್ಯಾಪಾರೀಕರಣವಾಗಿ ಬದಲಾಗುತ್ತಿರುವ ಶಿಕ್ಷಣವನ್ನು ಗಳಿಸುವುದು ಕಷ್ಟವಾದರೂ ಅದನ್ನು ಬೇಡದ ಸಂಗತಿಗಳಿಗೆ ಬಳಸಿಕೊಂಡು ಸುಲಭವಾಗಿ ಶಿಕ್ಷಣದ ಸತ್ವವನ್ನು ಕಳೆದುಕೊಳ್ಳಬಹುದು. ಸತತ ಪ್ರಯತ್ನ ಪಟ್ಟು ಹಗಲು, ರಾತ್ರಿಗಳೆನ್ನದೇ ಓದಿ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳೇ ಅಧಿಕಾರಿಗಳಾಗಿ ಮುಂದೆ ಬಡ, ಮುಗ್ಧ, ಅಮಾಯಕ, ಅಶಿಕ್ಷಿತ ಜನರಿಗೆ ಮೋಸ ಮಾಡುವುದನ್ನು ಇತ್ತೀಚಿನ ದಿನಗಳಲ್ಲಂತೂ ಸೈಬರ್ ಕ್ರೈಮ್, ಡಿಜಿಟಲ್ ಆರೆಸ್ಟ್ ಹೆಸರುಗಳಲ್ಲಿ ವಿದ್ಯಾವಂತರೆನಿಸಿಕೊಂಡವರೇ ಮಾಡುತ್ತಿರುವ ಅಪರಾಧಗಳನ್ನು ಗಮನಿಸಿದಾಗ ಶಿಕ್ಷಣದ ನೈತಿಕ ಗುರಿ ಹಳಿ ತಪ್ಪುತ್ತಿರುವುದು ಗೋಚರವಾಗುತ್ತದೆ. ಮಾದಕ ದ್ರವ್ಯ ವ್ಯಸನಿಗಳಾಗಿ, ಸಮಾಜಕ್ಕೆ, ಕುಟುಂಬಕ್ಕೆ ಕಂಟಕಪ್ರಾಯರಾಗಿ ಉಳಿದ ಶಿಕ್ಷಣ ಪಡೆದವರನ್ನು ಗಮನಿಸಿದಾಗ ಲಕ್ಷಗಟ್ಟಲೇ ವ್ಯಯಿಸಿ, ಕಷ್ಟಪಟ್ಟು ಪಡೆದ ಶಿಕ್ಷಣವನ್ನು ಸುಲಭವಾಗಿ ಕಳೆದುಕೊಳ್ಳುವುದನ್ನು ಗಮನಿಸಿದಾಗ ನೋವಾಗುತ್ತದೆ.

ಪ್ರೀತಿ: ಒಬ್ಬರನ್ನು ತುಂಬಾ ಸುಲಭವಾಗಿ ಬೇಕಾದರೆ ಶತ್ರುಗಳನ್ನಾಗಿ ಮಾಡಿಕೊಳ್ಳಬಹುದು. ಕೆಲವರಿಗೆ ನಮ್ಮ ಕೆಲಸವನ್ನು ನಾವು ಸರಿಯಾಗಿ ಮಾಡಿದರೂ ಸಾಕು ಅವರ ದೃಷ್ಟಿಯಲ್ಲಿ ಶತ್ರು ಗಳಾಗುತ್ತೇವೆ. ಶತ್ರುತ್ವಕ್ಕಿಂತ ಕಠಿಣವಾದುದು ಒಬ್ಬರ ಮೇಲೆ ಬೆಳೆಸಿಕೊಳ್ಳುವ ಪ್ರೀತಿ. ಇಡೀ ಪ್ರಪಂಚ ಪ್ರೀತಿಯಿಂದ, ಪ್ರೀತಿಗಾಗಿ, ಪ್ರೀತಿಗೋಸ್ಕರ ಪರಿತಪಿಸಿದೆ, ಪರಿತಪಿಸುತ್ತಿದೆ. ಅದನ್ನು ಪಡೆಯುವುದಕ್ಕಾಗಿಯೇ ಓಟ ಆರಂಭಿಸಿ ಬಹು ದೂರ ಕ್ರಮಿಸಿ ನಿಂತಿದೆ. ದುರಂತ ಎಂದರೆ ಕೈಗೆಟುಕದ ದ್ರಾಕ್ಷಿಯಂತೆ ಇಂದಿಗೂ ನಿಜವಾದ ಪ್ರೀತಿಯನ್ನು ಪಡೆಯುವಲ್ಲಿ ಕಷ್ಟಪಡುತ್ತಲೇ ಇದ್ದೇವೆ. ಅದೇ ರೀತಿ ಅತೀ ಸುಲಭವಾಗಿ ಪ್ರೀತಿ ಕಳೆದುಕೊಳ್ಳಬಹುದು. ಗಳಿಸಿಕೊಳ್ಳುವಾಗ ಇರುವಷ್ಟು ವ್ಯವಧಾನ, ಸಂಯಮ ಕಳೆದು ಕೊಳ್ಳುವಾಗ ಇರುವುದಿಲ್ಲ. ಪ್ರೀತಿ ಪಡೆಯಲು ಸವೆಸುವಷ್ಟು ಸಮಯ ಅದನ್ನು ಕಳೆದುಕೊಳ್ಳಲು ಬೇಕಾಗುವುದಿಲ್ಲ.

ಯಾವುದನ್ನಾಗಲೀ ಪಡೆದುಕೊಳ್ಳುವಾಗ ಅಥವಾ ಗಳಿಸಿಕೊಳ್ಳುವಾಗ ಇರುವ ಕಾತುರತೆ, ಶ್ರಮ, ಪ್ರಯತ್ನ ಕಳೆದುಕೊಳ್ಳುವಾಗ ಅಗತ್ಯವಿರುವುದಿಲ್ಲ. ಹಾಗಾಗಿ ಕಳೆದುಕೊಳ್ಳುವುದಕ್ಕಿಂತ ಉಳಿಸಿಕೊಳ್ಳುವ, ಅದನ್ನು ಭದ್ರಪಡಿಸಿಕೊಳ್ಳುವ, ಮತ್ತಷ್ಟು, ಮಗದಷ್ಟು ಉತ್ತಮ ಪಡಿಸಿಕೊಳ್ಳುವ ಪ್ರಯತ್ನ ಮಾಡೋಣ. ಸಮಚಿತ್ತತೆಯಿಂದ ಕುಳಿತು ಮಾತನಾಡಿ ಗಳಿಸಿದ್ದನ್ನು ಉಳಿಸಿಕೊಳ್ಳೋಣ. ಜೀವನದಲ್ಲಿ ದೊರೆತ ಪ್ರತಿಯೊಂದೂ ಶ್ರಮದ ಫಲ. ಗಳಿಸುವುದಕ್ಕಿಂತ ಅದನ್ನು ಉಳಿಸಿಕೊಳ್ಳುವ ಜವಾಬ್ದಾರಿ ದೊಡ್ಡದು. ಸಂಬಂಧವಾಗಲಿ, ನಂಬಿಕೆಯಾಗಲಿ, ಪ್ರೀತಿಯಾಗಲಿ ಕಳೆದುಕೊಳ್ಳಲು ಕ್ಷಣಮಾತ್ರ ಸಾಕು. ಆದರೆ ಉಳಿಸಿ ಕೊಳ್ಳುವುದು ಬದುಕಿನ ಸಾಧನೆಯೇ ಸರಿ.

ನಾವು ಗಳಿಸಿರುವ ಜ್ಞಾನ, ಮೌಲ್ಯಗಳು, ಸಂಬಂಧಗಳು, ಗೌರವ ಮತ್ತು ಅವಕಾಶಗಳನ್ನು ಅತ್ಯಂತ ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು. ಜೀವನದಲ್ಲಿ ದೊರೆತ ಪ್ರತಿಯೊಂದು ಒಳ್ಳೆಯ ಸಂಗತಿಯ ಬೆಲೆ ಅರಿತು ಅದನ್ನು ಉಳಿಸಿಕೊಳ್ಳುವ ಮನೋಭಾವ ಬೆಳೆಸಿಕೊಂಡಾಗ ಮಾತ್ರ ನಮ್ಮ ಬದುಕು ಸಾರ್ಥಕವಾಗುತ್ತದೆ. ಆದ್ದರಿಂದ 'ಗಳಿಸಿಕೊಳ್ಳುವುದು ಕಷ್ಟ, ಕಳೆದುಕೊಳ್ಳುವುದು ಸುಲಭ' ಎಂಬ ಮಾತನ್ನು ಕೇವಲ ಒಂದು ಸಾಲಾಗಿ ಅಲ್ಲ, ಜೀವನದ ಮಾರ್ಗದರ್ಶಕ ತತ್ವವಾಗಿ ಸ್ವೀಕರಿಸಿದರೆ ನಮ್ಮ ವ್ಯಕ್ತಿತ್ವವೂ ಉನ್ನತವಾಗುತ್ತದೆ, ಬದುಕೂ ಯಶಸ್ವಿಯಾಗುತ್ತದೆ.

ಮೈಸೂರಲ್ಲಿ ಮನೆಗೊಂದು ಗ್ರಂಥಾಲಯ ಕಾರ್ಯಕ್ರಮ ಉದ್ಘಾಟನೆ

ಜ್ಞಾನ ಸಂಪಾದನೆಗಾಗಿ ಸದಭಿರುಚಿಯ ಪುಸ್ತಕ ಓದಬೇಕು



ಡಾ.ವಸಂತಕುಮಾರ್ ತಿಮಕಾಪುರ ಅವರ ಮನೆಯಲ್ಲಿ ಗ್ರಂಥಾಲಯಕ್ಕೆ ಪ್ರೊ.ಕಾಳೇಗೌಡ ನಾಗವಾರ ಚಾಲನೆ ನೀಡಿದರು.

ಮೈಸೂರು,ಜೂ.14(ಎಂಟಿವೈ)– ಜ್ಞಾನ ಸಂಪಾದನೆಗಾಗಿ ಎಲ್ಲರೂ ಸದಭಿರುಚಿಯ ಪುಸ್ತಕ ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದು ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಸಲಹೆ ನೀಡಿದ್ದಾರೆ.

ಮೈಸೂರಿನ ವಿಜಯನಗರದಲ್ಲಿರುವ ಕೃಷಿ ವಿಜ್ಞಾನಿ ಡಾ.ವಸಂತಕುಮಾರ್ ತಿಮಕಾಪುರ ಅವರ ನಿವಾಸದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರವು ಆಯೋಜಿಸಿದ್ದ 'ಮನೆಗೊಂದು ಗ್ರಂಥಾಲಯ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದೆ ಪ್ರೊ.ಎಂ.ಡಿ.ನಂಜುಂಡಸ್ವಾಮಿ, ಪಿ.ಲಂಕೇಶ್, ಪೂರ್ಣಚಂದ್ರ ತೇಜಸ್ವಿ ಇನ್ನಿತರರು ಒಂದೆಡೆ ಸೇರಿದಾಗ ಸಾಹಿತ್ಯದ ಬಗ್ಗೆ ಚರ್ಚೆಯಾಗುತ್ತಿತ್ತು. ಈಗ ಕನ್ನಡ ಪುಸ್ತಕ ಪ್ರಾಧಿಕಾರ ಮನೆಗೊಂದು 'ಗ್ರಂಥಾಲಯದ ಕಾರ್ಯಕ್ರಮ' ಸಾಹಿತ್ಯ, ಪುಸ್ತಕಗಳ ಬಗ್ಗೆ ಚರ್ಚೆಯಾಗುವಂತೆ ಮಾಡಿದೆ. ಸಮಾನ ಮನಸ್ಕರು, ಸದಭಿರುಚಿ ಇರುವವರು, ಹಿರಿಯ ನಾಗರಿಕರು ಒಂದೆಡೆ ಸೇರಿ ಸಾಹಿತ್ಯದ ಬಗ್ಗೆ ಚರ್ಚಿಸಬೇಕು ಎಂದರು.

'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಮಾತಿನ ಬಗ್ಗೆ ಕೇರಳ ಸೇರಿದಂತೆ ಬೇರೆ ಬೇರೆ ರಾಜ್ಯಗಳಲ್ಲಿ ಉತ್ತಮ ಅಭಿಪ್ರಾಯವಿದೆ. ಅದು ಪಾಲನೆ ಆಗಬೇಕು. ಬಸವ, ಅಲ್ಲಮಪ್ರಭು, ಅಕ್ಕಮಹಾದೇವಿ ಅವರಂಥ ವಚನಕಾರರು ಹೇಳಿದ್ದು ಇದನ್ನೇ ಎಂದರು.

ಮಹಾರಾಜ ಕಾಲೇಜಿನ ಸಮಾಜ ಶಾಸ್ತ್ರ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಹೆಚ್.ಎಂ. ವಸಂತಮ್ಮ ಮಾತನಾಡಿ, ಪ್ರತಿಯೊಬ್ಬರಲ್ಲೂ ಪುಸ್ತಕ ಪ್ರೀತಿ ಬೆಳೆಸಬೇಕು. ಯುವ ಪೀಳಿಗೆ ಪುಸ್ತಕ ಓದುವಂತೆ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಡಾ.ವಸಂತಕುಮಾರ್ ತಿಮಕಾಪುರ ಮಾತನಾಡಿ, ನನ್ನನ್ನು ಪುಸ್ತಕ ಪ್ರೀತಿಯೇ ಇಲ್ಲಿವರೆಗೆ ಕರೆತಂದು ನಿಲ್ಲಿಸಿದೆ. ಇದರಿಂದಾಗಿಯೇ ಕೃಷಿ ಸಾಹಿತ್ಯದ ಬಗ್ಗೆ ಪುಸ್ತಕಗಳನ್ನು ಬರೆಯಲು ಸಾಧ್ಯವಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ಮಾತನಾಡಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಪುಸ್ತಕಗಳು ಬದುಕುವ ದಿಕ್ಕು ತೋರಿಸುತ್ತವೆ ಎಂದು ಹೇಳಿದ್ದರು. ಪುಸ್ತಕಗಳು ಜನರ ಜೀವನದ ಮೇಲೆ ಪ್ರಭಾವ ಬೀರುತ್ತವೆ. ಮೊಬೈಲ್ ಬಂದ ನಂತರ ಹಸ್ತ ಖಾಲಿಯಾಗಿತ್ತು. ಈ ಕೊರತೆ ನೀಗಿಸಲು 'ಹಸ್ತ'ಕ್ಕೆ ಕೆಲಸ ಕೊಡಲು ಮನೆಗೊಂದು ಗ್ರಂಥಾಲಯ ಯೋಜನೆ ರೂಪಿಸಿದ್ದೇವೆ ಎಂದರು.

'ನನ್ನ ಪುಸ್ತಕ ನನ್ನ ಹೆಮ್ಮೆ' ಎಂಬಂತೆ ಪುಸ್ತಕ ಪ್ರೀತಿಯನ್ನು ಗೌರವಿಸಲು ಪ್ರಾಧಿಕಾರದ ವತಿಯಿಂದ ಇದೇ ಮೊದಲ ಬಾರಿಗೆ ರಾಜ್ಯದ 4 ಕಂದಾಯ ವಿಭಾಗಗಳಲ್ಲೂ ತಲಾ ಓರ್ವ ಓದುಗರಿಗೆ ಈ ವರ್ಷದಿಂದಲೇ ಪ್ರಶಸ್ತಿ ನೀಡಲಾಗುವುದು ಎಂದು ಹೇಳಿದರು.

ಇದಕ್ಕೂ ಮುನ್ನ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಜಿಲ್ಲಾ ಜಾಗೃತ ಸಮಿತಿ ಸಂಚಾಲಕ ಎಂ.ಚಂದ್ರಶೇಖರ್ ಪ್ರಾಸ್ತಾವಿಕ ಭಾಷಣ ಮಾಡಿದರು. ಸದಸ್ಯ ದೇವರಾಜ ಪಿ.ಚಿಕ್ಕಹಳ್ಳಿ ಕಾರ್ಯಕ್ರಮ ನಿರೂಪಿಸಿದರು. ಸದಸ್ಯ ಮೈ.ನಾ.ಲೋಕೇಶ್ ವಂದಿಸಿದರು. ಮಾಜಿ ಮೇಯರ್ ಮೋದಾಮಣಿ ವಚನ ಗಾಯನ ಪ್ರಸ್ತುತಪಡಿಸಿದರು. ಡಾ.ಹೆಚ್.ಎಲ್.ವಸಂತಕುಮಾರ್, ಪ್ರೊ.ಆರ್.ಎನ್.ಪದ್ಮನಾಭ, ಡಾ.ಮಹದೇವಸ್ವಾಮಿ, ಪ್ರೊ.ಪ್ರಭಾಕರ್, ಸಿ.ವಿ.ಗುಪ್ತ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್‌ಗೆ ರಾಜಶೇಖರಮೂರ್ತಿ ಅಧ್ಯಕ್ಷ



ಜೆ.ಪಿ.ನಗರದ ಸ್ಪೋರ್ಟ್ಸ್ ಕ್ಲಬ್ ಚುನಾವಣೆಯಲ್ಲಿ ಗೆಲುವು ದಾಖಲಿಸಿದ ವಕೀಲ ಡಿ.ಬಿ.ರಾಜಶೇಖರಮೂರ್ತಿ ಬಳಗದವರ ಸಂಭ್ರಮಾಚರಣೆ.

ಮೈಸೂರು, ಜೂ.14– ನಗರದ ಪ್ರತಿಷ್ಠಿತ ಜೆ.ಪಿ.ನಗರ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಭಾನುವಾರ ನಡೆದ 2026–28ರ ಕ್ಲಬ್ ಅಧ್ಯಕ್ಷರ ಚುನಾವಣೆಯಲ್ಲಿ ವಕೀಲ ಡಿ.ಬಿ.ರಾಜಶೇಖರಮೂರ್ತಿ ಬಣ ಭರ್ಜರಿ ಗೆಲುವು ದಾಖಲಿಸಿದೆ.

ರಾಜಶೇಖರಮೂರ್ತಿ ಅವರು 164 ಮತಗಳಿಸಿ ಅಧ್ಯಕ್ಷರಾಗಿ ಆಯ್ಕೆಯಾದರೆ, ಉಪಾಧ್ಯಕ್ಷರಾಗಿ ಚಲುವಯ್ಯ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಕಾರ್ಯದರ್ಶಿಯಾಗಿ ಸಿ.ಡಿ.ಬಸವರಾಜು (91 ಮತ), ಜಂಟಿ ಕಾರ್ಯದರ್ಶಿಯಾಗಿ ಯು.ಎಸ್. ಸದಾಶಿವ್ (120 ಮತ) ಹಾಗೂ ಖಜಾಂಚಿಯಾಗಿ ಬಿ.ಸುರೇಶ (157 ಮತ) ಆಯ್ಕೆಯಾಗಿದ್ದಾರೆ.

ಆಡಳಿತ ಮಂಡಳಿ ಸದಸ್ಯರಾಗಿ ವಾಟಾಳ್ ಆನಂದ್, ಆರ್ ಶಶಿಕಿರಣ್, ಹೆಚ್.ಎನ್.ಮಂಜುನಾಥ, ಕೆ.ಎಸ್. ಕುಮಾರ್,ಎಂ.ಬಿ.ರಾಮಮೂರ್ತಿ, ವಿಶ್ವರಾಧ್ಯ, ಕೆಂಗೇಗೌಡ, ಎಸ್.ರವಿ, ಕೆ.ಮಂಜುನಾಥ ಪ್ರಸಾದ್ ಮತ್ತು ಕೆ.ಎನ್. ಶ್ರೀನಿವಾಸಯ್ಯ ಆಯ್ಕೆಯಾಗಿದ್ದಾರೆ.

'ದೇಸಿ ಬೀಜೋತ್ಸವ' ಯಶಸ್ವಿ



ಮೈಸೂರಿನ ನಂಜರಾಜ ಬಹದ್ದೂರು ಛತ್ರದಲ್ಲಿ ನಡೆದ ಎರಡು ದಿನಗಳ 'ದೇಸಿ ಬೀಜೋತ್ಸವ' ಭಾನುವಾರ ಮುಕ್ತಾಯಗೊಂಡಿತು.

ಮೈಸೂರು, ಜೂ.14(ಎಂಕೆ)– ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಸಹಜ ಸಮೃದ್ಧ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಹಾಗೂ ಸಹಜ ಸೀಡ್ಸ್ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ 'ದೇಸಿ ಬೀಜೋತ್ಸವ' ಯಶಸ್ವಿಯಾಯಿತು.

150 ಬಗೆಯ ಕಾಳು ಹಾಗೂ ಇನ್ನಿತರೆ ಆಹಾರ ಪದಾರ್ಥಗಳ ನಾಟಿ ಬೀಜಗಳನ್ನು ಪ್ರದರ್ಶನ ವೀಕ್ಷಿಸಿದ ಹಲವಾರು ಮಂದಿ ಬೀಜ ಮತ್ತು ಸಂರಕ್ಷಣೆಯ ಮಾಹಿತಿ ಪಡೆದರು. ಹಾಗೆಯೇ ನೈಸರ್ಗಿಕವಾಗಿ ಬೆಳೆದ ಮಲ್ಲಿಕಾ, ಇಮಾಂ ಪಸಂದ್, ದಶೇರಿ, ಅಮ್ರಪಾಲಿ, ಲಂಗಡ, ಮಲಗೋಬ ಮೊದಲಾದ ಮಾವಿನ ಹಣ್ಣುಗಳು ಗಮನ ಸೆಳೆಯಿತು.

ಮೇಳದ ಅಂಗವಾಗಿ ಮಕ್ಕಳಿಗೆ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ 5 ರಿಂದ 9 ವರ್ಷದ ವಿಭಾಗದಲ್ಲಿ ರಿಷಿಕಾ ಎಸ್.ಕೆ.(ಪ್ರಥಮ), ಕುಶಾಲ್ ಆರ್.(ದ್ವಿತೀಯ), ದೃಶ್ಯ ಎಸ್. (ತೃತೀಯ) ಹಾಗೂ ರಿತನ್ಯ ಮತ್ತು ಅಪೂರ್ವ (ಸಮಾಧಾನಕರ) ಬಹುಮಾನ ಪಡೆದರೆ, 10 ರಿಂದ 12 ವರ್ಷದ ವಿಭಾಗದಲ್ಲಿ ವಿಸ್ಮಯ (ಪ್ರಥಮ), ಧೀರಜ್ ಕೆ. (ದ್ವಿತೀಯ), ಗೋಕುಲ್ ಆರ್ಯನ್ (ತೃತೀಯ) ಹಾಗೂ ಸಮೃದ್ಧ್ ಎಸ್.ಕೆ. (ಸಮಾಧಾನಕರ) ಬಹುಮಾನ ಗಳಿಸಿದರು.

ಆಳ್ವಾಸ್ ಕೃಷಿ ಕಾಲೇಜಿನ ಡೀನ್ ಡಾ.ಎಸ್.ಎನ್. ವಾಸುದೇವನ್ ಮಕ್ಕಳಿಗೆ ಬಹುಮಾನ ವಿತರಿಸಿದರು. ಇದೇ ಸಂದರ್ಭದಲ್ಲಿ ಕರ್ನಾಟಕ ಬೀಜ ಸಂರಕ್ಷಕರ ಕೈಪಿಡಿಯನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಕಾರ್ಯ ನಿರ್ವಾಹಕ ಅಧಿಕಾರಿ ವಿಜಯಲಕ್ಷ್ಮಿ ಬಿಡುಗಡೆ ಮಾಡಿದರು. ಸಹಜ ಸಮೃದ್ಧದ ಕೃಷ್ಣ ಪ್ರಸಾದ್ ಉಪಸ್ಥಿತರಿದ್ದರು.

ಭ್ರಷ್ಟಾಚಾರ ಮುಕ್ತ ಕರ್ನಾಟಕ ರಾಜ್ಯ ಅಭಿವೃದ್ಧಿಗೆ ಆಗ್ರಹಿಸಿ ವಾಟಾಳ್ ಮೈಸೂರಲ್ಲಿ ಪ್ರತಿಭಟನೆ



ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಹಿರಿಯ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಜೂ.14(ಎಂಕೆ)– ಭ್ರಷ್ಟಾಚಾರ ಮುಕ್ತ ಕರ್ನಾಟಕ ರಾಜ್ಯ ಅಭಿವೃದ್ಧಿಗೆ ಆಗ್ರಹಿಸಿ ಹಿರಿಯ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಭಾನುವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಭ್ರಷ್ಟಾಚಾರ ತೊಲಗಲಿ, ರಾಜ್ಯ ಅಭಿವೃದ್ಧಿಯಾಗಲಿ ಎಂಬ ಘೋಷಣೆ ಕೂಗಿ ರಾಜ್ಯದ ಜನತೆ ಸಂತೋಷವಾಗಿರ ಬೇಕಾದರೆ ಲಂಚ ತೊಲಗಬೇಕು. ಯುವ ಮತ್ತು ಪ್ರಾಮಾಣಿಕ ಅಧಿಕಾರಿಗಳಿಗೆ ಅವಕಾಶ ಮಾಡಿ ಕೊಡಬೇಕು ಎಂದು ಒತ್ತಾಯಿಸಲಾಯಿತು.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಹೋರಾಟಗಾರ ವಾಟಾಳ್ ನಾಗರಾಜ್, ರಾಜ್ಯದಲ್ಲಿ ಲೂಟಿ ಕೋರರಿಗೆ ಕಡಿವಾಣ ಹಾಕಬೇಕು. ಭ್ರಷ್ಟಾಚಾರ ಮುಕ್ತ ಕರ್ನಾಟಕ ಅಭಿವೃದ್ಧಿಯಾಗಬೇಕಾದರೆ ಯುವ ಜನಾಂಗ ಮತ್ತು ಪ್ರಾಮಾಣಿಕರಿಗೆ ಅವಕಾಶ ಮಾಡಿ ಕೊಡಬೇಕು. ಮೈಸೂರು ಮತ್ತು ಬೆಂಗಳೂರಿನ ಸುತ್ತಮುತ್ತ ಇದ್ದಂತಹ ಸರ್ಕಾರಿ ಭೂಮಿಯನ್ನು ಲೂಟಿ ಮಾಡಲಾಗಿದೆ. ಆಸ್ಪತ್ರೆಗಳಲ್ಲಿ ಹಣ ಕೊಡದಿದ್ದರೆ, ಹಣವನ್ನೂ ಹೊರಗಡೆ ಕೊಡಲ್ಲ. ಆದ್ದರಿಂದ ಭ್ರಷ್ಟಾಚಾರ ಮುಕ್ತ ರಾಜ್ಯವನ್ನಾಗಿಸಲು ಸಾಧ್ಯವಾಗದಿದ್ದರೆ ಅಧಿಕಾರ ಬಿಟ್ಟು ತೊಲಗಿ ಎಂದು ಹರಿಹಾಯ್ದರು.

ನನಗೆ ಆ ಖಾತೆ ಬೇಕು. ಈ ಖಾತೆ ಬೇಕು ಎನ್ನುವುದು ಪ್ರಜಾಪ್ರಭುತ್ವದಲ್ಲಿನ ಅಪಾಯಕಾರಿ ಬೆಳವಣಿಗೆ. ಭ್ರಷ್ಟಾಚಾರ ಮುಕ್ತ ರಾಜ್ಯ ಮಾಡುತ್ತೇವೆ ಎಂದು ಹೇಳಿರುವ ಮುಖ್ಯಮಂತ್ರಿ ಹಾಗೂ ಸಚಿವರುಗಳು ತಮ್ಮ ಬಳಿ ಎಷ್ಟೆಷ್ಟು ಹಣವಿದೆ. ಹೇಗೆ ಸಂಪಾದನೆ ಮಾಡಿದ್ದೇವೆ ಎಂಬುದರ ಕುರಿತು ಶ್ವೇತಪತ್ರ ಹೊರಡಿಸಲಿ ಎಂದು ಸವಾಲು ಹಾಕಿದರಲ್ಲದೆ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಮೂರು ಪಕ್ಷಗಳು ಭ್ರಷ್ಟಾಚಾರದಲ್ಲಿ ತೊಡಗಿವೆ ಎಂದು ದೂರಿದರು.

ಬಿಡದಿ ಟೌನ್‌ಶಿಪ್‌ಗೆ ವಿರೋಧ: ಬಿಡದಿ ಉಪನಗರ ಮಾಡಬಾರದು ಎಂದು ಈಗಾಗಲೇ ಹಲವು ಬಾರೀ ವಿರೋಧಿಸಿದ್ದರೂ ರಾಜ್ಯ ಸರ್ಕಾರ ಮುಂದಾಗಿರುವುದು ಸರಿಯಲ್ಲ. ರೈತರು ಜಮೀನು ನೀಡಿದರೆ ಮುಂದಿನ ದಿನಗಳಲ್ಲಿ ಸಿಮೆಂಟ್ ಮತ್ತು ಕಬ್ಬಿಣ ತಿನ್ನಬೇಕಾಗುತ್ತದೆ. ಆದ್ದರಿಂದ ಯಾರೊಬ್ಬರು ಎಕರೆಗೆ 20 ಕೋಟಿ ರೂ. ಕೊಟ್ಟರೂ ಕೊಡಬಾರದು. ಬಿಡದಿ ರೈತರ ಹೋರಾಟಕ್ಕೆ ಸದಾ ಬೆಂಬಲ ನೀಡುವುದಾಗಿ ತಿಳಿಸಿದರು.



ನೇಮಕ

ಮೈಸೂರು, ಜೂ. 14– ಕರ್ನಾಟಕ ವಿಕಾಸ ರಂಗದ ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಸಂಘಟಕರೂ, ಸಾಹಿತಿಗಳೂ ಆದ ಮೈ.ನಾ ಲೋಕೇಶ್ ಅವರನ್ನು ನಿಯುಕ್ತಿಗೊಳಿಸಲಾಗಿದೆ ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ಡಾ.ತ್ಯಾಗರಾಜ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ 47
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೋದಿ ಆಡಳಿತದಲ್ಲಿ ಪ್ರತಿಯೊಬ್ಬರಿಗೂ ತಲುಪಿದ ಯೋಜನೆಗಳು

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರತಿಪಾದನೆ



ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಗಣ್ಯರನ್ನು ಸನ್ಮಾನಿಸಲಾಯಿತು.

ಮಂಡ್ಯ, ಜೂ.14– ಕಳೆದ 12 ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತಾವಧಿಯಲ್ಲಿ ಪ್ರತಿಯೊಬ್ಬ ಪ್ರಜೆಯ ಮನೆ ಬಾಗಿಲಿಗೆ ಕೇಂದ್ರ ಸರ್ಕಾರದ ಯೋಜನೆಗಳು ತಲುಪಿವೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಪ್ರತಿಪಾದಿಸಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಯಶಸ್ವಿಯಾಗಿ 12 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ನಗರದ ಕಲಾ ಮಂದಿರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ನೇರ ನಗದು ವರ್ಗಾವಣೆ, ಯುಪಿಐ ಹಣ ಪಾವತಿ ಸೇರಿದಂತೆ ಅನೇಕ ಪರಿವರ್ತನಾತ್ಮಕ ಯೋಜನೆಗಳು ಜಾರಿಗೆ ಬಂದಿವೆ. ಅಲ್ಲದೆ ಕೇಂದ್ರ ಸರ್ಕಾರದಿಂದ ಜನರಿಗೆ ತಲುಪಬೇಕಾದ ಪ್ರತಿ ಪೈಸೆ ನೇರವಾಗಿ ಆಯಾ ಫಲಾನುಭವಿ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾವಣೆ ಆಗುತ್ತಿದೆ. ಇದು ಡಿಜಿಟಲ್ ಇಂಡಿಯಾದ ಶಕ್ತಿಯಾಗಿದೆ ಎಂದರು.

ಸ್ವಾತಂತ್ರ ಭಾರತದ ಇತಿಹಾಸದಲ್ಲೇ ಸುದೀರ್ಘ ಕಾಲ ದೇಶ ಮುನ್ನಡೆಸಿದ ಪ್ರಮುಖ ಚುನಾಯಿತ ಪ್ರಧಾನಿಗಳಲ್ಲಿ ಒಬ್ಬರಾಗಿ ಅವರು ಹೊಸ ಮೈಲಿಗಲ್ಲು ಸ್ಥಾಪಿಸಿದ್ದಾರೆ ಎಂದ ಅವರು 2014ರಲ್ಲಿ ಸುಮಾರು $2 ಟ್ರಿಲಿಯನ್ ಇದ್ದ ಭಾರತದ ಆರ್ಥಿಕತೆಯು, 2026ರ ವೇಳೆಗೆ ಅಂದಾಜು $4.2 ಟ್ರಿಲಿಯನ್ ಜಿಡಿಪಿ ತಲುಪುವ ಮೂಲಕ ಜಾಗತಿಕ ಮಟ್ಟದಲ್ಲಿ ವೇಗವಾಗಿ ಬೆಳೆಯುತ್ತಿರುವ ದೊಡ್ಡ ಆರ್ಥಿಕತೆಯಾಗಿದೆ. ಇದು ಪ್ರಧಾನಿಗಳ ದೂರದೃಷ್ಟಿಯಿಂದ ಸಾಧ್ಯವಾಗಿದೆ. ಭಾರತವು ಈಗ ಜಗತ್ತಿನ ಬಲಿಷ್ಠ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿದೆ. ಭಾರತದ ಸ್ವದೇಶಿ ಡಿಜಿಟಲ್ ಪಾವತಿ ವ್ಯವಸ್ಥೆಯಾದ ಯುಪಿಐ ದೇಶದ ಮೂಲೆ ಮೂಲೆಗೂ ತಲುಪಿ ನಗದು ರಹಿತ ಪಾವತಿಯಲ್ಲಿ ಜಾಗತಿಕ ದಾಖಲೆ ಬರೆದಿದೆ ಎಂದರು.

ಜನ್‌ಧನ್ ಯೋಜನೆ ಮೂಲಕ ಬ್ಯಾಂಕಿಂಗ್ ಸೌಲಭ್ಯದಿಂದ ವಂಚಿತರಾಗಿದ್ದ ಬಡವರಿಗಾಗಿ 55 ಕೋಟಿಗೂ ಹೆಚ್ಚು ಶೂನ್ಯ ಠೇವಣಿ ಖಾತೆಗಳನ್ನು ತೆರೆಯಲಾಗಿದೆ. ಸರ್ಕಾರದ ಸಬ್ಸಿಡಿಗಳು ಮತ್ತು ಕಲ್ಯಾಣ ಯೋಜನೆಗಳ ಹಣವು ಯಾವುದೇ ಮಧ್ಯವರ್ತಿಗಳಿಲ್ಲದೆ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆಯಾಗುತ್ತಿದೆ. ಇದು ಭಾರತದಲ್ಲಿ ಪರಿವರ್ತನಾತ್ಮಕ ಕ್ರಾಂತಿಕಾರಿ ಹೆಜ್ಜೆಯಾಗಿದೆ ಎಂದು ಪ್ರತಿಪಾದಿಸಿದರು.

ಸಾಮಾಜಿಕ ಮತ್ತು ಬಡವರ ಕಲ್ಯಾಣ ಯೋಜನೆಗಳ ಜಾರಿಯಲ್ಲಿಯೂ ನರೇಂದ್ರ ಮೋದಿಯವರು ಸದಾ ಮುಂದೆ ಇದ್ದಾರೆ. ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆಯ ಮೂಲಕ ದೇಶದ 81 ಕೋಟಿಗೂ ಹೆಚ್ಚು ಜನರಿಗೆ ಉಚಿತ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ ಎಂದರು.

ಸ್ವಚ್ಛ ಭಾರತ ಅಭಿಯಾನ ಪ್ರಧಾನಿಗಳ ಮಹತ್ವಾಕಾಂಕ್ಷೆಯ ಯೋಜನೆಯಾಗಿದ್ದು, ಕಳೆದ 12 ವರ್ಷಗಳಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯ ವಿಷಯದಲ್ಲಿ ಗುರುತರವಾದ ಬದಲಾವಣೆ ನೋಡುತ್ತಿದ್ದೇವೆ. ಆಯುಷ್ಮಾನ್ ಭಾರತ್ ಜಗತ್ತಿನ ಅತಿ ದೊಡ್ಡ ಆರೋಗ್ಯ ವಿಮಾ ಯೋಜನೆ. ಇದರ ಅಡಿ ದೇಶದ ಕೋಟ್ಯಂತರ ಜನರಿಗೆ ಉಚಿತ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಒದಗಿಸಲಾಗಿದೆ. ಬಡವರು ಬಹು ದೊಡ್ಡ ಪ್ರಮಾಣದಲ್ಲಿ ಈ ವಿಮಾ ಯೋಜನೆಯ ಪ್ರಯೋಜನ ಪಡೆಯುತ್ತಿದ್ದಾರೆ ಎಂದರು.

> ಆತ್ಮನಿರ್ಭರ ಭಾರತ, ಮೇಕ್ ಇನ್ ಇಂಡಿಯಾ ಯೋಜನೆಯ ಮೂಲಕ ಕೈಗಾರಿಕೆ ಮತ್ತು ಉತ್ಪಾದನಾ ಕ್ಷೇತ್ರಕ್ಕೆ ನರೇಂದ್ರ ಮೋದಿ ಅವರು ಬಹುದೊಡ್ಡ ಕೊಡುಗೆ ನೀಡಿದ್ದಾರೆ. 2047ರ ವೇಳೆಗೆ ಭಾರತವನ್ನು ವಿಕಸಿತ ಭಾರತವನ್ನಾಗಿ ರೂಪಿಸುವ ಮಹಾನ್ ಕನಸನ್ನು ಪ್ರಧಾನಿಗಳು ಹೊಂದಿದ್ದು, ಅವರ ಕನಸು ನನಸಾಗುವ ನಿಟ್ಟಿನಲ್ಲಿ ನಾವೆಲ್ಲರೂ ಅವಿರತವಾಗಿ ಕೆಲಸ ಮಾಡುತ್ತಿದ್ದೇವೆ.
> -ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ.

ಈ ವೇಳೆ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ 10 ಮಂದಿ ಸಾಧಕರನ್ನು ಅಭಿನಂದಿಸಲಾಯಿತು. ವೇದಿಕೆಯಲ್ಲಿ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ. ತಮ್ಮಣ್ಣ, ಕೆ.ಸಿ.ನಾರಾಯಣಗೌಡ, ಶಾಸಕರಾದ ಹೆಚ್.ಟಿ.ಮಂಜು, ಕೆ.ವಿವೇಕಾನಂದ, ಮಾಜಿ ಶಾಸಕರಾದ ಕೆ.ಸುರೇಶ್‌ಗೌಡ, ಡಾ.ಕೆ.ಅನ್ನದಾನಿ, ಜಿ.ಬಿ.ಶಿವಕುಮಾರ್, ಕೆ.ಟಿ.ಶ್ರೀಕಂಠೇಗೌಡ, ರವೀಂದ್ರ ಶ್ರೀಕಂಠಯ್ಯ, ಎನ್‌ಡಿಎ ಮುಖಂಡರಾದ ಬಿ.ಆರ್.ರಾಮಚಂದ್ರ, ಡಿ.ರಮೇಶ್, ಡಾ.ಇಂದ್ರೇಶ್, ಡಾ.ಸಿದ್ದರಾಮಯ್ಯ, ನಾಗೇಶ್, ರವಿ ಕಂಸಾಗರ ಸೇರಿದಂತೆ ಇನ್ನಿತರರಿದ್ದರು.

ರೈತರಿಗೆ ಭೂ ಪರಿಹಾರ ನೀಡಲು ವಿಳಂಬ ಹಿನ್ನೆಲೆ

ಕೆ.ಆರ್.ಪೇಟೆ ಹೇಮಾವತಿ ನೀರಾವರಿ ಕಚೇರಿ ಜಪ್ತಿ


ನ್ಯಾಯಾಲಯದ ಆದೇಶದ ಮೇರೆಗೆ ಹೇಮಾವತಿ ನೀರಾವರಿ ಕಚೇರಿ ಜಪ್ತಿ ಮಾಡಲಾಯಿತು.

ಕೆ.ಆರ್.ಪೇಟೆ, ಜೂ.14– ರೈತರಿಗೆ ಭೂ ಪರಿಹಾರ ನೀಡಲು ವಿಳಂಬ ಮಾಡಿದ ಹಿನ್ನೆಲೆಯಲ್ಲಿ ಪಟ್ಟಣದ ಕಾವೇರಿ ನೀರಾವರಿ ಇಲಾಖೆಯ ಹೇಮಾವತಿ ಯೋಜನೆ ಕಚೇರಿಯನ್ನು ಮಂಡ್ಯ ಜಿಲ್ಲಾ ಮತ್ತು ಕೆ.ಆರ್.ಪೇಟೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಕೋರ್ಟ್ ಸಿಬ್ಬಂದಿ ಹಾಗೂ ವಕೀಲರ ಸಮ್ಮುಖದಲ್ಲಿ ಜಪ್ತಿ ಮಾಡಿ ಪೀಠೋಪಕರಣಗಳು, ಕಂಪ್ಯೂಟರ್ ಹಾಗೂ ಪ್ರಿಂಟರ್‌ಗಳನ್ನು ನ್ಯಾಯಾಲಯದ ವಶಕ್ಕೆ ಪಡೆದುಕೊಳ್ಳಲಾಯಿತು.

ಹೊಸಹೊಳಲು ಮಲ್ಲಾಪುರದ ಯೋಜನೆಗಾಗಿ ತಾಲೂಕಿನ 40ಕ್ಕೂ ಹೆಚ್ಚು ರೈತರ ಜಮೀನನ್ನು 1997–98ರಲ್ಲಿ ವಶಪಡಿಸಿಕೊಳ್ಳಲಾಗಿತ್ತು. ಕಾನೂನು ಪ್ರಕಾರ ನಿಗದಿತ ಅವಧಿಯಲ್ಲಿ ಭೂ ಪರಿಹಾರ ಪಾವತಿಯಾಗಬೇಕಿದ್ದರೂ, 28 ವರ್ಷ ಕಳೆದರೂ ಹೇಮಾವತಿ ಇಲಾಖೆ ಪರಿಹಾರ ನೀಡದೆ ನಿರ್ಲಕ್ಷ್ಯ ವಹಿಸಿತ್ತು. ಇದರಿಂದ ಸಂಕಷ್ಟಕ್ಕೆ ಸಿಲುಕಿದ್ದ ರೈತರು ನ್ಯಾಯಾಲಯದ ಮೊರೆ ಹೋಗಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಮಂಡ್ಯ ಜಿಲ್ಲಾ ನ್ಯಾಯಾಲಯ ಹಾಗೂ ಕೆ.ಆರ್.ಪೇಟೆ ಸಿವಿಲ್ ನ್ಯಾಯಾಲಯ ರೈತರ ಪರವಾಗಿ ಆದೇಶ ನೀಡಿ ಭೂ ಪರಿಹಾರ ಪಾವತಿಸದ ಹಿನ್ನೆಲೆಯಲ್ಲಿ ಎಚ್‌ಎಲ್‌ಬಿಸಿ ನಂ 3 ಕಚೇರಿಯಲ್ಲಿರುವ ಸಾಮಗ್ರಿಗಳನ್ನು ಜಪ್ತಿ ಮಾಡಿ, ಪರಿಹಾರ ಮೊತ್ತ ವಸೂಲಿ ಮಾಡುವಂತೆ ನ್ಯಾಯಾಲಯದ ಸಿಬ್ಬಂದಿಗೆ ಸೂಚಿಸಿದ್ದರ ಮೇರೆಗೆ ಕಚೇರಿ ಜಪ್ತಿ ಮಾಡಲಾಯಿತು.

ಜಪ್ತಿ ಕಾರ್ಯಾಚರಣೆ: ನ್ಯಾಯಾಲಯದ ಸಿಬ್ಬಂದಿ, ಸಂತ್ರಸ್ತ ರೈತರು ಹಾಗೂ ವಕೀಲರ ಸಮ್ಮುಖದಲ್ಲಿ ಕೆ.ಆರ್.ಪೇಟೆ ಎಚ್‌ಎಲ್‌ಬಿಸಿ ನಂ.3 ಕಚೇರಿಗೆ ಆಗಮಿಸಿದರು. ಕೋರ್ಟ್ ಆದೇಶದಂತೆ ಕಚೇರಿಯಲ್ಲಿದ್ದ ಕಂಪ್ಯೂಟರ್, ಪ್ರಿಂಟರ್, ಟೇಬಲ್, ಚೇರ್ ಸೇರಿದಂತೆ ಎಲ್ಲಾ ಪೀಠೋಪಕರಣಗಳನ್ನು ಪಂಚನಾಮೆ ನಡೆಸಿ ವಶಕ್ಕೆ ಪಡೆಯಲಾಯಿತು.

ಈ ವೇಳೆ ಹೈಕೋರ್ಟ್ ವಕೀಲ ವಿ.ಎಸ್.ಧನಂಜಯ್ ಕುಮಾರ್, ಸಂತ್ರಸ್ತ ರೈತರಾದ ವಿಜಯರಂಗ, ಎಂ.ಪಿ.ಪುಟ್ಟರಾಜು, ಕೃಷ್ಣೇಗೌಡ, ಯೋಗೇಶ್, ಸ್ವಾಮಿ ಕೆ.ಎಸ್, ಶ್ರೀನಿವಾಸ್, ರಾಮಕೃಷ್ಣೇಗೌಡ, ಬೆಟ್ಟೇಗೌಡ, ಚಲುವಯ್ಯ, ಮಹೇಶ್ ಗೌಡ, ಮೊರಲಿಂಗೇಗೌಡ, ಮೆಗಣ್ಣೇಗೌಡ, ನಾಗರಾಜಯ್ಯ, ಪಿ.ಜೆ.ನಾರಾಯಣಸ್ವಾಮಿ, ಪ್ರಕಾಶ್, ಶಿವರಾಮು, ಜಗದೀಶ್, ಕಳ್ಳೇಗೌಡ, ಸೋಮನಾಥ್ ಸೇರಿದಂತೆ ನೂರಾರು ರೈತರು ಉಪಸ್ಥಿತರಿದ್ದರು.

ಕಳಪೆ ಬಿತ್ತನೆ ಬೀಜದಿಂದ ಭತ್ತದ ಫಸಲು ನಾಶ

ಪರಿಹಾರ ನೀಡುವಂತೆ ರೈತ ಮಹದೇವು ಆಗ್ರಹ


ಕಳಪೆ ಬಿತ್ತನೆ ಬೀಜದಿಂದಾಗಿ ಭತ್ತದ ಬೆಳೆ ಸರಿಯಾಗಿ ಬಾರದಿರುವುದು.

ಭಾರತೀನಗರ, ಜೂ.14– ಕಳಪೆ ಬಿತ್ತನೆ ಬೀಜ ನಾಟಿ ಮಾಡಿದ ಪರಿಣಾಮ ಇಲ್ಲಿಗೆ ಸಮೀಪದ ರೈತರೊಬ್ಬರ ಭತ್ತದ ಫಸಲು ಸಂಪೂರ್ಣ ನಾಶವಾಗಿರುವ ಘಟನೆ ನಡೆದಿದೆ.

ಗ್ರಾಮದ ನಿವಾಸಿ ಮಹದೇವು ಎಂಬುವರಿಗೆ ಸೇರಿದ ಭತ್ತದ ಫಸಲು ನಾಶವಾಗಿರುವುದು. ಭಾರತೀನಗರದ ಆಗ್ರೋ ಕೇಂದ್ರದ ಮೂಲಕ ಅಟಲ್ ಬಿತ್ತನೆ ಬೀಜವನ್ನು ಏಜೆಂಟರ ಮೂಲಕ ಮಾರಾಟ ಮಾಡಲಾಗಿತ್ತು. ಮಹದೇವು ಅವರು ಬಿತ್ತನೆ ಬೀಜ ಕೊಂಡುಕೊಳ್ಳುವ ಸಂದರ್ಭ ಈ ತಳಿ ನಮಗೆ ಬೇಡ. ಮಹಾರಾಜ ಅಥವಾ ಕಾವೇರಿ ಪ್ರೈಸ್ ಕಂಪನಿಯ ಬಿತ್ತನೆ ಬೀಜ ಕೊಡುವಂತೆ ತಿಳಿಸಿದ್ದರು. ಆದರೂ ಹೊಸ ತಳಿಯಾಗಿರುವ ಅಟಲ್ ಬಿತ್ತನೆ ಬೀಜ ನೀಡಿದ್ದರು.

ರೈತ ಮಹದೇವು ಹೊಸ ತಳಿ ಎಂದು ಉತ್ಸಾಹದಿಂದ ಭತ್ತ ಸಸಿ ಮಡಿ, ನಾಟಿ ಕೂಡ ನಡೆಸಿದ್ದರು. ಭತ್ತದ ಕೂಯ್ಲು ಹತ್ತಿರ ಬಂದಿದ್ದರೂ ರೈತರ ಗದ್ದೆಯಲ್ಲಿ ಬೆಳೆದಿರುವ ಅಟಲ್ ತಳಿಯ ಭತ್ತದ ಬೆಳೆ ಆರಂಭದಲ್ಲಿ ಚೆನ್ನಾಗಿ ಬೆಳೆಯಿತಾದರೂ ಆ ನಂತರದ ದಿನಗಳಲ್ಲಿ ಬೆಳೆ ಕುಸಿಯತೊಡಗಿತು. 2.29 ಎಕರೆಯಲ್ಲಿ ರೈತರು 20 ಕೆಜಿ ಬಿತ್ತನೆ ಬೀಜವನ್ನು ತಂದು ನಾಟಿ ಮಾಡಿದ್ದು, ಇಡೀ ಬೆಳೆ ಭತ್ತದ ಗೊಂಚಲನ್ನು ಬಿಡದೆ ವಿಫಲವಾಗಿದೆ. ಕೆಲವು ಭತ್ತದ ತೆಂಡೆಗಳು ಮಾತ್ರ ಗೊಂಚಲು ಬಿಟ್ಟಿವೆಯಾದರೂ ಅದರಲ್ಲಿನ ಕಾಳುಗಳು ಸಂಪೂರ್ಣ ಜೊಳ್ಳಾಗಿವೆ. ಈ ಸಂಬಂಧ ಬಿತ್ತನೆ ಬೀಜ ನೀಡಿದ್ದ ಆಗ್ರೋ ಕೇಂದ್ರ ಸಂಪರ್ಕಿಸಿದಾಗ ಮಾಲೀಕ ರೈತ ಸಂಪರ್ಕ ಕೇಂದ್ರದ ಅಧಿಕಾರಿಗಳಾದ ಭವಾನಿ ಅವರಿಗೆ ವಿಷಯ ಮುಟ್ಟಿಸಿದ್ದಾರೆ. ನಂತರ ಅವರು ಮಂಡ್ಯ ಕೃಷಿ ಇಲಾಖೆಯಿಂದ ಅಧಿಕಾರಿಗಳನ್ನು ಕರೆಸಿ ಭತ್ತದ ತಳಿಯನ್ನು ಪರಿಶೀಲಿಸಿ ಭತ್ತದ ಪೈರನ್ನು ಕಿತ್ತು ಪರೀಕ್ಷೆಗೆ ಒಳಪಡಿಸಿದ್ದಾರೆ.

ಇದೀಗ ಕಂಪನಿಯವರು 25 ಸಾವಿರ ರೂ. ಪರಿಹಾರ ನೀಡುತ್ತೇವೆಂದು ತಿಳಿಸಿದ್ದಾರೆ. ಆದರೆ ರೈತ ಮಹದೇವು ಇದಕ್ಕೆ ನಿರಾಕರಿಸಿದ್ದು ಕಳೆದ ಬಾರಿ ಇದೇ ಜಮೀನಿನಲ್ಲಿ ಕಾವೇರಿ ಪ್ರೈಸ್ ಭತ್ತದ ತಳಿ ನಾಟಿ ಮಾಡಿದ್ದು 60 ಕ್ವಿಂಟಾಲ್ ಇಳುವರಿ ಬಂದಿತ್ತು. ಇದನ್ನು ಪರಿಗಣಿಸಿ ಅಟಲ್ ಕಂಪನಿಯವರು ಪರಿಹಾರ ನೀಡಬೇಕು. ಕೃಷಿ ಅಧಿಕಾರಿಗಳು ಪರಿಹಾರ ಕೊಡಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಸಾಲಬಾಧೆ: ರೈತ ಆತ್ಮಹತ್ಯೆ



ಕೆ.ಆರ್.ಪೇಟೆ, ಜೂ.14– ಸಾಲಬಾಧೆ ತಾಳಲಾರದೆ ರೈತ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕಸಬಾ ಹೋಬಳಿ ತೇಗನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಟಿ.ಜೆ. ನಾಗೇಶ್ (50) ಆತ್ಮಹತ್ಯೆ ಮಾಡಿಕೊಂಡವರು. ಈತ ತಮ್ಮ 4 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಲು ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 3 ಲಕ್ಷ ರೂ. ಸೇರಿದಂತೆ ಸುಮಾರು 7 ಲಕ್ಷ ರೂ. ಸಾಲ ಮಾಡಿದ್ದರು. ಆದರೆ ಸಕಾಲಕ್ಕೆ ಮಳೆಯಾಗದ ಹಿನ್ನೆಲೆಯಲ್ಲಿ ಯಾವುದೇ ಬೆಳೆ ಬೆಳೆಯಲು ಸಾಧ್ಯವಾಗಿರಲಿಲ್ಲ. ಇದರಿಂದ ಮನನೊಂದಿದ್ದ ನಾಗೇಶ್ ಭಾನುವಾರ ಮಧ್ಯಾಹ್ನ ಮನೆಯಲ್ಲೇ ವಿಷ ಸೇವಿಸಿ ಅಸ್ವಸ್ಥಗೊಂಡಿದ್ದರು. ಕೂಡಲೇ ಅವರನ್ನು ಕೆ.ಆರ್.ಪೇಟೆ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆಯ ಮೇರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಸಾವನ್ನಪ್ಪಿದ್ದಾರೆ ಎಂದು ಮೃತರ ಪತ್ನಿ ಇಂದ್ರಮ್ಮ ಕಿಕ್ಕೇರಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಕಿಕ್ಕೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಶಾಸಕರ ಸಂತಾಪ: ಕ್ಷೇತ್ರ ಶಾಸಕ ಹೆಚ್.ಟಿ.ಮಂಜು ಅವರು ರೈತ ಟಿ.ಜೆ.ನಾಗೇಶ್ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ತಿಳಿದ ಕೂಡಲೇ ಪಟ್ಟಣದ ಸರ್ಕಾರಿ ಆಸ್ಪತ್ರೆ ಶವಾಗಾರದಲ್ಲಿ ರೈತನ ಅಂತಿಮ ದರ್ಶನ ಪಡೆದು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ಹೆಚ್.ಎಲ್.ಪುಟ್ಟಸ್ವಾಮಿ ನಿಧನ



ಮಂಡ್ಯ, ಜೂ.14– ನಿವೃತ್ತ ಕೆಇಬಿ ಅಧಿಕಾರಿ ಹೆಚ್.ಎಲ್.ಪುಟ್ಟಸ್ವಾಮಿ (88) ವಯೋಸಹಜ ಕಾಯಿಲೆಯಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಡ್ಯದ ಗೌರಿಶಂಕರ ಕಲ್ಯಾಣ ಮಂಟಪದ ಹಿಂಭಾಗದಲ್ಲಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಬಡಾವಣೆಯಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಿದ್ದು, ಸೋಮವಾರ ಬೆಳಗ್ಗೆ 10 ಗಂಟೆಗೆ ಶಂಕರ ನಗರದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ವಿ.ಬಲರಾಮ್



ಕಿಕ್ಕೇರಿ, ಜೂ.14– ಗ್ರಾಮದ ನಿವಾಸಿ ಕೆ.ವಿ.ಬಲರಾಮ್ (76) ಭಾನುವಾರ ನಿಧನರಾದರು. ಮೃತರು ರಾಜ್ಯ ಗೃಹರಕ್ಷಕ ದಳದ ಕಮಾಂಡೆಂಟ್ ಆಗಿ ರಾಜ್ಯದ ವಿವಿಧೆಡೆ ಸೇವೆ ಸಲ್ಲಿಸಿ ರಾಷ್ಟ್ರಪತಿ ಪದಕ ಪಡೆದಿದ್ದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನ ಸಿಂಗಸಂದ್ರ ಕೂಡ್ಲು ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಮುಖ್ಯಮಂತ್ರಿಗಳೇ ಇದರ ದೊರೆ

ಗುಜರಾತ್‌ನಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳು ಮತ್ತು ಟೌನ್ ಶಿಪ್‌ಗಳು ಬಂದಿರುವುದು ನಿಜ. ಆದರೆ ಅಲ್ಲಿ ರೈತರ ಕೃಷಿ ಭೂಮಿಯನ್ನು ಕಿತ್ತುಕೊಂಡು ಇಂತಹ ಯೋಜನೆಗಳನ್ನು ಮಾಡಿಲ್ಲ. ಒಣಭೂಮಿ ಮತ್ತು ನೀರಾವರಿಗೆ ಯೋಗ್ಯವಲ್ಲದ ಪ್ರದೇಶಗಳಲ್ಲಿ ಇಂತಹ ಬೃಹತ್ ಯೋಜನೆಗಳನ್ನು ಅನುಷ್ಠಾನ ಮಾಡಿದ್ದಾರೆ. ಬೇಕಿದ್ದರೆ ಇವರು ಅಲ್ಲಿಗೆ ಹೋಗಿ ನೋಡಿಕೊಂಡು ಬರಲಿ ಎಂದರು.

ರೂಪ–ವೇಷವೇ ಬದಲಾಯಿತು: ಹಿಂದೆ ಬೆಂಗಳೂರು ಮತ್ತು ಮೈಸೂರು ನಡುವೆ ರಸ್ತೆ ಮಾಡಲು ದೊಡ್ಡ ಪ್ರಮಾಣದಲ್ಲಿ ಭೂಮಿಯನ್ನು ಸ್ವಾಧೀನ ಮಾಡಿಕೊಂಡರು. ದೇವೇಗೌಡರು ಮುಖ್ಯಮಂತ್ರಿ ಆಗಿದ್ದಾಗ ಈ ಯೋಜನೆಗೆ ಚಾಲನೆ ಸಿಕ್ಕಿತು. ಅವರು ಪ್ರಧಾನಿಯಾಗಿ ದೆಹಲಿಗೆ ಹೋದ ಕೂಡಲೇ ಮೆಲ್ಲಗೆ ಈ ಯೋಜನೆಯ ರೂಪ–ವೇಷಗಳೇ ಬದಲಾದವು. ಆಮೇಲೆ ಬಿಎಂಐಸಿಪಿ ಎಂದು ಮಾಡಿಕೊಂಡು ಭೂಮಿಯನ್ನು ಲೂಟಿ ಮಾಡುವ ಕೆಲಸಕ್ಕೆ ಕೈ ಹಾಕಲಾಯಿತು. ಬಿಎಂಐಸಿಪಿ ಪ್ರಾಧಿಕಾರಕ್ಕೆ ಈಗಿನ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿದ್ದರು. ಆಮೇಲೆ ಏನೇನು ನಡೆಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ 1.75 ಲಕ್ಷ ಎಕರೆ ರೈತರ ಭೂಮಿಯನ್ನು ರಸ್ತೆ ಮತ್ತು ಟೌನ್‌ಶಿಪ್ ನಿರ್ಮಾಣ ಮಾಡಲು ಸ್ವಾಧೀನ ಮಾಡಿಕೊಳ್ಳಲು ನೋಟಿಫಿಕೇಶನ್ ಹೊರಡಿಸಲಾಯಿತು. ಕಳೆದ 30 ವರ್ಷಗಳಲ್ಲಿ ಯೋಜನೆ ಏನೆಲ್ಲಾ ಆಯಿತು ಎಂಬುದು ರಾಜ್ಯದ ಜನರಿಗೆ ಗೊತ್ತಿದೆ ಎಂದು ಕುಮಾರಸ್ವಾಮಿ ತಿಳಿಸಿದರು.

ಕಾಂಗ್ರೆಸ್ಸೇ ಅಪಪ್ರಚಾರ ಮಾಡಿತ್ತು: ನಾನು ಐದು ಟೌನ್‌ಶಿಪ್‌ಗಳನ್ನು ಮಾಡಿದಾಗ ಇದೇ ಕಾಂಗ್ರೆಸ್‌ನವರು ದೊಡ್ಡ ಪ್ರಮಾಣದಲ್ಲಿ ಅಪಪ್ರಚಾರ ನಡೆಸಿದರು. ಹೆಚ್.ಕೆ.ಪಾಟೀಲ್ ಅಧ್ಯಕ್ಷತೆಯಲ್ಲಿ ಸತ್ಯಶೋಧನ ಸಮಿತಿ ರಚಿಸಿ ಎಲ್ಲಾ ಕಡೆಗೂ ಹೋಗಿ ಸತ್ಯಶೋಧನೆ ಮಾಡಿದ್ದೇ ಮಾಡಿದ್ದು. ಅವರ ವರದಿ ಏನಾಯಿತು, ಆ ವರದಿಯಲ್ಲಿ ಏನಿದೆ, ಜನರ ಅಭಿಪ್ರಾಯ ಏನು, ಎಂಬುದನ್ನು ಜನರ ಮುಂದೆ ಇಡಲಿ. ಆಮೇಲೆ ಬಿಡದಿ ಯೋಜನೆ ಬಗ್ಗೆ ಮಾತಾಡಲಿ ಎಂದು ಸಚಿವ ಕುಮಾರಸ್ವಾಮಿ ಸವಾಲು ಹಾಕಿದರು.

ಫಲವತ್ತಾದ ಭೂಮಿಯೇ ಏಕೆಬೇಕು: ರಾಜ್ಯದ ಅನೇಕ ಕಡೆ ನೀರಾವರಿಗೆ ಮತ್ತು ಕೃಷಿಗೆ ಯೋಗ್ಯವಲ್ಲದ ಒಣಭೂಮಿ ಬೇಕಾದಷ್ಟಿದೆ. ಅಂತಹ ಕಡೆ ಯೋಜನೆಗಳನ್ನು ಮಾಡಲಿ. ಬಿಡದಿ ಬಳಿ ಉತ್ತಮ ನೀರಾವರಿ ಸೌಲಭ್ಯ ಇದೆ. ಫಲವತ್ತಾದ ಭೂಮಿ ಇದೆ. ಪ್ರತಿ ತಿಂಗಳು 6 ಲಕ್ಷ ಲೀಟರ್ ಹಾಲು ಬೆಂಗಳೂರು ಡೇರಿಗೆ ಪೂರೈಕೆಯಾಗುತ್ತಿದೆ. ಇಂತಹ ಜಾಗದಲ್ಲಿ ಟೌನ್‌ಶಿಪ್ ಮಾಡಿ ಏನು ಸಾಧನೆ ಮಾಡುತ್ತಾರೆ ಇವರು ಎಂದು ಖಾರವಾಗಿ ಪ್ರಶ್ನಿಸಿದರು.

ಸಾಲಕ್ಕೆ ಮುಂದಾಗಿದ್ದಾರೆ: ರೈತರ ಜಾಗವನ್ನು ವಶಪಡಿಸಿಕೊಳ್ಳುವುದಾಗಿ ಹೇಳಿ ಹುಡ್ಕೋ ಬ್ಯಾಂಕ್‌ನಿಂದ 12,000 ಕೋಟಿ ಸಾಲ ಪಡೆಯಲು ಹೊರಟಿದ್ದಾರೆ. ರೈತರ ಹೆಸರಲ್ಲಿ ಸಾಲ ಪಡೆಯುತ್ತಿದ್ದಾರೆ. ಆದರೆ ರೈತರಿಗೆ ಇನ್ನೂ ಒಂದು ರೂಪಾಯಿ ತಲುಪಿಲ್ಲ. ಪಿಪಿಪಿ ಮಾಡಲ್‌ನಲ್ಲಿ ಟೌನ್‌ಶಿಪ್ ಮಾಡಲು ಮುಂದಾಗಿದ್ದಾರೆ. ಇದನ್ನು ಸರ್ಕಾರ ಅಭಿವೃದ್ಧಿ ಮಾಡಲ್ಲ. ರಿಯಲ್ ಎಸ್ಟೇಟ್ ಕುಳಗಳಿಗೆ ಜಾಗ ಕೊಡಲಾಗುತ್ತದೆ. ಸರ್ಕಾರವೇ ರಿಯಲ್ ಎಸ್ಟೇಟ್ ಏಜೆಂಟ್ ಆಗಿ ಕೆಲಸ ಮಾಡುತ್ತಿದೆ ಎಂದು ಕುಮಾರಸ್ವಾಮಿ ದೂರಿದರು.

ಕಾರಣಕ್ಕೂ ನಿಲ್ಲದು

ಮರು ಅರ್ಜಿ ಸಲ್ಲಿಸಬೇಕು: ಗೃಹಲಕ್ಷ್ಮೀ ಯೋಜನೆ ಫಲಾನುಭವಿಗಳ ಪಟ್ಟಿಯಲ್ಲಿ ಮೃತರು ಹಾಗೂ ಅನರ್ಹರು ಇರುವುದರಿಂದ ಕೋಟ್ಯಂತರ ರೂಪಾಯಿ ದುರುಪಯೋಗವಾಗುತ್ತಿದೆ. ಜೀವನೋಪಾಯಕ್ಕೆ ನೆರವಾಗುತ್ತಿರುವ ಯೋಜನೆ ಹಣ ಕರ್ನಾಟಕದ ಬ್ಯಾಂಕ್ ಖಾತೆಗಳಿಗೆ ಹೋಗುತ್ತಿದೆಯೇ ಅಥವಾ ಬೇರೆ ರಾಜ್ಯಗಳ ಬ್ಯಾಂಕ್‌ಗಳಿಗೆ ಹೋಗುತ್ತಿದೆಯೇ, ಸಾಲ ಮರುಪಾವತಿಗೆ ಬಳಸಲಾಗುತ್ತಿದೆಯೇ, ಚಿಟ್ ಫಂಡ್ ಅಥವಾ ಇತರ ಉದ್ದೇಶಗಳಿಗೆ ಬಳಸಲಾಗುತ್ತಿದೆಯೇ ಎಂಬುದನ್ನು ತಿಳಿಯಬೇಕು. ಯಾರನ್ನೂ ಪಟ್ಟಿಯಿಂದ ತೆಗೆದುಹಾಕಲು ಬಯಸುವುದಿಲ್ಲ. ಆದರೆ ಫಲಾನುಭವಿಗಳು ಸರಿಯಾದ ಮಾಹಿತಿಯನ್ನು ನೀಡಬೇಕು. ಕೆಲವರು ಒಂದೇ ಹೆಸರಿನಲ್ಲಿ ಐದು ವಿದ್ಯುತ್ ಮೀಟರ್‌ಗಳನ್ನು ನೋಂದಾಯಿಸಿ ಕೊಂಡಿದ್ದಾರೆ. ಅವರು ಮನೆ ಮಾಲೀಕರೇ ಅಥವಾ ಬಾಡಿಗೆದಾರರೇ, ಕರ್ನಾಟಕದವರೇ ಅಥವಾ ಬೇರೆ ರಾಜ್ಯದವರೇ ಎಂಬ ಮಾಹಿತಿ ಸರ್ಕಾರಕ್ಕೆ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ಗೃಹಲಕ್ಷ್ಮೀ ಹಾಗೂ ಗೃಹಜ್ಯೋತಿ ಯೋಜನೆಗೆ ಅರ್ಹ ಫಲಾನುಭವಿಗಳು ಹೊಸದಾಗಿ ಅರ್ಜಿ ಸಲ್ಲಿಸಬೇಕು ಎಂದು ನಿನ್ನೆ ಅಧಿಕಾರಿಗಳ ಸಭೆ ಬಳಿಕ ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದ್ದರು.

ಕೆಆರ್‌ಎಸ್‌ನಲ್ಲಿ ನೀರಿನ ಮಟ್ಟ ತೀವ್ರ ಕುಸಿತ

ನೀರಿನ ಮಟ್ಟ ಕೇವಲ 81.34 ಅಡಿಗಳಾಗಿದೆ. ಕೊಡಗಿನಲ್ಲಿ ಮಳೆಯಾಗದ ಕಾರಣ ಜಲಾಶಯಕ್ಕೆ ಕೇವಲ 634 ಕ್ಯುಸೆಕ್ಸ್ ಹರಿದು ಬರುತ್ತಿದ್ದು, ಕುಡಿಯುವ ನೀರಿಗಾಗಿ ಜಲಾಶಯದಿಂದ 436 ಕ್ಯುಸೆಕ್ಸ್ ನೀರನ್ನು ಹೊರಗೆ ಬಿಡಲಾಗುತ್ತಿದೆ.

ಕಬಿನಿ ಜಲಾಶಯದ ಪರಿಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಲ್ಲ. 2,284 ಅಡಿಯ ಕಬಿನಿ ಜಲಾಶಯದಲ್ಲಿ ಕಳೆದ ವರ್ಷದ ಇದೇ ದಿನದಂದು 2,276 ಅಡಿ ನೀರಿನ ಮಟ್ಟವಿತ್ತು. ಜಲಾಶಯಕ್ಕೆ 2,461 ಕ್ಯುಸೆಕ್ಸ್ ನೀರು ಹರಿದು ಬರುತ್ತಿತ್ತು. ಜಲಾಶಯದಿಂದ 5,000 ಕ್ಯುಸೆಕ್ಸ್ ನೀರನ್ನು ಹೊರಗೆ ಬಿಡಲಾಗುತ್ತಿತ್ತು. ಆದರೆ ಕಬಿನಿ ಜಲಾಶಯದ ಇಂದಿನ ಮಟ್ಟ 2,252 ಅಡಿಗಳಾಗಿದ್ದು, ಜಲಾಶಯಕ್ಕೆ ಕೇವಲ 1114 ಕ್ಯುಸೆಕ್ಸ್ ನೀರು ಹರಿದು ಬರುತ್ತಿದೆ. ಜಲಾಶಯದಿಂದ 600 ಕ್ಯುಸೆಕ್ಸ್ ನೀರನ್ನು ಹೊರಗೆ ಬಿಡಲಾಗುತ್ತಿದೆ. ಪರಿಸ್ಥಿತಿ ಹೀಗೆ ಮುಂದುವರೆದರೆ ಕುಡಿಯುವ ನೀರಿಗೆ ಕೂಡ ಅಭಾವ ಉಂಟಾಗುವ ಸಾಧ್ಯತೆ ಇದೆ.

ಕೆಆರ್‌ಎಸ್ ಜಲಾಶಯ ಭರ್ತಿಯಾಗಲು ಕೊಡಗು ಜಿಲ್ಲೆಯಲ್ಲಿ ಧಾರಾಕಾರ ಮಳೆಯಾಗಬೇಕು. ಹಾಗೆಯೇ ಕಬಿನಿ ಜಲಾಶಯ ಭರ್ತಿಯಾಗಲು ಕೇರಳದ ವಯನಾಡಿನಲ್ಲಿ ಭಾರೀ ಮಳೆಯಾಗಬೇಕು. ಆದರೆ ಕೊಡಗು ಜಿಲ್ಲೆಯಲ್ಲಿ ಮಳೆಯ ಪ್ರಮಾಣ ತೀರಾ ಕ್ಷೀಣಿಸಿದ್ದು, ಕೇರಳದ ವಯನಾಡಿನಲ್ಲಿ ಕೂಡ ಮಳೆಯ ಪ್ರಮಾಣ ಬಹಳ ಕಡಿಮೆಯಾಗಿದೆ. ಇದರಿಂದ ಕೆಆರ್ ಎಸ್ ಹಾಗೂ ಕಬಿನಿ ಜಲಾ ಶಯದ ನೀರಿನ ಮಟ್ಟ ದಿನಕಳೆದಂತೆ ಇಳಿಕೆಯಾಗುತ್ತಿದ್ದು, ಇದು ರೈತರು ಹಾಗೂ ನಗರ ಪ್ರದೇಶದ ಜನರನ್ನು ದಿಗಿಲುಗೊಳಿಸಿದೆ.

ಕೇರಳದ ವಯನಾಡಿನಲ್ಲಿ ಮಳೆ ಮಾಯ

ಕೇರಳದ ವಯನಾಡುನಲ್ಲಿ ಆಗುವ ಸಮೃದ್ಧ ಮಳೆ ಮೈಸೂರಿನ ಕಬಿನಿ ಜಲಾಶಯದ ನೀರಿನ ಮೂಲವಾಗಿದೆ. ವಯನಾಡುನಲ್ಲಿ ಮಳೆ ಆಗಲಿಲ್ಲವೆಂದರೆ ಕಬಿನಿ ಜಲಾಶಯಕ್ಕೆ ನೀರಿನ ಹರಿವೆ ಇರುವುದಿಲ್ಲ. ಅತ್ಯಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ವಯನಾಡು ಕೂಡ ಒಂದು. ವಯನಾಡು ಜಿಲ್ಲೆಯಲ್ಲಿ ವಾರ್ಷಿಕವಾಗಿ ಸರಾಸರಿ 2,300 ಮಿಲಿ ಮೀಟರ್ ನಿಂದ 2,500 ಮಿಲಿ ಮೀಟರ್ ಮಳೆಯಾಗುತ್ತದೆ. ಇದು ಪ್ರತಿ ವರ್ಷದ ವಾಡಿಕೆ ಮಳೆಯಾಗಿದೆ. ಕೆಲವು ವರ್ಷ 4,000 ಮಿಲಿ ಮೀಟರ್ ಗಿಂತಲೂ ಹೆಚ್ಚು ಮಳೆಯಾಗಿದೆ. ಆದರೆ ಕೇರಳದ ಹವಾಮಾನ ಇಲಾಖೆ ದತ್ತಾಂಶದ ಪ್ರಕಾರ ಮುಂಗಾರು ಆರಂಭವಾದ ನಂತರ ಕೇವಲ 66.8 ಮಿಲಿ ಮೀಟರ್ ಮಳೆಯಾಗಿದೆ. ಇದರಿಂದ ಸಹಜವಾಗಿಯೇ ಕಬಿನಿ ಜಲಾಶಯದ ನೀರಿನ ಮಟ್ಟ ಏರಿಕೆಯಾಗದೆ ಇಳಿಕೆಯಾಗುತ್ತಿದೆ.

ರೈಲು ಹರಿದು 8 ಮಂದಿ ಬಲಿ

ಇಡೀ ರೈಲಿನಲ್ಲಿ ಕಾಳ್ಗಿಚ್ಚಿನಂತೆ ಹರಡಿ, ಪ್ರಯಾಣಿಕರಲ್ಲಿ ತೀವ್ರ ಭೀತಿ ಮೂಡಿಸಿತು. ಬೆಂಕಿಯ ಜ್ವಾಲೆಗೆ ಸಿಲುಕುತ್ತೇವೆ ಎಂಬ ಭಯದಿಂದ ರೈಲಿನೊಳಗೆ ಕಾಲ್ತುಳಿತದ ವಾತಾವರಣ ನಿರ್ಮಾಣವಾಯಿತು.

ಆತಂಕ ಹೆಚ್ಚಾಗಿದ್ದರಿಂದ ಕೆಲ ಪ್ರಯಾಣಿಕರು, ರೈಲು ನಿಲ್ಲುವವರೆಗೂ ಕಾಯುವ ತಾಳ್ಮೆ ಕಳೆದುಕೊಂಡರು. ತಮ್ಮ ಜೀವ ಉಳಿಸಿಕೊಳ್ಳಬೇಕೆಂದು ಚಲಿಸುತ್ತಿದ್ದ ರೈಲಿನ ಬಾಗಿಲು ಮತ್ತು ಕಿಟಕಿಗಳಿಂದ ಹೊರಗೆ ಜಿಗಿಯಲು ಪ್ರಾರಂಭಿಸಿದರು. ದುರಾದೃಷ್ಟವಶಾತ್, ಪ್ರಯಾಣಿಕರು ಜಿಗಿದ ಪಕ್ಕದ ಹಳಿಯಲ್ಲೇ ಧೋಲ್‌ಪುರ ಕಡೆಯಿಂದ ಅತ್ಯಂತ ವೇಗವಾಗಿ ಬಂದ ಪಾತಾಲಕೋಟ್ ಎಕ್ಸ್‌ಪ್ರೆಸ್ ರೈಲು ಬಂದಿದ್ದರಿಂದ ಘೋರ ದುರಂತ ಸಂಭವಿಸಿತು. ಸುಮಾರು 8 ಮಂದಿ ರೈಲಿಗೆ ಸಿಲುಕಿ ಮೃತಪಟ್ಟರು ಎಂದು ತಿಳಿದುಬಂದಿದೆ.

ಅಪಘಾತವನ್ನು ಕಂಡ ತಕ್ಷಣ ಸ್ಥಳೀಯ ನಿವಾಸಿಗಳು ರೈಲ್ವೆ ಇಲಾಖೆ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಇದರೊಂದಿಗೆ, ಮೊರೆನಾ ಎಸ್‌ಪಿ ಧರ್ಮರಾಜ್ ಮೀನಾ ಅವರ ನೇತೃತ್ವದಲ್ಲಿ ಜಿಆರ್‌ಪಿ ಮತ್ತು ಆರ್‌ಪಿಎಫ್ ತಂಡಗಳು ತಕ್ಷಣ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ಆರಂಭಿಸಿದವು. ಅದರಂತೆ, ಹಳಿಗಳ ಮೇಲೆ ರಕ್ತದ ಮಡುವಿನಲ್ಲಿ ಬಿದ್ದಿದ್ದ ಗಾಯಾಳುಗಳನ್ನು ತಕ್ಷಣವೇ ಹತ್ತಿರದ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಯಿತು. ರೈಲ್ವೆ ಇಲಾಖೆಯ ಪ್ರಾಥಮಿಕ ತನಿಖೆಯ ಪ್ರಕಾರ, ಉದಯಪುರ ಇಂಟರ್‌ಸಿಟಿ ರೈಲಿನಲ್ಲಿ ಯಾವುದೇ ಬೆಂಕಿ ಅಪಘಾತ ಸಂಭವಿಸಿರಲಿಲ್ಲ. ಅದು ಕೇವಲ ಒಂದು ಸುಳ್ಳು ವದಂತಿ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಇನ್ನೂ, ರೈಲಿನಲ್ಲಿ ಅಂತಹ ಗೊಂದಲದ ವಾತಾವರಣವನ್ನು ಸೃಷ್ಟಿಸಿದ ಮತ್ತು ಸುಳ್ಳು ವದಂತಿಯನ್ನು ಹರಡಿದ ಕಿಡಿಗೇಡಿಗಳು ಯಾರು ಎಂಬುದರ ಕುರಿತು ರೈಲ್ವೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪ್ರಮಾಣ ಮಾಡಿ

ಹೋಗಿದ್ದು ಯಾರು ಎಂದು ಪ್ರಶ್ನಿಸಿದರು.

ಅಶೋಕ್ ಪ್ರಮಾಣ ಮಾಡಲಿ: ಇದೇ ವೇಳೆ ವಿಪಕ್ಷ ನಾಯಕ ಆರ್.ಅಶೋಕ್ ವಿರುದ್ಧ ವಾಗ್ದಾಳಿ ನಡೆಸಿ, ನಾವು ಏನೋ ಒಂದು ಮಾಡಲು ಹೊರಟಾಗ ತರಲೆ ಮಾಡುತ್ತಿದ್ದಾರೆ. ಬೆಂಗಳೂರು ಹೊರಗೆ ಅಭಿವೃದ್ಧಿ ಮಾಡಿ ಅಂದವರು ಈಗ ಟೌನ್‌ಶಿಪ್ ವಿರೋಧ ಮಾಡುತ್ತಿದ್ದಾರೆ. ಬಹಳ ದಿನದ ಯೋಜನೆ ಇದು. ದಿಢೀರ್ ಯೋಜನೆ ಅಲ್ಲ. ಈಗ್ಯಾಕೆ ಬಿಡದಿ ಬಗ್ಗೆ ವಿರೋಧ ಮಾಡುತ್ತಿದ್ದಾರೆ. ಅಶೋಕ್ ಏನು ಟಾಟಾ ಬಿರ್ಲಾ ಮಗನಾ? ಅಶೋಕ್ ನಾನು ಎಲ್ಲೂ ದುಡ್ಡು ಪಡೆದಿಲ್ಲ ಅಂತಾ ಪ್ರಮಾಣ ಮಾಡಲಿ ಎಂದು ಸವಾಲು ಹಾಕಿದರು.

ಕಾನೂನು ಮಾನ್ಯತೆ

ಭಾರತದಲ್ಲಿ ಚಾಲನೆಯಲ್ಲಿರುವ ಬಹುತೇಕ ಕಾರುಗಳಲ್ಲಿ ಶೇ.85ರಷ್ಟು ಅಥವಾ ಶೇ.100ರಷ್ಟು ಎಥೆನಾಲ್ ಬಳಸುವ ತಂತ್ರಜ್ಞಾನ ಇಲ್ಲ. ಅಧಿಕ ಪ್ರಮಾಣದ ಗ್ಯಾಸೋಲಿನ್ ಮತ್ತು ಕಡಿಮೆ ಪ್ರಮಾಣದ ಎಥೆನಾಲ್ ಮಿಶ್ರಣ ಬಳಕೆಗೆ ಮಾತ್ರ ಅನುವು ಮಾಡಿಕೊಡುತ್ತವೆ ಏಕೆಂದರೆ, ಈ ವಾಹನಗಳಲ್ಲಿ ಅಗತ್ಯ ಹಾರ್ಡ್‌ವೇರ್ ಮತ್ತು ಇಂಜಿನ್ ನಿಯತಾಂಕಗಳಿಲ್ಲ. ಆದರೆ, ಇತ್ತೀಚೆಗೆ ಮಾರುತಿ ಸುಜುಕಿ, ಹೀರೊ ಮೋಟೊಕಾರ್ಪ್, ಟೊಯೊಟಾ, ಸುಜುಕಿ ಮತ್ತು ಹುಂಡೈ ಕಂಪನಿಗಳು ಅಧಿಕ ಪ್ರಮಾಣದಲ್ಲಿ ಅಥವಾ ಸಂಪೂರ್ಣ ಎಥೆನಾಲ್ ಬಳಸಿ ಓಡಿಸಬಲ್ಲ ವಾಹನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿವೆ ಎಂದರು. ಎಥೆನಾಲ್ ನವೀಕರಿಸಬಹುದಾದ ಜೈವಿಕ ಇಂಧನವಾಗಿದ್ದು, ಪ್ರಾಥಮಿಕವಾಗಿ ಕಬ್ಬು, ಜೋಳ ಮತ್ತು ಇತರ ಕೃಷಿ ಕಚ್ಚಾ ವಸ್ತುಗಳ ಉಪ ಉತ್ಪನ್ನವಾಗಿದೆ. ಭಾರತದಲ್ಲಿ ಹೆಚ್ಚಿನ ಎಥೆನಾಲ್ ಅನ್ನು ಮೊಲಾಸಸ್‌ನಂತಹ ಕಬ್ಬಿನ ಆಧಾರಿತ ಉತ್ಪನ್ನಗಳಿಂದ ಉತ್ಪಾದಿಸಲಾಗುತ್ತದೆ. ಎಥೆನಾಲ್ ಅನ್ನು ವಿವಿಧ ಪ್ರಮಾಣದಲ್ಲಿ ಪೆಟ್ರೋಲ್‌ನೊಂದಿಗೆ ಬೆರೆಸಬಹುದು ಅಥವಾ ವಿಶೇಷವಾಗಿ ವಿನ್ಯಾಸಗೊಳಿಸಲಾದ ಫ್ಲೆಕ್ಸ್–ಇಂಧನ ವಾಹನಗಳಲ್ಲಿ ಸಂಪೂರ್ಣ ಅದನ್ನೇ ಬಳಸಬಹುದು ಎಂದು ತಿಳಿಸಿದರು.

ಕದನ ವಿರಾಮ ಒಪ್ಪಂದದ ಕುರಿತು ಅಂತಿಮ ನಿರ್ಧಾರವಾಗಿಲ್ಲ: ಇರಾನ್

ಟೆಹರಾನ್: ಪಶ್ಚಿಮ ಏಷ್ಯಾ ಸಂಘರ್ಷವನ್ನು ಕೊನೆಗೊಳಿಸುವ ಉದ್ದೇಶದಿಂದ ಅಮೆರಿಕ ರೂಪಿಸಿರುವ ಕದನ ವಿರಾಮ ಒಪ್ಪಂದದ ಕುರಿತು ಟೆಹರಾನ್ ಯಾವುದೇ ಅಂತಿಮ ನಿರ್ಧಾರಕ್ಕೆ ಬಂದಿಲ್ಲ ಎಂದು ಇರಾನ್‌ನ ಫಾರ್ಸ್ ಸುದ್ದಿ ಸಂಸ್ಥೆ ಭಾನುವಾರ ವರದಿ ಮಾಡಿದೆ.

ಕದನ ವಿರಾಮ ಒಪ್ಪಂದಕ್ಕೆ ಸಂಬಂಧಿಸಿದಂತೆ, ಅಮೆರಿಕದ ಪ್ರಸ್ತಾವನೆ ಕುರಿತು ಇರಾನ್ ಯಾವುದೇ ಅಂತಿಮ ನಿರ್ಧಾರವನ್ನು ತೆಗೆದುಕೊಂಡಿಲ್ಲ. ಈ ಕುರಿತು ಇರಾನಿನ ಸಂಧಾನ ತಂಡವು ಕೂಡ ಅಧಿಕೃತ ಘೋಷಣೆಗಳನ್ನು ಮಾಡಿಲ್ಲ. ಅಮೆರಿಕ ಪ್ರಸ್ತಾವನೆಯಿಂದ ಇರಾನ್‌ಗೆ ಯಾವುದೇ ಲಾಭವಿಲ್ಲ. ಅದು ನಮ್ಮ ದೇಶದ ಹಿತಾಸಕ್ತಿಗಳ ವಿರುದ್ಧವಾಗಿದೆ ಎಂದು ಕಟ್ಟರ್ ಇರಾನಿ ನಾಯಕರು ಅದನ್ನು ವಿರೋಧಿಸಿದ್ದಾರೆ ಎಂದು ಹೇಳಲಾಗಿದೆ. ಕದನ ವಿರಾಮ ಒಪ್ಪಂದಕ್ಕೆ ಇರಾನ್ ಒಪ್ಪಿಕೊಂಡಿದ್ದು, ಇಂದು(ಜೂನ್ 14) ಅವರು ಸಹಿ ಹಾಕಲಿದ್ದಾರೆ. ಅದರ ನಂತರ ಎಲ್ಲ ದೇಶಗಳಿಗೂ ಹಾರ್ಮುಜ್ ಜಲಸಂಧಿ ಮುಕ್ತವಾಗಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದರು. ಈ ಒಪ್ಪಂದಕ್ಕೆ ಯಾವುದೇ ಕಾರಣಕ್ಕೂ ನಾವು ಭಾನುವಾರ ಸಹಿ ಹಾಕುವುದಿಲ್ಲ ಎಂದು ಇರಾನ್ ಸ್ಪಷ್ಟಪಡಿಸಿತ್ತು.

ಬಿಡದಿ ಟೌನ್‌ಶಿಪ್ ವಿಚಾರದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಧ್ಯಪ್ರವೇಶಿಸಲಿ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಪತ್ರ

ಬೆಂಗಳೂರು: ಬಿಡದಿ ಟೌನ್‌ಶಿಪ್ ಭೂಸ್ವಾಧೀನ ಪ್ರಕ್ರಿಯೆ ರಾಜಕೀಯ ಸ್ವರೂಪ ಪಡೆದುಕೊಂಡಿದ್ದು, ಈ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ಮಧ್ಯಪ್ರವೇಶ ಮಾಡುವಂತೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಅವರಿಗೆ ಪ್ರತ್ಯೇಕ ಪತ್ರ ಬರೆದಿರುವ ಉಭಯ ನಾಯಕರು, ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರೈತರ ಅಹವಾಲುಗಳನ್ನು ಆಲಿಸುತ್ತಿಲ್ಲ, ಬಡ, ದಲಿತ ಹಾಗೂ ಸಣ್ಣ ರೈತರ ಜಮೀನುಗಳನ್ನು ಬಲವಂತ ವಾಗಿ ಕಸಿದುಕೊಳ್ಳುತ್ತಿದ್ದಾರೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ವಿಜಯೇಂದ್ರ ವಾಗ್ದಾಳಿ: ರಾಹುಲ್ ಗಾಂಧಿಗೆ ಬರೆದಿರುವ ಪತ್ರವನ್ನು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಬಿ.ವೈ.ವಿಜಯೇಂದ್ರ, ಬಿಡದಿ ಮತ್ತು ಹಾರೋಹಳ್ಳಿ ನಡುವೆ 18,000 ಕೋಟಿ ರೂಪಾಯಿ ವೆಚ್ಚದಲ್ಲಿ ಟೌನ್‌ಶಿಪ್ ನಿರ್ಮಿಸಲು ರಾಜ್ಯ ಸರ್ಕಾರ ಮುಂದಾಗಿದ್ದು, ಇದಕ್ಕಾಗಿ ಬರೋಬ್ಬರಿ 7,481 ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳಲು ಹೊರಟಿದೆ. 25ಕ್ಕೂ ಹೆಚ್ಚು ಹಳ್ಳಿಗಳ ಸಾವಿರಾರು ರೈತರು ಕಳೆದ 470 ದಿನಗಳಿಂದ ಶಾಂತಿಯುತವಾಗಿ ಪ್ರತಿಭಟನೆ ನಡೆಸುತ್ತಿದ್ದರೂ ಸರ್ಕಾರ ತಲೆಕೆಡಿಸಿಕೊಂಡಿಲ್ಲ. 3,500ಕ್ಕೂ ಹೆಚ್ಚು ಸಣ್ಣ ರೈತರು ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಿದ್ದರೂ, ಒಂದೇ ಒಂದು ಸಾರ್ವಜನಿಕ ವಿಚಾರಣೆಯನ್ನೂ ನಡೆಸದೆ ಜೂನ್ 11 ರಂದು ಅಂತಿಮ ಭೂಸ್ವಾಧೀನ ಅಧಿಸೂಚನೆಯನ್ನು ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಕಿಡಿಕಾರಿದ್ದಾರೆ.

ಈ ಭಾಗದ ಭೂಮಿ ಐತಿಹಾಸಿಕ 1,000 ಎಕರೆ ವಿಸ್ತೀರ್ಣದ ಭೈರಮಂಗಲ ಕೆರೆಯ ಪಕ್ಕದಲ್ಲಿದ್ದು, ಬೆಂಗಳೂರಿಗೆ ನಿತ್ಯ ಹಾಲು, ತರಕಾರಿ, ಹಣ್ಣು, ಅಡಿಕೆ ಮತ್ತು ಬಾಳೆಹಣ್ಣು ಪೂರೈಸುವ ಅನ್ನದ ಬಟ್ಟಲಾಗಿದೆ. ಮಾರುಕಟ್ಟೆ ಬೆಲೆಗಿಂತ ಅತ್ಯಂತ ಕಡಿಮೆ ಬೆಲೆಗೆ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗುತ್ತಿದ್ದು, ಕೃಷಿಯನ್ನೇ ನೆಚ್ಚಿಕೊಂಡಿರುವ ಸಾವಿರಾರು ಗ್ರಾಮೀಣ ಮಹಿಳೆಯರು ಬೀದಿಪಾಲಾಗುವ ಆತಂಕ ಎದುರಾಗಿದೆ. ಕೂಡಲೇ ಈ ಯೋಜನೆಯನ್ನು ಕೈಬಿಡುವಂತೆ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಸೂಚಿಸಬೇಕು ಎಂದು ಆಗ್ರಹಿಸಿದ್ದಾರೆ.

ನಿಖಿಲ್ ಕುಮಾರಸ್ವಾಮಿ ಕಳವಳ: ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ರಾಹುಲ್ ಗಾಂಧಿಗೆ ಬರೆದಿರುವ ಪತ್ರದಲ್ಲಿ ರಾಜ್ಯ ಸರ್ಕಾರ 'ಬಡವರು ಮತ್ತು ಅಂಚಿಗೆ ತಳ್ಳಲ್ಪಟ್ಟವರ ಮೇಲಿನ ನೇರ ದಾಳಿ' ನಡೆಸುತ್ತಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಸರ್ಕಾರದ ಇತ್ತೀಚಿನ ಅಧಿಸೂಚನೆಯು 3 ಗ್ರಾಮಗಳ 498.34 ಎಕರೆ ಜಮೀನನ್ನು ಬಲವಂತವಾಗಿ ಕಸಿದುಕೊಂಡಿದ್ದು, 755 ಸಣ್ಣ ರೈತ ಕುಟುಂಬಗಳ ಬದುಕನ್ನು ಛಿದ್ರಗೊಳಿಸಿದೆ. ಭೂಮಿ ಕಳೆದುಕೊಳ್ಳುತ್ತಿರುವವರಲ್ಲಿ ಯಾರೂ ಶ್ರೀಮಂತ ಜಮೀನ್ದಾರರಿಲ್ಲ. ಶೇ.82ರಷ್ಟು ಮಂದಿ ಸಣ್ಣ, ಅತಿ ಸಣ್ಣ ರೈತರು. ಅದರಲ್ಲಿ 360 ಕುಟುಂಬಗಳು ಅರ್ಧ ಎಕರೆಗಿಂತ ಕಡಿಮೆ ಜಮೀನು ಹೊಂದಿರುವವರು. ಬಹುಪಾಲು ಸಂತ್ರಸ್ತರು ದಲಿತ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರಸ್ತುತ ಸ್ವಾಧೀನಪಡಿಸಿಕೊಂಡಿರುವ 498 ಎಕರೆ ಕೇವಲ ಆರಂಭವಷ್ಟೇ. ಈ ಭಾಗದಲ್ಲಿ ಒಟ್ಟು 9,600 ಎಕರೆ ಫಲವತ್ತಾದ ಭೂಮಿಯನ್ನು ನುಂಗಿಹಾಕಲು ರಾಜ್ಯ ಸರ್ಕಾರ ಬೃಹತ್ ಸಂಚು ರೂಪಿಸಿದೆ. ಈ ಭೂಮಿ ಕೇವಲ ವಾಣಿಜ್ಯ ಸ್ವತ್ತಲ್ಲ, ಅದು ರೈತರ ತಾಯಿ. ಈ ಭಾಗದಿಂದ ಪ್ರತಿ ತಿಂಗಳು 6 ಲಕ್ಷ ಲೀಟರ್ ತಾಜಾ ಹಾಲು ಉತ್ಪಾದನೆಯಾಗುತ್ತದೆ. ಶೇ.50ರಷ್ಟು ಕುಟುಂಬಗಳು ತೋಟಗಾರಿಕೆ ಮತ್ತು ರೇಷ್ಮೆ ಕೃಷಿಯನ್ನೇ ನಂಬಿವೆ. ಕಳೆದ 450 ದಿನಗಳಿಂದ ರೈತರು ರಸ್ತೆಯ ದೂಳಿನಲ್ಲಿ ಮಲಗಿ ಹೋರಾಡುತ್ತಿದ್ದಾರೆ. ಆದರೆ ಅಹಂಕಾರಿ ರಾಜ್ಯ ಆಡಳಿತವು 'ಇಲ್ಲಿ ರೈತರೇ ಇಲ್ಲ' ಎಂದು ಹೇಳುವ ಮೂಲಕ ಅವರ ನೋವನ್ನು ತಿರಸ್ಕರಿಸಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಪರಿಸರ ರಕ್ಷಣೆ, ದಲಿತರು ಮತ್ತು ಹಿಂದುಳಿದ ವರ್ಗಗಳ ಸಬಲೀಕರಣದ ಬಗ್ಗೆ ನೀವು ರಾಷ್ಟ್ರಮಟ್ಟದಲ್ಲಿ ಮಾತನಾಡುವ ಆದರ್ಶಗಳು ಕರ್ನಾಟಕದಲ್ಲಿನ ಈ ದುರಾಸೆಯಿಂದಾಗಿ ಸಂಪೂರ್ಣವಾಗಿ ರಾಜಿಯಾಗಲು ಬಿಡಬಾರದು. ನಿಮ್ಮದೇ ಸರ್ಕಾರವನ್ನು ಹೊಣೆಗಾರರನ್ನಾಗಿ ಮಾಡಿ, ರೈತರ ಪರ ನಿಲ್ಲಿ ಎಂದು ಇದೇ ವೇಳೆ ರಾಹುಲ್ ಗಾಂಧಿಗೆ ಸವಾಲು ಹಾಕಿದ್ದಾರೆ.

ಮೈಸೂರು ಮಿತ್ರ ಸೋಮವಾರ 15 ಜೂನ್ 2026

ಪತ್ರಕರ್ತರ 50 ಮಕ್ಕಳಿಗೆ ವಿದ್ಯಾನಿಧಿ ವಿತರಣೆ

ಮಡಿಕೇರಿ, ಜೂ.14–ಜಿಲ್ಲಾ ಪತ್ರ ಕರ್ತರ 50 ಮಕ್ಕಳಿಗೆ 2.26 ಲಕ್ಷ ರೂ. ನೆರವನ್ನು ಪತ್ರಿಕಾಭವನ ಟ್ರಸ್ಟ್‌ನ ವಿದ್ಯಾನಿಧಿ ಯೋಜನೆಯಡಿಯಲ್ಲಿ ವಿತರಿಸಲಾಯಿತು.

ನಗರದ ಪತ್ರಿಕಾ ಭವನದಲ್ಲಿ ಆಯೋಜಿಸಿದ್ದ ವಿದ್ಯಾನಿಧಿ ವಿತರಣಾ ಕಾರ್ಯಕ್ರಮವನ್ನು ನಿವೃತ್ತ ಶಿಕ್ಷಕ ಕಲ್ಲಡ್ಕದ ನಾರಾಯಣ ಗೌಡ ಉದ್ಘಾಟಿಸಿ, ಒಳ್ಳೆಯ ಮನಸ್ಸು ಮತ್ತು ಒಳ್ಳೆಯ ಭಾವನೆ ಒಟ್ಟು ಸೇರಿದಾಗ ಮಾತ್ರ ಸಾಧನೆ ಸಾಧ್ಯ. ಪತ್ರಿಕಾಭವನ ಟ್ರಸ್ಟ್ ವಿದ್ಯಾನಿಧಿಯ ಮೂಲಕ ದೊಡ್ಡ ಮೊತ್ತದ ನೆರವನ್ನು ವಿದ್ಯಾರ್ಥಿಗಳಿಗೆ ನೀಡುತ್ತಿರುವುದು ಉತ್ತಮ ಕಾರ್ಯವೆಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇಂದು ವಿದ್ಯೆಯನ್ನು ಖರೀದಿಸುವ ಕಾರ್ಯವಾಗುತ್ತಿದೆ. ಆರೋಗ್ಯ ಮತ್ತು ಶಿಕ್ಷಣವನ್ನು ಉಚಿತವಾಗಿ ನೀಡಬೇಕೆನ್ನುವುದು ಹಿರಿಯರ ಅಭಿಲಾಷೆಯಾಗಿತ್ತು. ಆದರೆ, ಇಂದು ಇವೆರಡೂ ದುಬಾರಿಯಾಗಿದೆ ಎಂದರು.

ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಎಸ್.ಜಿ. ಉಮೇಶ್ ಮಾತನಾಡಿ, ಕೊಡಗು ಪತ್ರಿಕಾ ಭವನ ಟ್ರಸ್ಟ್ ನಿರಂತರ ಸಾಮಾಜಿಕ ಕಳಕಳಿಯನ್ನು ಸದ್ದುಗದ್ದಲವಿಲ್ಲದೆ ತೋರುತ್ತಾ



ಪತ್ರಕರ್ತರ 50 ಮಕ್ಕಳಿಗೆ ವಿದ್ಯಾ ನಿಧಿ ಯೋಜನೆಯಡಿಯಲ್ಲಿ ನೆರವನ್ನು ನೀಡಲಾಯಿತು.

ಬಂದಿದೆ. ಕೋವಿಡ್, ಪ್ರಾಕೃತಿಕ ವಿಕೋಪ ಸಂದರ್ಭಗಳಲ್ಲಿ ಆಹಾರದ ಕಿಟ್‌ಗಳನ್ನು ಜಿಲ್ಲಾ ವ್ಯಾಪ್ತಿಯ ಪತ್ರಕರ್ತರಿಗೆ ವಿತರಿಸಿದೆ ಎಂದು ತಿಳಿಸಿದರು. ಕೊಡಗು ಪತ್ರಿಕಾ ಭವನ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷ ಟಿ.ಪಿ. ರಮೇಶ್ ಮಾತನಾಡಿ, ವಿದ್ಯಾನಿಧಿಯನ್ನು ಪಡೆಯುವ ಮಕ್ಕಳು ನಿಶ್ಚಿತವಾದ ಗುರಿ ಸಾಧನೆಯತ್ತ ದೃಢವಾದ ಹೆಜ್ಜೆ ಗಳನ್ನಿರಿಸಬೇಕು. ಶೈಕ್ಷಣಿಕ ಹಂತದಲ್ಲಿ ಇಡುವ ಒಂದು ತಪ್ಪು ಹೆಜ್ಜೆಯಿಂದ ಮಕ್ಕಳ ಭವಿಷ್ಯ ಹಾಳಾಗಬಹುದು ಎಂದು ಎಚ್ಚರಿಸಿದರು. ಶಿಕ್ಷಣದ ಹಂತದಲ್ಲಿ ಮಕ್ಕಳು ಹಾದಿ ತಪ್ಪದಂತೆ ಪೋಷಕರು ಎಚ್ಚರಿಕೆ ವಹಿಸುವಂತೆ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮ್ಯಾನೇಜಿಂಗ್ ಟ್ರಸ್ಟಿ ಎಂ.ಪಿ.ಕೇಶವ ಕಾಮತ್ ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಶಿಕ್ಷಣದ ಹಂತದಲ್ಲಿ ದೊರಕುವ ಎಲ್ಲ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವುದು ಬುದ್ಧಿವಂತಿಕೆಯಾಗುತ್ತದೆ. ಮಕ್ಕಳು ತಮ್ಮ ಶಿಕ್ಷಣದ ಹಂತದಲ್ಲಿ ಪಾಠ ಪ್ರವಚನಗಳೊಂದಿಗೆ ಸಾಮಾನ್ಯ ಜ್ಞಾನವನ್ನು ಪಡೆದುಕೊಳ್ಳಬೇಕು. ಶಿಕ್ಷಣದ ಬಳಿಕ ಎದುರಾಗುವ ಸ್ಪರ್ಧಾತ್ಮಕ ಜಗತ್ತನ್ನು ಎದುರಿಸಲು ಸಾಮಾನ್ಯ ಜ್ಞಾನ ಅತ್ಯಂತ ಸಹಕಾರಿಯಾಗಲಿದೆ. ಟ್ರಸ್ಟ್ ಮೂಲಕ ನೀಡುತ್ತಿರುವ ವಿದ್ಯಾನಿಧಿ ಪಡೆಯುವ ಮಕ್ಕಳು, ಭವಿಷ್ಯದಲ್ಲಿ ತಾವು ಸಮಾಜಕ್ಕೆ ಏನನ್ನಾದರು ನೀಡು ವಂತಹ ಸಾಮರ್ಥ್ಯವನ್ನು ಪಡೆಯ ಬೇಕೆಂದರು.

ಪೋಷಕರಾದ ಜಿ.ವಿ.ರವಿಕುಮಾರ್, ಅನುಷಾ, ರಂಜಿತ್ ಕವಲಪಾರ, ಕುಡೆಕಲ್ ಸಂತೋಷ್. ಎಸ್.ಎ.ಮುರಳಿ ಶ್ರೀಧರ್. ಕೋಶಾಧಿಕಾರಿ ಕೆ.ತಿಮ್ಮಪ್ಪ, ಟ್ರಸ್ಟಿಗಳಾದ ಅನಿಲ್.ಎಚ್.ಟಿ, ಮಧೋಷ್ ಪೂವಯ್ಯ, ವಿ.ಪಿ.ಸುರೇಶ್ ಇದ್ದರು.

ಎಫ್‌ಐಆರ್ ಖಚಿತ

ಇಂದು ಮಕ್ಕಳಿಗೆ ಯಾರೂ ಬುದ್ಧಿ ಹೇಳುವ ಸ್ಥಿತಿಯಲ್ಲಿ ಇಲ್ಲ. ಹಿಂದೆ ಮಕ್ಕಳಿಗೆ ಶಿಕ್ಷಕರು 'ಪೆಟ್ಟು' ನೀಡಿದರೆ, ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಪೋಷಕರು 'ಇನ್ನೆರಡು ಪೆಟ್ಟು ಕೊಡಿ' ಎಂದು ಶಿಕ್ಷಕರನ್ನು ಪ್ರೋತ್ಸಾಹಿಸುತ್ತಿದ್ದರು. ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ವಿದ್ಯಾರ್ಥಿಗಳಿಗೆ ಪೆಟ್ಟು ಕೊಡುವ ಶಿಕ್ಷಕರ ವಿರುದ್ಧ ಎಫ್‌ಐಆರ್ ದಾಖಲಾಗುತ್ತದೆ. ಶಿಕ್ಷಕ ಬಂಧನಕ್ಕೆ ಒಳಗಾಗುವಂತಹ ದುಸ್ಥಿತಿ ಬಂದೊದಗಿದೆ. ಮಕ್ಕಳಿಗೆ ಪೆಟ್ಟು ತಪ್ಪಿಸುವ ಹಕ್ಕು ನೀಡಲಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸ್ವಯಂ ರಸ್ತೆಗುಂಡಿ ಮುಚ್ಚಿಸಿದ ಮಹಿಳಾ ಕಾಂಗ್ರೆಸ್ ಘಟಕ



ಮಹಿಳಾ ಕಾಂಗ್ರೆಸ್ ನಾಯಕಿಯರು ಸ್ವಯಂ ತಾವೇ ರಸ್ತೆಗುಂಡಿ ಮುಚ್ಚುತ್ತಿರುವುದು

ಮಡಿಕೇರಿ: ನಗರದ ಹೃದಯ ಭಾಗ ಐಟಿಐ ಜಂಕ್ಷನ್ ರಸ್ತೆಯಲ್ಲಿ ಕಾಣಿಸಿಕೊಂಡಿದ್ದ ಬೃಹತ್ ಗುಂಡಿಯನ್ನು ಸ್ವಂತ ಖರ್ಚಿನಿಂದ ಮುಚ್ಚುವ ಮೂಲಕ ನಗರ ಮಹಿಳಾ ಕಾಂಗ್ರೆಸ್ ಘಟಕ ಸಾಮಾಜಿಕ ಕಳಕಳಿ ಮೆರೆಯಿತು.

ದೊಡ್ಡ ಗುಂಡಿಯಿಂದ ವಾಹನ ಸವಾರರು, ವಿದ್ಯಾರ್ಥಿಗಳು ಹಾಗೂ ಪಾದಾಚಾರಿಗಳ ಸಂಚಾರಕ್ಕೆ ಅಡಚಣೆ ಉಂಟಾಗಿ, ಅಪಾಯವನ್ನು ಆಹ್ವಾನಿಸುತ್ತಿತ್ತು. ಇದನ್ನು ಗಮನಿಸಿದ ನಗರ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷೆ ಧನಲಕ್ಷ್ಮಿ ಪೊನ್ನು ಅವರು ನಗರಾಧ್ಯಕ್ಷೆ ಶಶಿಕಲಾ ಅವರಿಗೆ ಮಾಹಿತಿ ನೀಡಿದರು.

ತಕ್ಷಣ ಸ್ಥಳಕ್ಕೆ ಆಗಮಿಸಿದ ಶಶಿಕಲಾ ಹಾಗೂ ನಗರಸಭೆಯ ಮಾಜಿ ಉಪಾಧ್ಯಕ್ಷೆ ಲೀಲಾ ಶೇಷಮ್ಮ ಅವರು ಗುಂಡಿ ಮುಚ್ಚಲು ಅಗತ್ಯವಿರುವ ಕಾಂಕ್ರೀಟ್ ಮತ್ತಿತರ ಸಾಮಾಗ್ರಿಗಳನ್ನು ಒದಗಿಸಿದರು. ಕಾಂಕ್ರೀಟ್ ಕೆಲಸಗಾರರನ್ನು ಒಗ್ಗೂಡಿಸಿ ರಸ್ತೆ ಗುಂಡಿ ಮುಚ್ಚಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರಲ್ಲದೆ, ಕಾಮಗಾರಿಯಲ್ಲಿ ತಾವು ಕೂಡ ತೊಡಗಿಸಿಕೊಂಡರು. ಧನಲಕ್ಷ್ಮಿ ಪೊನ್ನು, ಶಶಿಕಲಾ ಹಾಗೂ ಲೀಲಾ ಶೇಷಮ್ಮ ಅವರ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಮನೆಮುಂದೆ ನಿಲ್ಲಿಸಿದ್ದ ಕಾರನ್ನು ಜಖಂಗೊಳಿಸಿದ ಕಾಡಾನೆ



ಮಡಿಕೇರಿ: ಮನೆ ಮುಂದೆ ನಿಲ್ಲಿಸಿದ್ದ ಕಾರಿನ ಮೇಲೆ ಕಾಡಾನೆ ದಾಳಿ ನಡೆಸಿ ಜಖಂಗೊಳಿಸಿರುವ ಘಟನೆ ಸೋಮವಾರಪೇಟೆ ತಾಲೂಕಿನ ತಾಕೇರಿ ಗ್ರಾಮದಲ್ಲಿ ನಡೆದಿದೆ.

ಅಲ್ಲಿನ ನಿವಾಸಿ ಕೆ.ಬಿ.ರಾಜು ಎಂಬವರ ಪುತ್ರ ಅನೂಪ್ ಎಂಬವರ ಕಾರಿನ ಮೇಲೆ ಭಾನುವಾರ ನಡುರಾತ್ರಿ 3 ಗಂಟೆ ವೇಳೆಯಲ್ಲಿ ಕಾಡಾನೆ ದಾಳಿ ನಡೆಸಿದ ಪರಿಣಾಮ ಕಾರಿನ ಮುಂದಿನ ಡೋರ್, ಗಾಜಿನ ಕಿಟಕಿ, ಮಿರರ್, ಹಿಂಬದಿಯೂ ಜಖಂ ಆಗಿದೆ. ಮಾತ್ರವಲ್ಲದೆ ತಡೆಗೋಡೆಯ ಒಂದು ಭಾಗವನ್ನು ತುಳಿದು ಬೀಳಿಸಿ ಕಾಫಿ ತೋಟ ಪ್ರವೇಶಿಸಿದ ಕಾಡಾನೆ ಕಿರಗಂದೂರು ಗ್ರಾಮಕ್ಕೂ ಲಗ್ಗೆ ಇಟ್ಟು ಅಲ್ಲಿನ ನಿವಾಸಿ ನಾರಾಯಣ ಎಂಬವರ ವಾಸದ ಮನೆಯ ಸಿಮೆಂಟ್ ಮೇಲ್ಛಾವಣಿ ಹಾಗೂ ತಂತಿ ಬೇಲಿಯನ್ನು ಹಾನಿಗೀಡು ಮಾಡಿದೆ.

ಕಾಡಾನೆ ದಾಳಿಯಿಂದ ಮನೆ ಮಂದಿ ಅಪಾಯದಿಂದ ಪಾರಾಗಿದ್ದು, ಘಟನೆ ಕುರಿತು ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದಾರೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅರಣ್ಯ ಇಲಾಖೆ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಗ್ರಾಮಸ್ಥರು, ದಾಳಿ ನಡೆಸುತ್ತಿರುವ ಒಂಟಿ ಸಲಗವನ್ನು ಸೆರೆ ಹಿಡಿದು ಬೇರೆಡೆಗೆ ಸ್ಥಳಾಂತರಿಸಬೇಕು ಎಂದು ಆಗ್ರಹಿಸಿದ್ದಾರೆ.

ಗೌಡ ಯುವ ಒಕ್ಕೂಟ ನೂತನ ಅಧ್ಯಕ್ಷರಾಗಿ ಕಾವೇರಿ ಮನೆ ಭರತ್ ಆಯ್ಕೆ



ನಾಪೋಕ್ಲು, ಜೂ.14– ಅಯ್ಯಂಗೇರಿ ಗೌಡ ಯುವ ಒಕ್ಕೂಟದ ಅಧ್ಯಕ್ಷರಾಗಿ ಕಾವೇರಿ ಮನೆ ಭರತ್ ಆಯ್ಕೆಯಾಗಿದ್ದಾರೆ.

ಬಾಕಿಲನ ಅರ್ಜುನ್, ಖಜಾಂಚಿ ಬಾರಿಕೆ ದೀಪಕ್, ಉಪಕಜಾಂಜಿ ಕಾವೇರಿ ಮನೆ ಸುಗು, ಕ್ರೀಡಾ ಅಧ್ಯಕ್ಷರಾಗಿ ಬಾರಿಗೆ ಅರುಣ್ ಸೇರಿದಂತೆ 18 ಸದಸ್ಯರುಗಳನ್ನು ಒಕ್ಕೂಟದ ಸಭೆಯಲ್ಲಿ ಆಯ್ಕೆ ಮಾಡಲಾಯಿತು.

ಸೇನೆಗೆ ಆಯ್ಕೆಯಾದವರಿಗೆ ಮಾರ್ನಿಂಗ್ ಸ್ಟಾರ್ ತಂಡ ಅಭಿನಂದನೆ


ಭಾರತೀಯ ಸೇನೆಗೆ ಆಯ್ಕೆಯಾದ ಐವರನ್ನು ಮಾರ್ನಿಂಗ್ ಸ್ಟಾರ್ ತಂಡ ಅಭಿನಂದಿಸಿತು.

ಮಡಿಕೇರಿ: ನಗರದ ಮಾರ್ನಿಂಗ್ ಸ್ಟಾರ್ ತಂಡದಿಂದ ತರಬೇತಿ ಪಡೆದ ಐದು ಯುವಕರು ಅಗ್ನಿವೀರ್ ಮೂಲಕ ಭಾರತೀಯ ಸೇನೆಗೆ ಆಯ್ಕೆಯಾದವರಿಗೆ ಅಭಿನಂದನೆ ಹಾಗೂ ಬೀಳ್ಕೊಡುಗೆ ಕಾರ್ಯಕ್ರಮ ನಡೆಯಿತು.

ನಗರದ ಹೋಟೆಲ್ ಸಮುದ್ರ ಸಭಾಂಗಣದಲ್ಲಿ ತಂಡದ ಪ್ರಮುಖರಾದ ಸುರೇಶ್ ರೈ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸೇನೆಗೆ ಆಯ್ಕೆಯಾಗಿರುವ ಭಾಗಮಂಡಲದ ಎಸ್.ವಿ.ಮೋಕ್ಷಿತ್ ಮತ್ತು ಡಿ. ಎಚ್. ಆಕಾಶ್, ಕೊಡಗಿನ ಎಚ್.ಆರ್. ಯಶ್ವಂತ್, ಚೆಟ್ಟು ಗ್ರಾಮದ ಬಿ.ಜಿ. ಹರ್ಷಿತ್, ಮಡಿಕೇರಿಯ ಬಿ.ಎಸ್. ತಿಲಕ್‌ರವರನ್ನು ಶಾಲು ಹೊದಿಸಿ, ಫಲ ತಾಂಬೂಲ ನೀಡಿ ಅಭಿನಂದಿಸಿದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಉದ್ಯಮಿ ಶರೀನ್ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿರುವ ಮಂದಿ ಸೇರಿಕೊಂಡು ನಡೆಸುತ್ತಿರುವ ಮಾರ್ನಿಂಗ್ ಸ್ಟಾರ್ ತಂಡ ಸೇನೆಗೆ ಸೇರಲು ಆಸಕ್ತಿ ಇರುವ ಯುವಕರಿಗೆ ತರಬೇತಿ ನೀಡುವ ಮೂಲಕ ಅತ್ಯುತ್ತಮ ಕಾರ್ಯ ಮಾಡುತ್ತಿದೆ. ಎಂದು ಶ್ಲಾಘಿಸಿದರು.

ಮತ್ತೋರ್ವ ಉದ್ಯಮಿ ಪಪ್ಪಿ ವಸಂತ ಮಾತನಾಡಿ, ಒಳ್ಳೆಯ ಉದ್ದೇಶದಿಂದ ಸಮಾನ ಮನಸ್ಕರ ತಂಡ ರಚನೆಯಾಗಿದೆ. ಸದುದ್ದೇಶದಿಂದ ನಡೆಸುತ್ತಿರುವ ಕಾರ್ಯಗಳು ಮುಂದುವರೆಯಲಿ ಎಂದು ಆಶಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ತಂಡದ ಪ್ರಮುಖ ಹಾಗೂ ತರಬೇತುದಾರ ಯೋಗೇಶ್ ಶೆಟ್ಟಿ ಕಾರ್ಯಚಟುವಟಿಕೆ ಬಗ್ಗೆ ವಿವರಿಸಿದರು. 2019ರಲ್ಲಿ ಮಾರ್ನಿಂಗ್ ಸ್ಟಾರ್ ತಂಡವನ್ನು ರಚಿಸಲಾಯಿತು. ಬಳಿಕ ಸೇನೆಗೆ ಸೇರಲು ಆಸಕ್ತಿ ಇರುವ ಯುವಕರನ್ನು ಸೇರಿಸಿ ಪ್ರತಿ ದಿನ ತರಬೇತಿ ನೀಡುವ ಕಾರ್ಯ ಆರಂಭಿಸಿದ್ದು, ಅನೇಕ ಮಂದಿ ಯುವಕರು ನಮ್ಮೊಂದಿಗೆ ಸೇರಿ ತರಬೇತಿ ಪಡೆದಿದ್ದಾರೆ. ಈವರೆಗೆ ಅನೇಕ ತರುಣರಿಗೆ ತರಬೇತಿ ನೀಡಿದ್ದು, ಅದರಲ್ಲಿ 25 ಮಂದಿ ಭಾರತೀಯ ಸೇನೆಗೆ ಆಯ್ಕೆಯಾದ ತೃಪ್ತಿ ಇದೆ ಎಂದರು. ವಿಜಯ್ ಕುಮಾರ್ ಶೆಟ್ಟಿ, ಕಪಿಲ್, ಬಿ.ಎಸ್. ಆರತಿ, ಶರಣ್, ನಂಜಪ್ಪ, ಮಧು, ಸುರೇಶ್ ಮೊಗವೀರ, ತರಬೇತಿ ಪಡೆದ ಯುವಕರು ಇದ್ದರು.

ಸಮಯ ಸದ್ಬಳಕೆ ಮಾಡಿಕೊಂಡು ಸಾಧನೆಯ ಯಶಸ್ಸಿಗೆ ಶ್ರಮಿಸಿ



ವಿರಾಜಪೇಟೆ: ವಿದ್ಯಾರ್ಥಿಗಳು ಸಮಯವನ್ನು ಸದುಪಯೋಗಪಡಿಸಿಕೊಂಡು ಸಾಧನೆಯ ಯಶಸ್ಸಿಗೆ ಶ್ರಮಪಟ್ಟು ಕಲಿಯುವ ಮೂಲಕ ಜೀವನದಲ್ಲಿ ಗುರಿ ಸಾಧಿಸುವಂತಾಗಬೇಕು ಎಂದು ನವದೆಹಲಿ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ ಪ್ರೊ. ಎಂ. ನರಸಿಂಹಮೂರ್ತಿ ಹೇಳಿದರು.

ಪಟ್ಟಣದಲ್ಲಿರುವ ಪ್ರಗತಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಾಲೇಜ್ ಮೆಟ್ಟಿಲೇರಿದ ನಂತರ ಮುಂದಿನ ಶಿಕ್ಷಣದ ಬಗ್ಗೆ ಸಮಸ್ಯೆ ಉಂಟಾಗದಂತೆ ಪ್ರೌಢಶಾಲೆಯಿಂದಲೇ ಶಿಕ್ಷಣದ ಬಗ್ಗೆ ಹೆಚ್ಚಿನ ಜ್ಞಾನದ ಮಾಹಿತಿ ನೀಡಿ ವಿದ್ಯಾರ್ಥಿಗಳ ಜೀವನ ಮುಂದೆ ಸುಗಮವಾಗಲೆಂದು ತಮ್ಮ ಭವಿಷ್ಯವನ್ನು ವಿದ್ಯಾರ್ಥಿಗಳು ರೂಪಿಸಿಕೊಳ್ಳುವಂತಾಗಬೇಕೆಂದರು.

ಬೆಂಗಳೂರಿನ ವೇದಾನ್ಸ್ ಅಕಾಡೆಮಿ ಸಂಸ್ಥಾಪಕ ನಿರ್ದೇಶಕ ಎ.ಎಸ್.ಸಿ. ನವೀನ್ ಮಾತನಾಡಿ, ವಿದ್ಯಾರ್ಥಿಗಳಿಗೆ ಶಿಸ್ತು ಬಹಳ ಮುಖ್ಯ. ಹೆಚ್ಚಿನ ಶಿಕ್ಷಣ ಪಡೆದು ಇತರ ಬೇರೆ ಬೇರೆ ಹುದ್ದೆಗಳಿಗೂ ಪ್ರಯತ್ನ ಮಾಡುವುದರೊಂದಿಗೆ ಉನ್ನತ ಹುದ್ದೆಗೇರುವಂತಾಗಬೇಕು ಅದಕ್ಕೋಸ್ಕರ ಪ್ರಯತ್ನ ಮತ್ತು ಛಲ ಮುಖ್ಯವಾಗಿರಬೇಕು. ಆಗ ಮಾತ್ರ ನಿಮ್ಮ ಪ್ರಯತ್ನ ಸಫಲವಾಗುತ್ತದೆ.

ಶಾಲೆಯ ವ್ಯವಸ್ಥಾಪಕ ಮಾದಂಡ ತಿಮ್ಮಯ್ಯ ಮಾತನಾಡಿದರು. ಶಾಲಾ ಪ್ರಮುಖರಾದ ಸುಶ್ಮ ತಿಮ್ಮಯ್ಯ, ಬೆಂಗಳೂರಿನ ಭರತ್ ವೇದಿಕೆಯಲ್ಲಿದ್ದರು, ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳ ಪೋಷಕರು ಭಾಗವಹಿಸಿದ್ದರು.

ಸಾಹಿತ್ಯವು ಬರೆಯುವವನಿಗಷ್ಟೆ ಸೀಮಿತವಾಗಬಾರದು

ಚಾಮರಾಜನಗರ, ಜೂ.14 ಸಾಹಿತ್ಯವು ಕೇವಲ ಬರೆಯುವವನಿಗಷ್ಟೆ ಸೀಮಿತವಾಗದೆ ಸಮಾಜದ ಪ್ರತಿಯೊಬ್ಬರನ್ನು ತಲುಪಿ ಅವರ ಅನುಭವಗಳಿಗೆ ದನಿಯಾದಾಗ ಮಾತ್ರ ಅದರ ಸಾರ್ಥಕತೆ ಹೆಚ್ಚುತ್ತದೆ ಎಂದು ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು ಹೇಳಿದರು.



ನೀಲಿರಾಗ ಕವನ ಸಂಕಲನವನ್ನು ಗಣ್ಯರು ಬಿಡುಗಡೆ ಮಾಡಿದರು.

ನಗರದ ಡಾ.ರಾಜ್‌ಕುಮಾರ್ ರಂಗ ಮಂದಿರದಲ್ಲಿ ಅನುಪಮಾ ಸೇವಾ ಟ್ರಸ್ಟ್ ವತಿಯಿಂದ ನಡೆದ ರಾಷ್ಟ್ರೀಯ ಮಟ್ಟದ ಸಾಹಿತ್ಯ ಸಮ್ಮೇಳನ, ಕವಿಗೋಷ್ಠಿ ನೀಲಿರಾಗ ಕವನ ಸಂಕಲನ ಬಿಡುಗಡೆ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ಸನ್ಮಾನ ಅಭಿನಂದನಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅವರು, ಕನ್ನಡ ಸಂಸ್ಕೃತಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಸಣ್ಣಪುಟ್ಟ ಸಾಹಿತಿಗಳು, ಕಲಾವಿದರನ್ನು ಗುರುತಿಸುತ್ತಿಲ್ಲ. ಕವನ ಕ್ಕಿಂತ ಜಾಸ್ತಿ ಗದ್ಯ ಬರೆಯುವುದಕ್ಕೆ ಒತ್ತು ನೀಡಬೇಕಿದೆ ಏಕೆಂದರೆ ಶಾಶ್ವತವಾಗಿ ಉಳಿಯುವುದು ಗದ್ಯ, ಹಾಗಾಗಿ ಗದ್ಯ ಸಾಹಿತ್ಯವು ಒಂದು ದೊಡ್ಡ ರಾಮಸಮುದ್ರ ಇದ್ದಂತೆ ಅಲ್ಲಿ ದಾಸಸಾಹಿತ್ಯ ಮಕ್ಕಳ ಸಾಹಿತ್ಯ, ಮಹಿಳಾ ಸಾಹಿತ್ಯ, ವಿಜ್ಞಾನ ಇದೆ. ಇಂತಹ ಕಡೆಗೂ ಗಮನ ಹರಿಸಬೇಕು. ಸಾಹಿತ್ಯ ವನ್ನು ಹೆಚ್ಚು ಜನರು ಓದುವಂತಾದಾಗ ಮಾತ್ರ ಸಾರ್ಥಕವಾಗುತ್ತದೆ ಎಂದರು.

ವಕೀಲ ಪ್ರಸನ್ನಕುಮಾರ್ ಮಾತನಾಡಿ, ಸಮಾಜವನ್ನು ತಿದ್ದಿ ಸರಿಪಡಿಸುವ ಶಕ್ತಿ ಸಾಹಿತ್ಯಕ್ಕಿದೆ. ಸಾಹಿತಿ, ಕವಿಗಳು ಬರಹಗಳ ಮೂಲಕ ಸಮಾಜವನ್ನು ತಿದ್ದುವ ಕೆಲಸವನ್ನು ಮಾಡಿಕೊಂಡು ಬಂದಿದ್ದಾರೆ. ಪ್ರಸ್ತುತ ದಿನಗಳಲ್ಲಿ ಕನ್ನಡ ಭಾಷೆ ಮೇಲೆ ದೌರ್ಜನ್ಯ, ದಬ್ಬಾಳಿಕೆಗಳು ನಡೆಯುತ್ತಿವೆ. ಸರ್ಕಾರವೇ ಆಗಲಿ, ಜಿಲ್ಲಾಡಳಿತವೇ ಆಗಲಿ ಕನ್ನಡ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸುತ್ತಿಲ್ಲ. ಇದು ನೋವಿನ ಸಂಗತಿಯಾಗಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಸಮಾಜ ಸೇವಕ ಓಲೆ ಮಹದೇವ ಕಾರ್ಯಕ್ರಮ ಉದ್ಘಾಟಿಸಿ ಶುಭ ಕೋರಿದರು. ಅನುಪಮ ಸೇವಾ ಟ್ರಸ್ಟ್ ಅಧ್ಯಕ್ಷೆ ಡಾ.ಪಿ.ಪ್ರೇಮಾ ಪ್ರಾಸ್ತಾವಿಕವಾಗಿ ಮಾತನಾಡಿದರು. .

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದವರಿಗೆ ಸಮಾಜ ಸೇವಾರತ್ನ ಪ್ರಶಸ್ತಿ, ಕಲಾ ಸಿರಿ ಪ್ರಶಸ್ತಿ, ಆದರ್ಶ ದಂಪತಿಗಳ ಪ್ರಶಸ್ತಿ, ರಾಷ್ಟ್ರ ಮಟ್ಟದ ಕಿತ್ತೂರು ಚೆನ್ನಮ್ಮ ಸೇವಾರತ್ನ ಪ್ರಶಸ್ತಿ, ರಾಷ್ಟ್ರ ಮಟ್ಟದ ಇಮ್ಮಡಿ ಪುಲಿಕೇಶಿ ಸೇವಾ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಸದಸ್ಯ ಶಂಕರ್ ಅಂಕನಶೆಟ್ಟಿಪುರ, ಕೊಳ್ಳೇಗಾಲ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಆರ್.ನಂಜುಂಡಯ್ಯ, ಜೆಇ ಕಿರಣ್ ಕುಮಾರ್, ಸಮಾಜ ಸೇವಕ ಲೋಕೇಶ್ ರಾಜ್, ಸರ್ಕಾರಿ ಪ್ರೌಢಶಾಲಾ ಜಿಲ್ಲಾಧ್ಯಕ್ಷ ವೀರಭದ್ರ ಸ್ವಾಮಿ, ದಲಿತ ರಾಜ್ಯ ಮಹಿಳಾ ಸಂಯೋಜಕಿ ಗಿರಿಜ, ಹಿರಿಯ ಸಾಹಿತಿ ಡಾ.ಅಮ್ಮಸಂದ್ರ ಸುರೇಶ್, ರವಿಚಂದ್ರ ಪ್ರಸಾದ್ ಕಹಳೆ, ಪ್ರಾಂಶುಪಾಲ ರಂಗ ಸ್ವಾಮಿ, ಗೌಸ್ ಇತರರು ಹಾಜರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕರಿಂದ ಭೂಮಿಪೂಜೆ

ಚಾಮರಾಜನಗರ: ತಾಲೂಕಿನ ಅರಕಲವಾಡಿ, ಮಾದಲವಾಡಿ ನಿಜಲಿಂಗನಪುರ ಅಮಚವಾಡಿ, ಕೆಲ್ಲಂಬಳ್ಳಿ, ಕೆ.ಬಸವನಪುರ ಗ್ರಾಮಗಳಲ್ಲಿ 6.60 ಕೋಟಿ ರೂ.ವೆಚ್ಚದಲ್ಲಿ ನಿರ್ಮಿಸಲಾಗುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.


ನಿಜಲಿಂಗನಪುರ ಗ್ರಾಮದಲ್ಲಿ ನಿರ್ಮಿಸಲಾಗುವ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು.

ಮುಖ್ಯಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಅನುದಾನ ಯೋಜನೆ ಅನುದಾನದಡಿಯಲ್ಲಿ ಅರಕಲವಾಡಿ ಸಮೀಪ ಮೂಡಲ ಹೊಸಹಳ್ಳಿ ಗ್ರಾಮದವರೆಗೆ 2,70 ಕೋಟಿ, ಮಾದಲವಾಡಿಯಿಂದ ಕಿಲಗೆರೆಕ್ಕೆ ಸಂಪರ್ಕರಸ್ತೆ 2ಕೋಟಿ, ನಿಜಲಿಂಗಪುರ 30ಲಕ್ಷ, ಕೆಲ್ಲಂಬಳ್ಳಿ ಗ್ರಾಮಕ್ಕೆ, 50ಲಕ್ಷ ಕೆ.ಬಸವನಪುರ ಗ್ರಾಮಕ್ಕೆ 50ಲಕ್ಷ ರೂ, ಅಮಚವಾಡಿ ಗ್ರಾಮದ ನಾಯಕರ ಬಡಾವಣೆಯಲ್ಲಿ ಟಿಎಸ್‌ಪಿ ಯೋಜನೆಯಡಿಯಲ್ಲಿ 60ಲಕ್ಷರೂ, ರಸ್ತೆ ಅಭಿವೃದ್ಧಿಗೆ ಮಂಜೂರಾಗಿದೆ ಎಂದು ತಿಳಿಸಿದರು.

ತಮ್ಮ ಕೇತ್ರವ್ಯಾಪ್ತಿಯಲ್ಲಿ ಜನತೆಯ ಆಶಯಕ್ಕೆ ಬದ್ದರಾಗಿ ಗ್ರಾಮಗಳಲ್ಲಿ ರಸ್ತೆ ಚರಂಡಿ, ಸಮುದಾಯ ಭವನ ಆಶ್ರಯ ಮನೆ ಗಂಗಾ ಕಲ್ಯಾಣ ಯೋಜನೆ ಸೇರಿದಂತೆ ಸರಕಾರ ಮಂಜೂರುಮಾಡುವ ಅನುದಾನ ಹಾಗೂ ಸೌಲಭ್ಯಗಳನ್ನು ಜನರಿಗೆ ಪ್ರಾಮಾಣಿಕವಾಗಿ ತಲುಪಿಸುವ ಕೆಲಸ ಮಾಡಲಾಗುತ್ತಿದೆ. ಸಂಬಂಧಪಟ್ಟ ಕಾಮಗಾರಿ ನಿರ್ವಹಣೆ ಗುತ್ತಿಗೆದಾರರು ಗುಣಮಟ್ಟದ ರಸ್ತೆ ನಿರ್ಮಾಣಮಾಡಿ, ಈ ಭಾಗದ ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಸೂಚಿಸಿದರು.

ಮುಖಂಡರಾದ ಎಎಸ್ ಗುರುಸ್ವಾಮಿ, ಸೋಮಲಿಂಗಪ್ಪ ಶೆಂಬ್ಬಪ್ಪ, ಅರಕಲವಾಡಿ ಸೋಮನಾಯಕ, ಪ್ರಭುಸ್ವಾಮಿ ರಾಜೇಂದ್ರ, ರಮೇಶ್, ಗುರುಸಿದ್ದಪ್ಪ, ಶಂಕರ್, ರಾಜಶೇಖರ್‌ಮೂರ್ತಿ, ರಂಗಸ್ವಾಮಿ, ಚನ್ನೇಗೌಡ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸದಸ್ಯರಾದ ಮಲ್ಲಿ ಕಾರ್ಜುನ್, ಅಮಚವಾಡಿ ರಾಜು, ಶಿವಣ್ಣ, ಸಿದ್ದಪ್ಪಾಜಿ, ಮಂಜುನಾಥ್, ಕಂಠಿ ಮಹದೇವಶೆಟ್ಟಿ, ಮಹೇಶ್, ಕೆಲ್ಲಂಬಳ್ಳಿ ಶ್ರೀನಿವಾಸ್‌ನಾಯಕ, ಸೋಮ ಶೇಖರ್ ರಾಜು, ರಾಜೇಶ್, ದುಂಡುವಾದಯ್ಯ, ದ್ವಾರಸ್ವಾಮಿ, ಮಹದೇವಯ್ಯ ಕುಮಾರ್, ಸೇರಿದಂತೆ ಮುಖಂಡರು ಗ್ರಾಮಸ್ಥರು ಹಾಜರಿದ್ದರು.

ಜಮೀನುಗಳಿಗೆ ಲಗ್ಗೆ ಇಡುತ್ತಿರುವ ಕಾಡಾನೆ: ಭಯದಲ್ಲಿ ರೈತ ವರ್ಗ


ಜಮೀನುಗಳಿಗೆ ದಾಳಿಯಿಟ್ಟಿರುವ ಕಾಡಾನೆಗಳು ಲದ್ದಿ ಹಾಕಿರುವುದು.

ಬೇಗೂರು, ಜೂ.14–ಸಮೀಪದ ಕುರುಬರ ಹುಂಡಿ (ಶಿವಕುಮಾರ್‌ಪುರ) ಯಡವನಹಳ್ಳಿ ಗ್ರಾಮಗಳಲ್ಲಿ ಕಾಡಾನೆಗಳು ಆಗಿಂದಾಗ್ಗೆ ಕಾಣಿಸಿಕೊಳ್ಳುತ್ತಿದ್ದು ಕಾಡಂಚಿನ ಗ್ರಾಮಗಳ ರೈತರು ತಮ್ಮ ಜಮೀನುಗಳಿಗೆ ತೆರಳಲು ಭಯದ ವಾತಾವರಣದಲ್ಲೆ ತೆರಳುವಂತಾಗಿದೆ.

ಎರಡು ಮೂರು ದಿನಗಳಿಂದ ಕಾಡಾನೆಗಳು ಗ್ರಾಮದ ಬಳಿಯ ಗುಡ್ಡದಲ್ಲಿ ಉಳಿದು ರೈತರು ಜಮೀನುಗಳಿಗೆ ತೆರಳಲು ಭಯಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಯಡವನಹಳ್ಳಿ ಗ್ರಾಮದ ಹೊರವಲಯದ ಜಮೀನುಗಳಲ್ಲಿ ಕಾಡಾನೆಗಳು ಕಾಣಿಸಿಕೊಂಡಿವೆ.

ಮುಚ್ಚುತ್ತಿರುವ ಆನೆಕಂದಕ : ಈ ಹಿಂದೆ ಓಂಕಾರ ಅರಣ್ಯವಲಯದ ಬೊಳೆಗೌಡನಕಟ್ಟೆ, ಸೌತ್‌ಕೆರೆ, ಬಳಿಯಿರುವ ಕಾಡಾನೆಗಳು ನಾಡಿನತ್ತ ಧಾವಿಸುತ್ತಿದ್ದರಿಂದ ಅರಣ್ಯ ಇಲಾಖೆ ನಾಡಿನತ್ತ ಬಾರದಂತೆ ರೈಲ್ವೆ ಕಂಬಿಗಳನ್ನು ಸಹ ಅಳವಡಿಸಿತ್ತು. ಆದರೆ ಕೆಲವು ಭಾಗಗಳಲ್ಲಿ ಆನೆ ಕಂದಕಕ್ಕೆ ಮಣ್ಣು ಕುಸಿದಿದ್ದು, ಕಾಡಾನೆಗಳು ದಾಟಿ ನಾಡಿನತ್ತ ಧಾವಿಸುತ್ತಿವೆ. ಮತ್ತೆ ಕಾಡಿನತ್ತ ತೆರಳಲು ದಾರಿ ತಿಳಿಯದೆ ಸುತ್ತ ಮುತ್ತಲ ಕಾಡಂಚಿನ ಗ್ರಾಮಗಳ ರೈತರ ಜಮೀನುಗಳಲ್ಲಿ ಕಾಣಸಿಕೊಳ್ಳುತ್ತಿವೆ.

ನಷ್ಟದಲ್ಲಿ ರೈತ : ಕಾಡಾನೆಗಳು ರೈತರ ಬೆಳೆಗಳಾದ ಟಮೋಟೋ, ಬಾಳೆ ಹಾಗೂ ಮಾವಿನ ಮರದ ರೆಂಬೆ ಕೊಂಬೆಗಳನ್ನು ಕಿತ್ತು ತುಳಿದು ನಾಶಪಡಿಸುತ್ತಿವೆ ಬೆಳೆಗಳನ್ನು ತಿಂದು ತುಳಿದು ಹಾಳು ಮಾಡುತ್ತಿವೆ. ಅರಣ್ಯ ಇಲಾಖೆಯಿಂದ ಬರುವ ಪರಿಹಾರ ರೈತರಿಗೆ ಸಾಕಾಗುವುದಿಲ್ಲ. ವರ್ಷಾನುಗಟ್ಟಲೇ ಅರಣ್ಯ ಇಲಾಖೆಯ ಕಚೇರಿಗೆ ಪರಿಹಾರ ಹಣ ಕೇಳಲು ಅಲೆಯುವಂತಾಗಿದೆ. ಎಂದು ಗ್ರಾಮಸ್ಥರು ಅಳಲನ್ನು ತೋಡಿಕೊಂಡರು.

ಬೇಗೂರು ಸಮೀಪದ ಕುರುಬರಹುಂಡಿ ಗ್ರಾಮದ ಹೊರವಲಯದ ಕಾಡಂಚಿನ ಜಮೀನಿನಲ್ಲಿ ಕಾಣಿಸಿಕೊಂಡ ಕಾಡಾನೆಗಳು ಮಾವಿನ ಮರದ ರೆಂಬೆ ಕೊಂಬೆಗಳನ್ನು ಕಿತ್ತು ನಾಶಪಡಿಸುತ್ತಿವೆ.

ಬೈಕ್–ಮಿನಿ ಲಾರಿ ಡಿಕ್ಕಿ: ಸವಾರ ಸಾವು

ಬೇಗೂರು: ರಾಷ್ಟ್ರೀಯ ಹೆದ್ದಾರಿಯ 766 ರ ತೊಂಡವಾಡಿ ಗೇಟ್ ಬಳಿ ಬೈಕ್ ಮತ್ತು ಮಿನಿ ಲಾರಿ ನಡುವೆ ಡಿಕ್ಕಿ ಸಂಭವಿಸಿ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ನಡೆದಿದೆ

ಗುಂಡ್ಲುಪೇಟೆ ಕಡೆಯಿಂದ ಬಂದ ತರಕಾರಿ ಲಾರಿ ಹಾಗೂ ಮೈಸೂರಿನಿಂದ ಊಟಿಗೆ ತೆರಳುತ್ತಿದ್ದ ಪ್ರವಾಸಿಗ ಬೈಕ್ ಸವಾರ ಮಂಜುನಾಥ್ (32)ಗೆ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಈತ ಮೂಲತಃ ಬೆಂಗಳೂರಿನವನು ಎಂದು ತಿಳಿದುಬಂದಿದೆ ಬೈಕ್‌ನ ಹಿಂಬದಿ ಕುಳಿತಿದ್ದ ಕೃಷ್ಣ (31) ಎಂಬವರಿಗೆ ಗಾಯಗಳಾಗಿದ್ದು ಆಸ್ಪತ್ರೆಗೆ ದಾಖಲು ಮಾಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ ಈ ಬಗ್ಗೆ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಗುಂಬಳ್ಳಿ ರಾಜಣ್ಣ ಆಯ್ಕೆ


ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಗುಂಬಳ್ಳಿ ರಾಜಣ್ಣ ಅವರನ್ನು ಆಡಳಿತ ಮಂಡಳಿ ಅಭಿನಂದಿಸಿತು.

ಯಳಂದೂರು: ತಾಲೂಕಿನ ಬಿಳಿಗಿರಿ ರಂಗನಬೆಟ್ಟದ ಶ್ರೀ ಬಿಳಿಗಿರಿರಂಗನಾಥಸ್ವಾಮಿ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ನೂತನ ಅಧ್ಯಕ್ಷರಾಗಿ ಗುಂಬಳ್ಳಿ ರಾಜಣ್ಣ ಅವಿರೋಧವಾಗಿ ಆಯ್ಕೆಯಾದರು.

ಹಿಂದಿನ ಅಧ್ಯಕ್ಷ ಜೆ.ಶ್ರೀನಿವಾಸ್‌ರವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ದೇವಾಲಯದ ಕಚೇರಿಯಲ್ಲಿ ನಡೆದ ಸಮಿತಿ ಸಭೆಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು. ಸಮಿತಿಯ ಎಲ್ಲಾ ಸದಸ್ಯರು ಸೇರಿ ಗುಂಬಳ್ಳಿ ರಾಜಣ್ಣರವರನ್ನು ಅಧ್ಯಕ್ಷರನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿರವರ ಸೂಚನೆ ಮೇರೆಗೆ ಎಲ್ಲಾ ಸದಸ್ಯರು ನನ್ನನ್ನು ಆಯ್ಕೆ ಮಾಡಿದ್ದಾರೆ. ಮಾನ್ಯ ಶಾಸಕರಿಗೆ ಹಾಗೂ ಎಲ್ಲಾ ಸದಸ್ಯರಿಗೆ ನಾನು ಚಿರಋಣಿಯಾಗಿರುತ್ತೇನೆ. ದೇವಸ್ಥಾನದ ಅಭಿವೃದ್ಧಿಗೆ ಸಂಬಂಧಿಸಿದಂತೆ ಎಲ್ಲರ ಸಲಹೆ ಪಡೆದು ಶ್ರಮಿಸುತ್ತೇನೆ ಎಂದು ಗುಂಬಳ್ಳಿ ರಾಜಣ್ಣ ತಿಳಿಸಿದರು.

ನಿರ್ಗಮಿತ ಅಧ್ಯಕ್ಷ ಜೆ.ಶ್ರೀನಿವಾಸ್ ಮಾತನಾಡಿ, ಶಾಸಕ ಎ.ಆರ್.ಕೃಷ್ಣಮೂರ್ತಿ ನಮ್ಮೆಲ್ಲರನ್ನು ಸಮಿತಿಯ ಸದಸ್ಯರುಗಳನ್ನಾಗಿ ಸರ್ಕಾರದಿಂದ ನೇಮಕ ಮಾಡಿಸಿ, ಮೊದಲ ಬಾರಿಗೆ ನನಗೆ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದರು. ವೈಯಕ್ತಿಕ ಕಾರಣಗಳಿಂದ ಅಧ್ಯಕ್ಷ ಸ್ಥಾನಕ್ಕೆ ನಾನು ರಾಜೀನಾಮೆ ನೀಡಿದ್ದು, ಇಷ್ಟು ದಿನ ನನಗೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ನಾವೆಲ್ಲರೂ ಸೇರಿ ಒಮ್ಮತದಿಂದ ಮುಂದಿನ ಅವಧಿಗೆ ರಾಜಣ್ಣ ಅವರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದು, ಅವರ ಆಡಳಿತಾವಧಿಯಲ್ಲಿ ದೇವಾಲಯವನ್ನು ಮತ್ತಷ್ಟು ಅಭಿವೃದ್ಧಿಪಡಿಸಲು ಸಹಕರಿಸುತ್ತೇವೆ ಎಂದು ತಿಳಿಸಿದರು.

ಸಮಿತಿ ಸದಸ್ಯ ಕಾರ್ಯದರ್ಶಿ ಹಾಗೂ ಇಓ ಸುರೇಶ್, ಸದಸ್ಯ ರಾದ ಅರ್ಚಕ ರವಿಕುಮಾರ್, ಕೇತಮ್ಮ, ನಾರಾ ಯಣ ಸ್ವಾಮಿ, ವೆಂಕಟರಾಮು, ಸುರೇಶ್, ಸ್ಫೂರ್ತಿ ನಾಗೇಶ್, ಸಿಬ್ಬಂದಿಗಳಾದ ಸೋಮಣ್ಣ, ಶೇಷಾದ್ರಿ, ಬಸವರಾಜು, ಶಶಿ, ರಮೇಶ್ ಬಾಬು ಇತರರು ಹಾಜರಿದ್ದರು.

48ನೇ ತಿಂಗಳ ನೇತ್ರ ಶಿಬಿರ ಯಶಸ್ವಿ

ಕೊಳ್ಳೇಗಾಲ: ಹೆಚ್.ಕೆ.ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್, ವಿಶ್ವಚೇತನ ಸಮೂಹ ವಿದ್ಯಾ ಸಂಸ್ಥೆಗಳು, ರೋಟರಿ ಮಿಡ್‌ಟೌನ್ ಹಾಗೂ ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆ ಸಹಯೋಗದೊಂದಿಗೆ ಭಾನುವಾರ ನಡೆದ 48ನೇ ತಿಂಗಳ ನೇತ್ರ ನಿರಂತರ ಕಣ್ಣಿನ ತಪಾಸಣಾ ಶಿಬಿರದಲ್ಲಿ 236ಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದರು.


ನೇತ್ರ ತಪಾಸಣಾ ಶಿಬಿರದಲ್ಲಿ ವೈದ್ಯ ಡಾ. ಮೇನಕ ರೋಗಿಗಳ ತಪಾಸಣೆಯಲ್ಲಿ ಪಾಲ್ಗೊಂಡರು

ಶಿಬಿರದಲ್ಲಿ ಪಾಲ್ಗೊಂಡ 266 ಮಂದಿ ಪೈಕಿ ವಿವಿಧ ನ್ಯೂನ್ಯತೆ ಕಂಡು ಬಂದ ಹಿನ್ನೆಲೆ ಕಣ್ಣಿನ ಶಸ್ತ್ರ ಚಿಕಿತ್ಸೆಗಾಗಿ ಕೊಯಮತ್ತೂರು ಅರವಿಂದ ಕಣ್ಣಿನ ಆಸ್ಪತ್ರೆಗೆ ಕಳುಹಿಸಲಾಯಿತು.

ಟ್ರಸ್ಟ್ ಕಾರ್ಯದರ್ಶಿ ಪ್ರೇಮಲತಾ ಕೃಷ್ಣಸ್ವಾಮಿ ಮಾತನಾಡಿ, 47ತಿಂಗಳ ಕಾಲ ನೇತ್ರ ಕಾರ್ಯಕ್ರಮ ಯಶಸ್ವಿಯಾಗಿ ಜರುಗುತ್ತಿದ್ದು ಇಲ್ಲಿವರೆಗೂ 5568 ರೋಗಿಗಳು ಶಿಬಿರದಲ್ಲಿ ಪಾಲ್ಗೊಂಡಿದ್ದು, ಈ ಪೈಕಿ 3359 ಮಂದಿಗೆ ವಿವಿಧ ದೋಷ ಕಣ್ಣಿನಲ್ಲಿ ಕಂಡು ಬಂದ ಹಿನ್ನೆಲೆ ಶಸ್ತ್ರ ಚಿಕಿತ್ಸೆ ನಡೆಸಲಾಗಿದೆ ಎಂದರು

ಅರವಿಂದ ಕಣ್ಣಿನ ಆಸ್ಪತ್ರೆಯ ಡಾ. ಅಜಯ್ ವೆಂಕಟ ಅನಂತನ್, ಡಾ. ಹರಿ ಉತ್ತಮ್ ಕುಮಾರ್, ಡಾ.ಮೇನಕ, ಸಂಯೋಜಕ ವಿಜಯ್ ಕುಮಾರ್, ವಿಶ್ವಚೇತನ ವಿದ್ಯಾ ಸಂಸ್ಥೆಯ ವ್ಯವಸ್ಥಾಪಕ ರವಿತೇಜ, ಗಾಯತ್ರಿ, ಶಿವಣ್ಣ, ಸಿದ್ದರಾಜು ಇನ್ನಿತರರಿದ್ದರು

ಮಲೇಷ್ಯಾಗೆ ಆಯ್ಕೆಯಾದ ಪ್ರಿಸ್ಬೀ ಕ್ರೀಡಾಪಟು ಸಂಧ್ಯಾಗೆ ಸನ್ಮಾನ


ಗುಂಡ್ಲುಪೇಟೆ ಗಡಿನಾಡು ರಕ್ಷಣಾ ಸೇನೆ ವತಿಯಿಂದ ತಾಲೂಕಿನ ಶಿಂಡನಪುರ ಗ್ರಾಮದ ಸಂಧ್ಯಾ ಎಂಬ ವಿದ್ಯಾರ್ಥಿನಿಯು ಜುಲೈ ತಿಂಗಳಿನಲ್ಲಿ ಮಲೇಷ್ಯಾದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಅಲ್ಟಿಮೇಟ್ ಪ್ರಿಸ್ಬಿ ಕ್ರೀಡಾಕೂಟದಲ್ಲಿ ಭಾರತದ ಪರವಾಗಿ ಭಾಗವಹಿಸಲು ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ಸನ್ಮಾನಿಸಲಾಯಿತು. ಸಂಘಟನೆಯ ರಾಜ್ಯ ಗೌರವಾಧ್ಯಕ್ಷ ಉಲ್ಲಾಸ್, ರಾಜ್ಯ ಉಸ್ತುವಾರಿಗಳಾದ ಅಬ್ದುಲ್ ರಶೀದ್, ರಾಜ್ಯ ಯುವ ಘಟಕದ ಅಧ್ಯಕ್ಷ ಇಲಿಯಾಸ್ (ಕುಮಾರ್,) ರಾಜ್ಯ ಉಪಾಧ್ಯಕ್ಷ ಅಲೀಂ ಪಾಷಾ, ತಾಲೂಕು ಕಾರ್ಯದರ್ಶಿ ಡ್ಯಾನ್ಸರ್ ಸದ್ದಾಂ ಹಾಗೂ ಗ್ರಾಮದ ಮುಖಂಡರು ಉಪಸ್ಥಿತರಿದ್ದರು.

ಸ್ಥಳೀಯರ ಸುಲಿಗೆ ಮಾಡುತ್ತಿರುವ ರಾಷ್ಟ್ರೀಯ ಹೆದ್ದಾರಿಯ

ಅನಧಿಕೃತ ಟೋಲ್ ತೆರವುಗೊಳಿಸಲು ಹೋರಾಟಕ್ಕೆ ನಿರ್ಧಾರ

ಪೂರ್ವಭಾವಿ ಸಭೆಯಲ್ಲಿ ಮುಖಂಡರ ತೀರ್ಮಾನ





ಟೋಲ್ ಪ್ಲಾಜಾ ತೆರವಿಗೆ ಆಗ್ರಹಿಸಿ ಹೋರಾಟ ರೂಪಿಸಲು ಪೂರ್ವಭಾವಿ ಸಭೆ ನಡೆಯಿತು. ಮತ್ತೊಂದು ಚಿತ್ರದಲ್ಲಿ ಯಡದೊರೆ ಬಳಿಯ ಟೋಲ್ ಕಾಣಬಹುದು.

ತಿ.ನರಸೀಪುರ, ಜೂ.14– ರಾಷ್ಟ್ರೀಯ ಹೆದ್ದಾರಿ 766ರಲ್ಲಿರುವ ಅಕ್ರಮ, ಅನಧಿಕೃತ ಟೋಲ್ ಪ್ಲಾಜಾಗಳನ್ನು ಹೆದ್ದಾರಿಯಿಂದ ಮುಕ್ತಗೊಳಿಸಲು ಹೋರಾಟ ನಡೆಸಲು ಪಟ್ಟಣದಲ್ಲಿ ಭಾನುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.

ಪಟ್ಟಣದ ಎಂ.ಮಹದೇವಪ್ಪ ಸ್ಮಾರಕ ಭವನದಲ್ಲಿ ಅನಧಿಕೃತ, ಅಕ್ರಮ ಟೋಲ್ ಪ್ಲಾಜಾಗಳ ವಿನಾಯಿತಿ ಇದ್ದರೂ ಸ್ಥಳೀಯರನ್ನು ಸುಲಿಗೆ ಮಾಡುತ್ತಿರುವವರ ವಿರುದ್ಧ ಹೋರಾಟ ರೂಪಿಸಲು ಕರೆದಿದ್ದ ಸಭೆಯಲ್ಲಿ ಟೋಲ್ ಮುಕ್ತ ಎನ್‌ಎಚ್ 766 ಹೋರಾಟ ಸಮಿತಿ ರಚಿಸಿ, ಟೋಲ್ ಮುಕ್ತ ಹೋರಾಟಕ್ಕೆ ಚರ್ಚಿಸಲಾಯಿತು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಮಾತನಾಡಿ, ಅನಧಿಕೃತ ಟೋಲ್ ಪ್ಲಾಜಾಗಳಿರುವ ಹೆದ್ದಾರಿಯ ಪರಿಸ್ಥಿತಿಯನ್ನು ಸರಿ ಇಲ್ಲ. ಹಲವು ವರ್ಷಗಳಿಂದ ಟೋಲ್ ವಸೂಲಿ ಮಾಡುತ್ತಿದ್ದರೂ ಹೆದ್ದಾರಿ ಅಗಲೀಕರಣ, ಕನಿಷ್ಠ ಬೀದಿ ದೀಪಗಳಂತಹ ಮೂಲ ಸೌಕರ್ಯಗಳನ್ನು ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರ ಕಲ್ಪಿಸಿಲ್ಲ. ರಸ್ತೆ ಗುಂಡಿ ಬಿದ್ದು ಹಾಳಾಗಿದೆ. ನಿತ್ಯವೂ ಕಿರಿಕಿರಿ, ಕಿರುಕುಳ ಅನುಭವಿಸಿ ಟೋಲ್ ಕಟ್ಟುತ್ತಿದ್ದೇವೆ. ಸೂಕ್ತ ಸೌಲಭ್ಯ ಕಲ್ಪಿಸದೇ ಸ್ಥಳೀಯರನ್ನು ಸುಲಿಗೆ ಮಾಡಲಾಗುತ್ತಿದೆ. ಇಂತಹ ಅನ್ಯಾಯದ ಹಗಲು ದರೋಡೆ ವಿರುದ್ಧ ಸಂಘಟಿತ ಹೋರಾಟ ಆಯೋಜಿಸಿ, ರಾಷ್ಟ್ರೀಯ ಹೆದ್ದಾರಿಯನ್ನು ಟೋಲ್ ಪ್ಲಾಜಾಗಳಿಂದ ಮುಕ್ತಗೊಳಿಸಬೇಕು ಎಂದು ಸಲಹೆ ನೀಡಿದರು.

ಯಡದೊರೆ ಸೇರಿದಂತೆ ಕಡಕೊಳ ಬಳಿಯ ಕೆ.ಎನ್.ಹುಂಡಿ ಹಾಗೂ ಚಾ.ನಗರ ಗಡಿಯ ಕಣ್ಣೇಗಾಲ ಬಳಿಯ ಟೋಲ್ ಪ್ಲಾಜಾಗಳ ಬಗ್ಗೆ ಮಾಹಿತಿ ನೀಡಿದ ಟೋಲ್ ಮುಕ್ತ ಹೋರಾಟ ಸಮಿತಿ ಸಂಚಾಲಕ ಹೆಚ್.ಅರ್ಕೇಶ್ ಅವರು, ಹೋರಾಟದ ರೂಪುರೇಷೆಯನ್ನು ಸಿದ್ಧಪಡಿಸಲು 15 ಜನರ ಸಮಿತಿ ರಚನೆ ಮಾಡಲಾಗಿದೆ. ಸದ್ಯದಲ್ಲೇ ಹೋರಾಟ ರೂಪಿಸಲಾಗುವುದು. ರಾಷ್ಟ್ರೀಯ ಹೆದ್ದಾರಿ ಎಂದು ಹಳೇ ರಸ್ತೆಯಲ್ಲಿರುವ 3 ಅಕ್ರಮ ಟೋಲ್‌ಗಳನ್ನು ಮುಕ್ತಗೊಳಿಸುವುದೇ ನಮ್ಮ ಹೋರಾಟದ ಉದ್ದೇಶವಾಗಿದೆ ಎಂದರು.

> ಹಲವು ವರ್ಷಗಳಿಂದ ರಾಷ್ಟ್ರೀಯ ಹೆದ್ದಾರಿ 766ರಲ್ಲಿರುವ ಟೋಲ್ ಪ್ಲಾಜಾಗಳು ಅಕ್ರಮವೋ ಅಥವಾ ಸಕ್ರಮವೋ ಎಂಬುದನ್ನು ಈ ಭಾಗದ ಸಂಸದರು ಮೊದಲು ಸ್ಪಷ್ಟಪಡಿಸಬೇಕು. ಅಕ್ರಮ ಆಗಿದ್ದಲ್ಲಿ ಲೋಕಸಭೆ ಅಧಿವೇಶನದಲ್ಲಿ ಜನರನ್ನು ಸುಲಿಗೆ ಮಾಡುತ್ತಿರುವ ಬಗ್ಗೆ ಧ್ವನಿ ಎತ್ತಬೇಕು. ರಾಷ್ಟ್ರೀಯ ಹೆದ್ದಾರಿ ನಿರ್ಮಿಸಿ, ಟೋಲ್ ವಸೂಲಿ ಮಾಡುವುದು ವೈಜ್ಞಾನಿಕ ಕ್ರಮ. ಆದರೆ ಹಿಂದಿನ ರಸ್ತೆಯನ್ನೇ ಸ್ವಲ್ಪ ಮಟ್ಟಿಗೆ ಅಗಲೀಕರಣಗೊಳಿಸಿ, ಹೆದ್ದಾರಿ ಎಂದು ವಾಹನ ಮಾಲೀಕರಿಂದ ಹಾಗೂ ಸಾರ್ವಜನಿಕರಿಂದ ಅಕ್ರಮವಾಗಿ ಸುಂಕ ವಸೂಲಿ ಮಾಡುತ್ತಿರುವವರ ವಿರುದ್ಧ ದೊಡ್ಡಮಟ್ಟದ ಹೋರಾಟ ಮಾಡಬೇಕಿದೆ.
> – ಸೋಸಲೆ ಎಂ.ಶಿವಕುಮಾರ್(ಬಡ್ಡು), ಜೆಡಿಎಸ್ ಯುವ ಮುಖಂಡ.

ಸಭೆಯಲ್ಲಿ ವಿವಿಧ ಸಂಘಟನೆಗಳ ಪ್ರಮುಖರು ಟೋಲ್ ಮುಕ್ತ ಹೋರಾಟಕ್ಕೆ ಪೂರಕವಾಗಿ ತಮ್ಮ ಸಲಹೆ ಸೂಚನೆ ನೀಡಿದಲ್ಲದೆ ಅಭಿಪ್ರಾಯ ಮಂಡಿಸಿ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು. ಅನೇಕ ಮುಖಂಡರು ಟೋಲ್‌ಗೆ ಸಂಬಂಧಿಸಿದಂತಹ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿ ಅಂತಿಮವಾಗಿ ಟೋಲ್ ಮುಕ್ತಗೊಳಿಸಲು ಸಮಿತಿಯೊಂದನ್ನು ರಚಿಸುವ ನಿರ್ಣಯಕ್ಕೆ ಒಕ್ಕೊರಲ ಸೂಚಿಸಿದರು.

ಸಭೆಯಲ್ಲಿ ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎನ್.ಲಿಂಗಪ್ಪಾಜಿ, ಬಸ್ ಮಾಲೀಕರ ಸಂಘದ ಜಿಲ್ಲಾ ಕಾರ್ಯದರ್ಶಿ ಹೋಟೆಲ್ ರಾಜಣ್ಣ, ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಸಿ.ಎಂ.ಪ್ರಕಾಶ್, ದಸಂಸ ಬಣ ರಹಿತ ಜಿಲ್ಲಾ ಸಂಚಾಲಕ ಸಿ.ಉಮಾ ಮಹದೇವ, ರೈತ ಸಂಘದ ಅಧ್ಯಕ್ಷ ಕರೋಹಟ್ಟಿ ಕುಮಾರಸ್ವಾಮಿ, ಎಂ.ಆರ್.ಶಿವಮೂರ್ತಿ, ಕಬ್ಬು ಬೆಳೆಗಾರರ ಜಿಲ್ಲಾ ಕಾರ್ಯಾಧ್ಯಕ್ಷ ಕಿರಗಸೂರು ಶಂಕರ್, ತಾಲೂಕು ಅಧ್ಯಕ್ಷ ಕುರುಬೂರು ಸಿದ್ದೇಶ, ಗೌರಿಶಂಕರ, ಪ್ರಸಾದ್ ನಾಯಕ್, ಬಿಜೆಪಿ ಕ್ಷೇತ್ರ ಅಧ್ಯಕ್ಷ ಹಿರಿಯೂರು ಶಿವಕುಮಾರ್(ಸರ್ದಾರ್), ಖಾಸಗಿ ಬಸ್ ಏಜೆಂಟರ ಸಂಘದ ಅಧ್ಯಕ್ಷ ಶ್ರೀನಿವಾಸ್, ಮುಖಂಡರಾದ ಹಳ್ಳಿಕೆರೆಹುಂಡಿ ಭಾಗ್ಯರಾಜ್, ಬಿ.ಎಂ.ಶಿವಕುಮಾರ್, ಹಲಗೂರು ಚಂದ್ರಶೇಖರ್, ಬಸವರಾಜು, ವೈನ್ ಗುರು, ಎನ್.ಲೋಕೇಶ್, ಫ್ಯಾನ್ಸಿ ಮಹೇಶ್, ಈ.ರಾಜು, ಸೋಸಲೆ ಮಹೇಶ್ ಕುಮಾರ್, ಪುಟ್ಟಸ್ವಾಮಿ, ಎಸ್.ನಂಜುಂಡಯ್ಯ, ಶಾಂತರಾಜು, ಶಿವಪ್ರಸಾದ್, ಮಂಜು ಆಚಾರಿ, ಸ್ಟಿಕ್ಕರ್ ಬಸವರಾಜು, ಭಾಗ್ಯರಾಜ್, ಆಡಿಟರ್ ಮಂಜುನಾಥ್, ಕಾರ್ ಮಲ್ಲಪ್ಪ, ಸುಜ್ಜಲೂರು ಚಂದ್ರು, ಹೆಚ್.ಎಂ.ರವಿಕುಮಾರ್ ಸೇರಿದಂತೆ ಅನೇಕರು ಇದ್ದರು.

ಬಿಸಿಯೂಟ ತಯಾರಿಸುವ ಸಿಬ್ಬಂದಿಗೆ ಸೀರೆ ವಿತರಣೆ

ಹುಣಸೂರು, ಜೂ.14– ನಿತ್ಯ ಬಿಸಿಯೂಟ ತಯಾರಿಸುವ ಶ್ರಮ ಜೀವಿಗಳ ನೆರವಿಗೆ ಮಡಿಲು ಸೇವಾ ಸಂಸ್ಥೆ ನಿಲ್ಲಲಿದೆ ಎಂದು ಸಂಸ್ಥೆಯ ಅಧ್ಯಕ್ಷೆ ಎಂ.ಡಿ.ತ್ರಿವೇಣಿ ಭರವಸೆ ನೀಡಿದರು.

ತಾಲೂಕಿನ ಬನ್ನಿಕುಪ್ಪೆ ಸರ್ಕಾರಿ ಶಾಲೆಯಲ್ಲಿ ಬನ್ನಿಕುಪ್ಪೆ ಕ್ಲಸ್ಟರ್ ಮಟ್ಟದ 24 ಸರ್ಕಾರಿ ಶಾಲೆಗಳ 110 ಅಡುಗೆ ತಯಾರಿಸುವ ಮಹಿಳಾ ಸಿಬ್ಬಂದಿಗೆ ಸಂಸ್ಥೆಯಿಂದ ಸಮವಸ್ತ್ರ(ಸೀರೆ) ವಿತರಿಸಿ ಮಾತನಾಡಿದ ಅವರು, ಸಂಸ್ಥೆ ವತಿಯಿಂದ ತಾಲೂಕಿನ ಸರ್ಕಾರಿ ಶಾಲೆಗಳಲ್ಲಿ ಬಿಸಿಯೂಟ ತಯಾರಿಸುವ ಮಹಿಳಾ ಸಿಬ್ಬಂದಿಗೆ ಸೀರೆ ವಿತರಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದರ ಮೊದಲ ಹಂತವಾಗಿ ಬನ್ನಿಕುಪ್ಪೆ ಕ್ಲಸ್ಟರ್‌ನ 24 ಶಾಲೆಗಳ 110 ಮಹಿಳಾ ಸಿಬ್ಬಂದಿಗೆ ಸಮವಸ್ತ್ರ ವಿತರಿಸಲಾಗಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ತಾಲೂಕಿನ ಎಲ್ಲಾ ಕ್ಲಸ್ಟರ್‌ಗಳ ಸರ್ಕಾರಿ ಶಾಲೆಗಳ ಬಿಸಿಯೂಟ ಸಿಬ್ಬಂದಿಗೆ ಸಮವಸ್ತ್ರ ವಿತರಿಸಲಾಗುವುದು ಎಂದರು.

ಈ ವೇಳೆ ಬಿಸಿಯೂಟ ನೌಕರರ ಸಂಘದ ಅಧ್ಯಕ್ಷೆ ಮಂಜುಳಾ, ಪಿಎಸಿಎಸ್ ಅಧ್ಯಕ್ಷ ಜಯರಾಂ, ನಿರ್ದೇಶಕ ಚಲುವರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಪ್ರಸನ್ನ ಕುಮಾರ್, ಯಜಮಾನ ಕೂಸಪ್ಪ, ಮುಖಂಡರಾದ ರಾಮಚಂದ್ರ, ಕೃಷ್ಣೇಗೌಡ, ಬಸವರಾಜು, ಶಿಕ್ಷಕ ಶಿವಕುಮಾರ್, ಉದ್ಯಮಿ ಅಶೋಕ್ ರಾಜಲಿಂಗಯ್ಯ ಸೇರಿದಂತೆ ಇನ್ನಿತರರಿದ್ದರು.



ಬಿಸಿಯೂಟ ತಯಾರಿಸುವ ಸಿಬ್ಬಂದಿಗೆ ಸೀರೆ ವಿತರಿಸಲಾಯಿತು.

ಮಕ್ಕಳಿಗೆ ಶಿಕ್ಷಣ ಕೊಡಿಸಿ ಅಂಬೇಡ್ಕರ್ ಕನಸು ಸಾಕಾರಗೊಳಿಸಿ

ಶಾಸಕ ದರ್ಶನ್ ಧ್ರುವನಾರಾಯಣ್ ಸಲಹೆ



ಕಾರ್ಯಕ್ರಮದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿದರು.

ನಂಜನಗೂಡು: ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯಗಳಾದ ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಮಾರ್ಗದಲ್ಲಿ ಸಮಾಜ ಸಾಗಿದಾಗ ಮಾತ್ರ ಅವರಿಗೆ ನಿಜವಾದ ಗೌರವ ಸಲ್ಲಿಸಿದಂತಾಗುತ್ತದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ತಾಲೂಕಿನ ಹುಲ್ಲಹಳ್ಳಿಯಲ್ಲಿ ಭೀಮ ಬಳಗದಿಂದ ಆಯೋಜಿಸಿದ್ದ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯಲ್ಲಿ ಮಾತನಾಡಿದ ಅವರು, ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅಂಬೇಡ್ಕರ್ ಕನಸುಗಳನ್ನು ಸಾಕಾರಗೊಳಿಸಬೇಕು. ಇನ್ನು ಬಾಬಾ ಸಾಹೇಬ್ ಅಂಬೇಡ್ಕರ್ ಭವನ ನಿರ್ಮಾಣದ ಜೊತೆಗೆ ಗ್ರಂಥಾಲಯ ಸ್ಥಾಪಿಸಿ ಓದುವ ವಾತಾವರಣ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು. ಜಯಂತಿ ಆಚರಣೆ ಕೇವಲ ಸಾಂಪ್ರದಾಯಿಕ ಕಾರ್ಯಕ್ರಮವಾಗದೆ ಅರ್ಥಪೂರ್ಣ ಚಟುವಟಿಕೆಗಳ ಮೂಲಕ ನಡೆಯಬೇಕು ಎಂದರು.

ಮಾಜಿ ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಅಂಬೇಡ್ಕರ್ ಜಯಂತಿ ಯಾವುದೇ ಒಂದು ಜಾತಿಗೆ ಸೀಮಿತವಾದ ಆಚರಣೆಯಲ್ಲ. ಸಂವಿಧಾನದ ಮೌಲ್ಯಗಳನ್ನು ಗೌರವಿಸುವ ಪ್ರತಿಯೊಬ್ಬರ ಹಬ್ಬವಾಗಿದೆ. ಇನ್ನು ಬುದ್ಧನ ತತ್ವಗಳು ಭಾರತೀಯ ಸಂವಿಧಾನದಲ್ಲಿ ಅಡಕವಾಗಿದ್ದು, ಅಂಬೇಡ್ಕರ್ ಅವರ ಚಿಂತನೆಗೆ ಬೌದ್ಧ ಧಮ್ಮ ಮಹತ್ತರ ಪ್ರೇರಣೆಯಾಗಿತ್ತು. ಜೊತೆಗೆ ಶಿಕ್ಷಣದ ಮೂಲಕವೇ ಸಮಾಜದ ಪ್ರಗತಿ ಸಾಧ್ಯವಾಗುತ್ತದೆ. ಆದ್ದರಿಂದ ಯುವ ಪೀಳಿಗೆಗೆ ಉತ್ತಮ ಶಿಕ್ಷಣ ದೊರೆಯುವಂತೆ ಎಲ್ಲರೂ ಶ್ರಮಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಕಾಂಗ್ರೆಸ್ ಮುಖಂಡ ಕುರಿಹುಂಡಿ ರಾಜು, ಗ್ರಾಪಂ ಮಾಜಿ ಸದಸ್ಯ ಮಲ್ಲಿಕಾರ್ಜುನ, ಅಶೋಕ್, ಮರಿಸ್ವಾಮಿ, ದೊರೆರಾಜು, ಪಿಎಸಿಎಸ್ ನಿರ್ದೇಶಕ ಶ್ರೀಕಂಠಯ್ಯ, ದೊಡ್ಡಗಂಡಯ್ಯ, ಗುತ್ತಿಗೆದಾರ ಕಾಳಪ್ಪ, ಭೀಮ ಬಳಗದ ಅಧ್ಯಕ್ಷ ಕುಮಾರ್, ಉಪಾಧ್ಯಕ್ಷ ಸಿದ್ದರಾಜು, ಮಧುಕರ್, ಸಂತೋಷ್, ಹರೀಶ್, ಪುನೀತ್, ಸಿದ್ದ, ಸಾಗರ್, ಯೋಗೇಶ್, ಚಂದನ್ ಮತ್ತಿತರರಿದ್ದರು.

ದುರಸ್ತಿಗೊಂಡ ಅಂಗನವಾಡಿ ಕಟ್ಟಡ ಉದ್ಘಾಟನೆ

ಖಾಸಗಿಗಿಂತ ಸರ್ಕಾರಿ ಶಾಲೆಯಲ್ಲಿ ಉತ್ತಮ ಫಲಿತಾಂಶ: ಪಿಡಿಒ ಶಿವಕುಮಾರ್



ದುರಸ್ತಿಗೊಂಡ ಅಂಗನವಾಡಿ ಕಟ್ಟಡವನ್ನು ಪಿಡಿಒ ಶಿವಕುಮಾರ್ ಉದ್ಘಾಟಿಸಿದರು.

ಹೆಚ್.ಡಿ.ಕೋಟೆ: ಖಾಸಗಿ ಶಾಲೆಗಳಿಗೆ ಹೋಲಿಸಿದರೆ ಈ ಬಾರಿ ಸರ್ಕಾರಿ ಶಾಲೆಗಳು ಉತ್ತಮ ಫಲಿತಾಂಶ ದಾಖಲಿಸಿದ್ದು, ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಸರ್ಕಾರಿ ಶಾಲೆಗಳು ಯಾವುದೇ ರೀತಿಯಲ್ಲೂ ಖಾಸಗಿ ಶಾಲೆಗಳಿಗಿಂತ ಹಿಂದೆಬಿದ್ದಿಲ್ಲ ಎಂದು ಪಿಡಿಒ ಶಿವಕುಮಾರ್ ಹೇಳಿದರು.

ತಾಲೂಕಿನ ಬೆಳಗನಹಳ್ಳಿ ಗ್ರಾಮದಲ್ಲಿ ಬೆಂಗಳೂರಿನ ಯುನೈಟೆಡ್ ವೇ ಸಂಸ್ಥೆ ಸಹಯೋಗದಲ್ಲಿ 5 ಲಕ್ಷ ರೂ. ವೆಚ್ಚದಲ್ಲಿ ದುರಸ್ತಿಗೊಂಡ ಅಂಗನವಾಡಿ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷಾ ಫಲಿತಾಂಶದಲ್ಲಿ ಕೋಟೆ ತಾಲೂಕು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿರುವುದು ಹೆಮ್ಮೆಯ ವಿಷಯ. ಇದಕ್ಕೆ ಶಿಕ್ಷಕರ ಶ್ರಮ, ವಿದ್ಯಾರ್ಥಿಗಳ ಪರಿಶ್ರಮ ಹಾಗೂ ಪೋಷಕರ ಸಹಕಾರವೇ ಕಾರಣ. ವಿಶೇಷವಾಗಿ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳು ಖಾಸಗಿ ಶಾಲೆಗಳಿಗಿಂತ ಹೆಚ್ಚಿನ ಫಲಿತಾಂಶ ಸಾಧಿಸಿರುವುದು ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಮೇಲಿನ ನಂಬಿಕೆಯನ್ನು ಮತ್ತಷ್ಟು ಹೆಚ್ಚಿಸಿದೆ ಎಂದರು.

ಪೋಷಕರು ಖಾಸಗಿ ಶಾಲೆಗಳ ವ್ಯಾಮೋಹ ಬಿಟ್ಟು ಸರ್ಕಾರಿ ಶಾಲೆಗೆ ತಮ್ಮ ಮಕ್ಕಳನ್ನು ದಾಖಲಿಸುವ ಮೂಲಕ ಸರ್ಕಾರದಿಂದ ದೊರೆಯುವ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಊಟ, ವಿದ್ಯಾರ್ಥಿ ವೇತನ ಸೇರಿದಂತೆ ವಿವಿಧ ಸೌಲಭ್ಯಗಳ ಪ್ರಯೋಜನ ಪಡೆಯಬೇಕು ಎಂದು ಮನವಿ ಮಾಡಿದರು.

ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗಳನ್ನು ಆರಂಭಿಸಲು ಕ್ರಮ ಕೈಗೊಂಡಿದ್ದು, ಪ್ರಾಥಮಿಕ ಶಿಕ್ಷಣದ ಭದ್ರ ಬುನಾದಿ ನಿರ್ಮಾಣಕ್ಕೆ ಇದು ಸಹಕಾರಿಯಾಗಲಿದೆ. ಬಾಲ್ಯದಿಂದಲೇ ಮಕ್ಕಳಿಗೆ ಉತ್ತಮ ಶಿಕ್ಷಣ, ಪೌಷ್ಟಿಕ ಆಹಾರ ಹಾಗೂ ಮೌಲ್ಯಾಧಾರಿತ ಶಿಕ್ಷಣ ದೊರೆಯುವಂತೆ ಮಾಡುವ ಉದ್ದೇಶದಿಂದ ಸರ್ಕಾರ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ ಎಂದರು.

ಬೆಳಗನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗ್ರಾಪಂನಿಂದ ಕೈಗೆತ್ತಿಕೊಳ್ಳಲಾದ ಕೆಲವು ಅಭಿವೃದ್ಧಿ ಕಾಮಗಾರಿಗಳು ಅಪೂರ್ಣವಾಗಿದ್ದು, ಅವುಗಳನ್ನು ಶೀಘ್ರದಲ್ಲೇ ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ ರಜಿತ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಕ್ಕಳ ಜಾಗೃತಿ ಸಂಸ್ಥೆಯ ದಿವ್ಯ, ನವೀನ್, ಪ್ರಕಾಶ್, ಶಿಕ್ಷಕರಾದ ಪ್ರಕಾಶ್ ಮತ್ತು ಸೌಮ್ಯ, ಅಂಗನವಾಡಿ ಕಾರ್ಯಕರ್ತೆಯರಾದ ಪ್ರೇಮ, ಜ್ಯೋತಿ, ಸೀತಾ, ಸಹಾಯಕಿ ಕೆ.ಆರ್. ರಮ್ಯಶ್ರೀ, ಗ್ರಾಮದ ಹಿರಿಯರಾದ ಸೋಮಣ್ಣ ಮತ್ತು ಸೋಮೇಗೌಡ, ಮುಖಂಡರಾದ ಭೈರೇಗೌಡ, ಈಶ್ವರೇಗೌಡ, ನಾಗರಾಜು, ಮಹದೇವಶೆಟ್ಟಿ, ನಾಗೇಶ್, ಜನಾರ್ಧನ್, ಗ್ರಾಮ ಪಂಚಾಯಿತಿ ಸಿಬ್ಬಂದಿ ಕೃಷ್ಣ, ಎಸ್‌ಡಿಎಂಸಿ ಅಧ್ಯಕ್ಷ ಸುರೇಶ್, ಆಶಾ ಕಾರ್ಯಕರ್ತೆ ಜಯಮ್ಮ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಮಾನವನ ಉತ್ತಮ ಹವ್ಯಾಸಗಳಿಂದ ವ್ಯಕ್ತಿತ್ವ ವಿಕಾಸ



ಕಾರ್ಯಕ್ರಮದಲ್ಲಿ ಸಾಮಾಜಿಕ ಹೋರಾಟಗಾರ ಗ್ರಾಮೀಣ ಮಹೇಶ್ ಮಾತನಾಡಿದರು.

ಸರಗೂರು: ತಾನು ರೂಢಿಸಿಕೊಳ್ಳುವ ಅಭ್ಯಾಸಗಳಿಂದ ಮನುಷ್ಯ ಮಾದರಿ ವ್ಯಕ್ತಿಯಾಗಿ ರೂಪುಗೊಳ್ಳಲಿದ್ದಾನೆ ಎಂದು ಸಾಮಾಜಿಕ ಹೋರಾಟಗಾರ ಗ್ರಾಮೀಣ ಮಹೇಶ್ ಹೇಳಿದರು.

ತಾಲೂಕಿನ ಮುಳ್ಳೂರು ಗ್ರಾಮದಲ್ಲಿ ಗ್ರಾಮೀಣ ವಿಕಾಸ ಸಂಸ್ಥೆಯಿಂದ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗ್ರಾಮ ವಿಕಾಸ ಸಂಸ್ಥೆ ಗ್ರಾಮೀಣ ಮಟ್ಟದಲ್ಲಿ ಉತ್ತಮ ಪರಿಸರ ನಿರ್ಮಿಸಲು ಶ್ರಮಿಸುತ್ತಿದೆ. ಅದೇ ರೀತಿ ತಾಲೂಕಿನ ವಿವಿಧ ಗ್ರಾಮಗಳ ಸೇವಾನಿರತ ಮಹಿಳೆಯರು ಸ್ವಯಂ ಪ್ರೇರಣೆಯಿಂದ ಪರಿಸರ ಕಾಪಾಡುವ ನಿಟ್ಟಿನಲ್ಲಿ ದೇಶಿ ಆಟಗಳನ್ನು ಉಳಿಸುವಲ್ಲಿ ಮುಂದೆ ಬಂದಿರುವುದು ಬಹಳ ಬೆಳವಣಿಗೆಯಾಗಿದೆ ಎಂದು ತಿಳಿಸಿದರು.

ನಿತ್ಯ ಬೇಗನೆ ಏಳುವುದು, ಸ್ವಚ್ಛವಾಗುವುದು, ಮನೆ ಹಿತ್ತಲಿನಲ್ಲಿ ರಾಸಾಯನಿಕ ಬಳಸದೇ ಸಾವಯವ ಮಾದರಿ ಕೈತೋಟ ನಿರ್ಮಿಸಿ ತರಕಾರಿ ಬೆಳೆಯುವುದು, ಶುದ್ಧವಾದ ಅಡುಗೆ ತಯಾರಿಸುವುದು, ಉತ್ತಮ ಪುಸ್ತಕಗಳನ್ನು ಓದುವುದು, ಒಳ್ಳೆಯ ಮಾತುಗಳನ್ನು ಆಡುವುದು, ಉತ್ತಮವಾದ ಚಿಂತನೆ ಮಾಡುವುದು, ಪರಿಸರ ಸಂರಕ್ಷಣೆ ಮಾಡುವುದು, ಮಕ್ಕಳೊಂದಿಗೆ ಒಳ್ಳೆಯ ನಡೆ–ನುಡಿ, ವ್ಯಾಯಾಮ ಮಾಡುವುದು, ದೈನಂದಿನ ಚಟುವಟಿಕೆಗಳು ಉತ್ತಮವಾಗಿರಬೇಕು ಎಂದು ಸಲಹೆ ನೀಡಿದರು.

ಮಾನವನ ಉತ್ತಮ ಹವ್ಯಾಸಗಳಿಂದ ವ್ಯಕ್ತಿತ್ವ ವಿಕಾಸಗೊಳ್ಳುತ್ತದೆ. ವ್ಯಕ್ತಿ ವಿಕಾಸಗೊಂಡರೆ ಗ್ರಾಮ ವಿಕಾಸಗೊಳ್ಳುತ್ತದೆ. ಗ್ರಾಮ ವಿಕಾಸಗೊಂಡರೆ, ದೇಶ ವಿಕಾಸಗೊಳ್ಳುತ್ತದೆ. ಇಂತಹ ಉದ್ದೇಶಗಳನ್ನೊಳಗೊಂಡ ಈ ಸಂಸ್ಥೆ ಕಾರ್ಯಗಳು ಮೆಚ್ಚುವಂತಾಗಿದೆ. ಹೀಗೆ ಎಲ್ಲರೂ ಒಳ್ಳೆಯತನದಿಂದ ಮುಂದುವರಿದರೆ ದೇಶ ಅಭಿವೃದ್ಧಿಯಾಗಲು ಸಾಧ್ಯ ಎಂದರು.

ವೇದಿಕೆ ಕಾರ್ಯಕ್ರಮದ ನಂತರ ಕಲಿಕಾ ಕೇಂದ್ರದಲ್ಲಿ ಭಾಗವಹಿಸಿದ್ದ ವಿವಿಧ ಗ್ರಾಮಗಳಿಂದ ಆಗಮಿಸಿದ್ದ ಮಹಿಳಾ ಕಾರ್ಯಕರ್ತರು ಗಿಡಗಳನ್ನು ನೆಟ್ಟರು. ಗ್ರಾಮೀಣಾಭಿವೃದ್ಧಿ ಬಗ್ಗೆ ಚಿಂತನ ಮಂಥನ ನಡೆಸಲಾಯಿತು. ದೇಶಿ ಆಟಗಳು, ಭಜನೆ, ಅಭಿನಯಗೀತೆ ಹಾಗೂ ಮುಂತಾದ ಕಾರ್ಯಕ್ರಮಗಳು ನಡೆದವು.

ಈ ವೇಳೆ ಗ್ರಾಮ ವಿಕಾಸ ಜಿಲ್ಲಾ ಸಂಯೋಜಕ ಮಣಿರಾಜು, ಸಂಯೋಜಕ ಶಿವ ಕುಮಾರ್, ತಾಲೂಕು ಸಂಯೋಜಕ ಗಣೇಶ, ನಾಡಗೌಡಿಕೆ ಶಿವಕುಮಾರ, ಜೆಎಸ್‌ಎಸ್ ದೈಹಿಕ ಶಿಕ್ಷಕರಾದ ಶಿವಕುಮಾರ್, ಕಲಿಕಾ ಕೇಂದ್ರ ಪುರುಷ ಪಾಲಕರು, ಪೂರ್ಣಾವಧಿ ಅಕ್ಕಂದಿರಾದ ಶಾರದಾ, ಚೈತ್ರ ಹಾಗೂ ಸ್ವಯಂ ಸೇವಕರು ಹಾಜರಿದ್ದರು.

ಮೂಡಲಕೊಪ್ಪಲಲ್ಲಿ ರಸ್ತೆ, ಚರಂಡಿ ಕಾಮಗಾರಿಗೆ ಚಾಲನೆ



ರಸ್ತೆ, ಚರಂಡಿ ಕಾಮಗಾರಿಗೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಕೆ.ಆರ್.ನಗರ: ಕಂಠೇನಹಳ್ಳಿ ಬಡಾವಣೆ ಮತ್ತು ಮೂಡಲಕೊಪ್ಪಲು ಗ್ರಾಮಸ್ಥರಿಗೆ ಕಳೆದ ವಿಧಾನಸಭಾ ಚುನಾವಣೆ ಪೂರ್ವದಲ್ಲಿ ನೀಡಿದ್ದ ಭರವಸೆಯಂತೆ ಪಟ್ಟಣದಿಂದ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯನ್ನು 3.50 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ತಾಲೂಕಿನ ಮೂಡಲಕೊಪ್ಪಲು ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಭಾನುವಾರ ಚಾಲನೆ ನೀಡಿ ಮಾತನಾಡಿದ ಅವರು, ರಸ್ತೆ ಕೆಲಸ ಆರಂಭಗೊಂಡ ನಂತರ ಅಗಲೀಕರಣ ಮಾಡುವ ಸಂದರ್ಭ ಗ್ರಾಮಸ್ಥರು ಸಹಕಾರ ನೀಡಬೇಕು. ಜೊತೆಗೆ ಕಾಮಗಾರಿ ಗುಣಮಟ್ಟ ಪರಿಶೀಲಿಸಿ ಉತ್ತಮ ರಸ್ತೆ ನಿರ್ಮಾಣ ಮಾಡಿಸಿಕೊಳ್ಳಬೇಕು ಎಂದರು.

ರಸ್ತೆ ನಿರ್ಮಾಣದಿಂದ ಮೂಡಲಕೊಪ್ಪಲು ಸೇರಿದಂತೆ ಈ ಭಾಗದ ಗ್ರಾಮಸ್ಥರ ಸಂಚಾರಕ್ಕೆ ಅನುಕೂಲವಾಗುತ್ತದೆ. ಗ್ರಾಮ ಪರಿಮಿತಿಯಲ್ಲಿ ಸಿಸಿ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ ಮಾಡಲು 25 ಲಕ್ಷ ಅನುದಾನ ನೀಡಲಾಗಿದ್ದು, ಕಾಮಗಾರಿ ನಾಳೆಯಿಂದಲೇ ಆರಂಭಗೊಳ್ಳಲಿದೆ ಎಂದರು.

ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಎಂ.ಎಸ್.ಮಹದೇವ್, ಕಾಂಗ್ರೆಸ್ ಎಸ್‌ಟಿ ವಿಭಾಗದ ರಾಜ್ಯ ಉಪಾಧ್ಯಕ್ಷ ಶ್ರೀನಿವಾಸ್, ತಾಲೂಕು ಕಾಂಗ್ರೆಸ್ ವಕ್ತಾರ ಸೈಯದ್ ಜಾಬೀರ್, ಕಾಂಗ್ರೆಸ್ ನಗರಾಧ್ಯಕ್ಷ ಎಂ.ಜೆ.ರಮೇಶ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ, ನಿರ್ದೇಶಕ ಕೃಷ್ಣೇಗೌಡ, ಪುರಸಭೆ ಮಾಜಿ ಅಧ್ಯಕ್ಷರಾದ ಪ್ರಕಾಶ್, ಡಿ.ಶಿವುನಾಯಕ್, ಸೈಯದ್ ಸಿದ್ದಿಕ್, ಮಾಜಿ ಉಪಾಧ್ಯಕ್ಷೆ ವಸಂತಮ್ಮ, ಮಾಜಿ ಸದಸ್ಯರಾದ ವಿನಯ್, ಶಂಕರ್ ಸ್ವಾಮಿ, ಅಸ್ಲಂ ಪಾಷ, ರೈತ ಮುಖಂಡರಾದ ಎಂ.ಜೆ. ಕುಮಾರ್, ಎಂ.ಎನ್.ನಾಗೇಶ್ ಇದ್ದರು.

ಪರಿಸರ, ವನ್ಯಜೀವಿ ಸಂರಕ್ಷಣೆ ಬಗ್ಗೆ ಆಸಕ್ತಿ ವಹಿಸಿ

ವಿದ್ಯಾರ್ಥಿಗಳಿಗೆ ಡಿಸಿಎಫ್ ಆರ್.ಟಿ.ಕಿರುಬನಂತನ್ ಸಲಹೆ



ವಿದ್ಯಾರ್ಥಿಗಳಿಗೆ ಅರಣ್ಯ ಇಲಾಖೆಯಿಂದ ಶಾಲಾ ಕಿಟ್ ವಿತರಿಸಲಾಯಿತು.

> ನಮ್ಮ ಶಾಲೆಯ ಶ್ರೀಗಂಧ ಪರಿಸರ ಕ್ಲಬ್ ಮೂಲಕ ಹತ್ತಾರು ಕಾರ್ಯಕ್ರಮಗಳನ್ನು ನಡೆಸಿ ಪರಿಸರ ಜಾಗೃತಿ ಮೂಡಿಸಲಾಗುತ್ತಿದೆ. ಶಾಲೆಗೆ ಅರಣ್ಯದಂಚಿನ ಗ್ರಾಮಗಳಿಂದ ಬಸ್ ವ್ಯವಸ್ಥೆ ಇಲ್ಲದೆ ವಿದ್ಯಾರ್ಥಿಗಳು ನಡೆದುಕೊಂಡು ಬರುತ್ತಾರೆ. ಕೆಲವೊಮ್ಮೆ ಮಳೆಗಾಲದಲ್ಲಿ ನೆನೆದು ಬರುತ್ತಾರೆ. ಈ ಮಕ್ಕಳಿಗೆ ಅಗತ್ಯವಾದ ಸೈಕಲ್ ಹಾಗೂ ರೈನ್‌ಕೋಟ್ ಅಗತ್ಯವಿದ್ದು, ಸಹಕಾರ ನೀಡಿ.
> –ಸಂತೋಷ್ ಕುಮಾರ್, ಶಾಲೆ ಉಪ ಪ್ರಾಂಶುಪಾಲ.

ಹನಗೋಡು: ವಿದ್ಯಾರ್ಥಿ ದೆಸೆಯಲ್ಲೇ ಪರಿಸರ, ವನ್ಯಜೀವಿ ಸಂರಕ್ಷಣೆ ಬಗ್ಗೆ ಆಸಕ್ತಿ ವಹಿಸಬೇಕು. ಇದರಿಂದ ನಮ್ಮ ಪ್ರಕೃತಿಯ ವಿಸ್ಮಯಗಳು ಉಳಿಯಲು ಸಾಧ್ಯವಾಗಲಿದೆ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆ ಸದಾ ನಿಮ್ಮೊಂದಿಗೆ ಇರಲಿದೆ ಎಂದು ಹುಣಸೂರು ಪ್ರಾದೇಶಿಕ ಅರಣ್ಯ ವಿಭಾಗದ ಡಿಸಿಎಫ್ ಆರ್.ಟಿ.ಕಿರುಬನಂತನ್ ತಿಳಿಸಿದರು.

ಅರಣ್ಯ ಇಲಾಖೆ ವತಿಯಿಂದ ಹನಗೋಡು ಸರ್ಕಾರಿ ಪ್ರೌಢಶಾಲೆಯ 70 ವಿದ್ಯಾರ್ಥಿಗಳಿಗೆ ಬ್ಯಾಗ್ ಹಾಗೂ ಕಲಿಕಾ ಉಪಕರಣಗಳ ಕಿಟ್ ವಿತರಿಸಿ ಮಾತನಾಡಿದ ಅವರು, ಮಾನವನ ಉಳಿವಿಗೆ ಪ್ರಕೃತಿ, ಪರಿಸರ, ವನ್ಯಜೀವಿಗಳ ಸಂರಕ್ಷಣೆ ಅಗತ್ಯ. ಅರಣ್ಯದಂಚಿನ ಗ್ರಾಮಗಳಲ್ಲಿ ವನ್ಯಜೀವಿ–ಮಾನವ ಸಂಘರ್ಷ ಸಾಮಾನ್ಯವಾಗಿದೆ. ಈ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಅರಣ್ಯದಂಚಿನ ಶಾಲಾ ಮಕ್ಕಳಿಗೆ ಅಗತ್ಯ ಸವಲತ್ತು ಕಲ್ಪಿಸಿ, ಅರಣ್ಯ–ವನ್ಯಜೀವಿಗಳ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸುವುದು ಹಾಗೂ ಗ್ರಾಮಸ್ಥರು, ಯುವಕರಿಗೆ ಆಟೋಟ ಸ್ಪರ್ಧೆ ಏರ್ಪಡಿಸಲಾಗುವುದು. ಹಾಡಿ ಮಂದಿಗೆ ಆರೋಗ್ಯ ಸೇವೆ ಕಲ್ಪಿಸಲಾಗುವುದು. ಇದಕ್ಕಾಗಿ ಕೇಂದ್ರ ಸರ್ಕಾರ ಅನುದಾನ ನೀಡುತ್ತಿದ್ದು, ಮಕ್ಕಳು ಶಾಲಾ ಹಂತದಿಂದಲೇ ಪರಿಸರ ಉಳಿವಿಗೆ ಕೊಡುಗೆ ನೀಡುವಂತೆ ಸಲಹೆ ನೀಡಿದ ಅವರು ಮುಂದೆ ವಿದ್ಯಾರ್ಥಿಗಳ ಕೋರಿಕೆಯಂತೆ ಅವಶ್ಯಕ ಸವಲತ್ತು ಕಲ್ಪಿಸಲಾಗುವುದೆಂದರು.

ವಲಯ ಅರಣ್ಯಾಧಿಕಾರಿ ಸಂತೋಷ್ ಹೂಗಾರ್ ಮಾತನಾಡಿ, ಪರಿಸರ, ವನ್ಯಜೀವಿ ಸಂರಕ್ಷಣೆಯಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳೇ ನಿಜವಾದ ರಾಯಭಾರಿಗಳು. ಶಾಲಾ ಹಂತದಲ್ಲೇ ಈ ಬಗ್ಗೆ ಜಾಗೃತರಾದರೆ ಸಾಕಷ್ಟು ವನ್ಯಜೀವಿ–ಮಾನವ ಸಂಘರ್ಷ ತಪ್ಪಿಸಬಹುದಾಗಿದೆ. ಇದರಿಂದ ಅರಣ್ಯ ಉಳಿವಿಗೂ ಸಹಕಾರಿಯಾಗಲಿದೆ. ನಿಮ್ಮಲ್ಲಿ ಜಾಗೃತಿ ಮೂಡಿಸಲು ಉದ್ಯಾನದ ಹೊರಗಿನ ಹುಲಿಯ ಮೀಸಲು ಪ್ರದೇಶದ ಯೋಜನೆಯಡಿ ಕಾರ್ಯಕ್ರಮ ರೂಪಿಸಲಾಗಿದೆ. ವಿದ್ಯಾರ್ಥಿಗಳಾದ ನೀವು ನಿಮ್ಮ ಪೋಷಕರು, ಗ್ರಾಮಸ್ಥರಿಗೆ ಅರಣ್ಯ–ವನ್ಯಜೀವಿಗಳ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಬೇಕು. ಯೋಜನೆಯಡಿ ಅರಣ್ಯದಂಚಿನ ಗ್ರಾಮಗಳಲ್ಲಿ ಪಶು ಸಂಗೋಪನೆ ಇಲಾಖೆ ಸಹಯೋಗದೊಂದಿಗೆ ಜಾನುವಾರುಗಳಿಗೆ ವಿವಿಧ ರೋಗಗಳ ನಿಯಂತ್ರಣಕ್ಕೆ ಲಸಿಕೆ ಹಾಕಲಾಗುತ್ತಿದೆ. ರೈತರಿಗೆ ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳಲು ಜೇನುಸಾಕಣೆ ಪೆಟ್ಟಿಗೆ ನೀಡಲಾಗುತ್ತಿದೆ. ಕ್ರೀಡಾಕೂಟ ಆಯೋಜಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದ ಮಕ್ಕಳಾದ ನೀವು ಇಂಗ್ಲಿಷ್ ವ್ಯಾಮೋಹಕ್ಕೆ ಒಳಗಾಗದೆ ಕನ್ನಡ ಮಾಧ್ಯಮದಲ್ಲಿ ಕಲಿತು ಉನ್ನತ ಹುದ್ದೆಗಿಟ್ಟಿಸಬಹುದಾಗಿದೆ. ಇನ್ನೂ ಕಲಿತ ಶಾಲೆಗೆ, ಗುರುಗಳಿಗೆ, ಹಿರಿಯರಿಗೆ ಗೌರವ ನೀಡುವ ಪ್ರವೃತ್ತಿ ಬೆಳೆಸಿಕೊಳ್ಳಿ ಎಂದರು.

ಇದೇ ವೇಳೆ ಪರಿಸರ ದಿನದ ಅಂಗವಾಗಿ ಆಯೋಜಿಸಿದ್ದ ವಿವಿಧ ಸ್ಪರ್ಧಾ ವಿಜೇತರಿಗೆ ಗಣ್ಯರು ಬಹುಮಾನ ವಿತರಿಸಿದರು. ಶಿಕ್ಷಕಿ ಛಾಯಾಮಣಿ, ಪಿಯು ಕಾಲೇಜಿನ ಸಿಡಿಸಿ ಉಪಾಧ್ಯಕ್ಷ ಮಹೇಶ್, ಪ್ರಭಾರ ಡಿಆರ್‌ಎಫ್‌ಒ ದಿವಾಕರ್, ಶಾಲೆಯ ಹಳೇ ವಿದ್ಯಾರ್ಥಿ ಹನಗೋಡು ನಟರಾಜ್ ಮಾತನಾಡಿದರು. ಶಿಕ್ಷಕರು, ವಿದ್ಯಾರ್ಥಿಗಳು, ಅರಣ್ಯ ಸಿಬ್ಬಂದಿ ಭಾಗವಹಿಸಿದ್ದರು.

ಮಾಜಿ ಸಿಎಂ ಸಿದ್ದರಾಮಯ್ಯ ಪಕ್ಷ ನಿಷ್ಠೆ, ಬದ್ಧತೆ ಪರಿಗಣಿಸಿ

ಡಾ.ಯತಿಂದ್ರಗೆ ಸಚಿವ ಸ್ಥಾನ ನೀಡಲಾಗಿದೆ

ಕಾಂಗ್ರೆಸ್ ಪಕ್ಷದ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್



ಪತ್ರಿಕಾಗೋಷ್ಠಿಯಲ್ಲಿ ಸಂತೃಪ್ತಿ ಕುಮಾರ್ ಮಾತನಾಡಿದರು.

ತಿ.ನರಸೀಪುರ, ಜೂ.14– ಮಾಜಿ ಸಿಎಂ ಸಿದ್ದರಾಮಯ್ಯ ಅವರ ಪಕ್ಷ ನಿಷ್ಠೆ ಹಾಗೂ ಹೈಕಮಾಂಡ್ ನಿರ್ಧಾರಗಳಿಗೆ ಬದ್ಧತೆ ಪರಿಗಣಿಸಿ ಅವರ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಸಚಿವ ಸ್ಥಾನ ನೀಡಲಾಗಿದೆಯೇ ಹೊರತು, ಸಿದ್ದರಾಮಯ್ಯ ಅವರು ತಮ್ಮ ಮಗನಿಗೆ ಸಚಿವ ಸ್ಥಾನ ನೀಡುವಂತೆ ಹೈಕಮಾಂಡ್ ಮುಂದೆ ಯಾವುದೇ ಬೇಡಿಕೆ ಇಟ್ಟಿರಲಿಲ್ಲ ಎಂದು ಕಾಂಗ್ರೆಸ್ ಪಕ್ಷದ ಮಾಧ್ಯಮ ವಕ್ತಾರ ಸಂತೃಪ್ತಿ ಕುಮಾರ್ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೈಕಮಾಂಡ್ ಸೂಚನೆ ಮೇರೆಗೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಗೌರವಯುತವಾಗಿ ರಾಜೀನಾಮೆ ಸಲ್ಲಿಸಿದ ನಡೆ ಪಕ್ಷದ ಕಾರ್ಯಕರ್ತರಲ್ಲಿ ಮಿಶ್ರ ಭಾವನೆಗಳನ್ನು ಮೂಡಿಸಿತ್ತು. ಅವರ ರಾಜೀನಾಮೆಯಿಂದ ಅನೇಕ ಕಾರ್ಯಕರ್ತರಿಗೆ ನೋವಾಗಿದ್ದು, ಆ ನೋವಿನಲ್ಲಿ ನಾವೂ ಸಹ ಇದ್ದೇವೆ. ಆದರೆ ಪಕ್ಷದ ತೀರ್ಮಾನ ಗೌರವಿಸುವ ಮೂಲಕ ಸಿದ್ದರಾಮಯ್ಯ ಅವರು ತಮ್ಮ ಪಕ್ಷ ನಿಷ್ಠೆಯನ್ನು ಮತ್ತೊಮ್ಮೆ ಸಾಬೀತು ಪಡಿಸಿದ್ದಾರೆ ಎಂದರು.

ಇತ್ತೀಚೆಗೆ ಕೆಲವು ಪತ್ರಿಕೆಗಳು ಹಾಗೂ ರಾಜಕೀಯ ವಲಯಗಳಲ್ಲಿ ಸಿದ್ದರಾಮಯ್ಯ ಅವರು ತಮ್ಮ ಪುತ್ರನಿಗೆ ಸಚಿವ ಸ್ಥಾನ ದೊರಕಿಸುವ ಉದ್ದೇಶದಿಂದ ಡಾ.ಹೆಚ್.ಸಿ.ಮಹದೇವಪ್ಪ ಅವರ ಹೆಸರನ್ನು ಹೈಕಮಾಂಡ್‌ಗೆ ಶಿಫಾರಸ್ಸು ಮಾಡುತ್ತಿಲ್ಲ ಎಂಬ ಆರೋಪ ಹಾಗೂ ಸಿದ್ದರಾಮಯ್ಯ ಮತ್ತು ಮಹದೇವಪ್ಪ ನಡುವೆ ಬಿರುಕು ಮೂಡಿದೆ ಎಂಬ ಊಹಾಪೋಹಗಳು ಕೇಳಿ ಬರುತ್ತಿವೆ.ಇಂತಹ ಆರೋಪಗಳು ಹಾಗೂ ಊಹಾಪೋಹಗಳಿಗೆ ಯಾವುದೇ ಆಧಾರವಿಲ್ಲ. ಇದು ಪಕ್ಷದೊಳಗಿನ ಸೌಹಾರ್ದತೆಗೆ ಧಕ್ಕೆ ತರುವಂತಹ ಬೆಳವಣಿಗೆಯಾಗಿದ್ದು, ಅನಗತ್ಯ ಗೊಂದಲ ಸೃಷ್ಟಿಸುವ ಪ್ರಯತ್ನವಾಗಿದೆ ಎಂದರು.

ಡಾ.ಹೆಚ್.ಸಿ.ಮಹದೇವಪ್ಪ ಹಿರಿಯ ಹಾಗೂ ಅನುಭವಿ ರಾಜಕಾರಣಿಯಾಗಿದ್ದು, ಸಚಿವ ಸ್ಥಾನಕ್ಕೆ ಸಂಪೂರ್ಣ ಅರ್ಹರಾಗಿದ್ದಾರೆ. ಸಾಮಾಜಿಕ ನ್ಯಾಯ ಮತ್ತು ಅಭಿವೃದ್ಧಿ ಪರ ಕೆಲಸಗಳ ಮೂಲಕ ಅವರು ರಾಜ್ಯ ರಾಜಕಾರಣದಲ್ಲಿ ವಿಶಿಷ್ಟ ಸ್ಥಾನ ಗಳಿಸಿದ್ದಾರೆ. ಅವರಿಗೆ ಸಚಿವ ಸ್ಥಾನ ದೊರಕುವ ಬಗ್ಗೆ ನಮಗೆ ವಿಶ್ವಾಸವಿದ್ದು, ಈ ಕುರಿತು ಅಂತಿಮ ನಿರ್ಧಾರವನ್ನು ಹೈಕಮಾಂಡ್ ಕೈಗೊಳ್ಳಲಿದೆ ಎಂದರು.

ಮಹದೇವಪ್ಪ ಅವರಿಗೆ ಸಚಿವ ಸ್ಥಾನ ದೊರಕಿಲ್ಲ ಎಂಬ ಬೇಸರದಲ್ಲಿ ಅವರ ಕೆಲವು ಬೆಂಬಲಿಗರು ಸಚಿವ ಡಾ.ಯತೀಂದ್ರ ಅವರ ರಾಜೀನಾಮೆಗೆ ಒತ್ತಾಯಿಸುತ್ತಿರುವುದು ಸರಿಯಲ್ಲ. ಒಬ್ಬ ನಾಯಕನಿಗೆ ಸಚಿವ ಸ್ಥಾನ ಸಿಗದಿದ್ದ ಕಾರಣಕ್ಕೆ ಮತ್ತೊಬ್ಬ ಸಚಿವರ ರಾಜೀನಾಮೆ ಕೇಳುವುದು ರಾಜಕೀಯವಾಗಿ ಸರಿಯಾದ ನಿಲುವಲ್ಲ. ಕಾಂಗ್ರೆಸ್ ಪಕ್ಷದಲ್ಲಿ ಎಲ್ಲರಿಗೂ ಅವಕಾಶ ದೊರೆಯುವ ವ್ಯವಸ್ಥೆ ಇದ್ದು, ಸೂಕ್ತ ಸಂದರ್ಭದಲ್ಲಿ ಅರ್ಹ ನಾಯಕರಿಗೆ ನ್ಯಾಯ ಸಿಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಿದ್ದರಾಮಯ್ಯಗೆ ದಲಿತ ವಿರೋಧಿ ಪಟ್ಟ ಸಲ್ಲದು: ಮಾಜಿ ಸಿಎಂ ಸಿದ್ದರಾಮಯ್ಯ ಅವರು ಅಧಿಕಾರದಲ್ಲಿದ್ದ ವೇಳೆ ಹಿಂದುಳಿದ ವರ್ಗಗಳು, ದಲಿತರು, ಅಲ್ಪ ಸಂಖ್ಯಾತರು ಸೇರಿದಂತೆ ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಗೆ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದಾರೆ. ಸಾಮಾಜಿಕ ನ್ಯಾಯ, ಸಮಾನ ಅವಕಾಶ ಮತ್ತು ಜನಕಲ್ಯಾಣದ ಪರಿಕಲ್ಪನೆಯನ್ನು ಆಡಳಿತದ ಕೇಂದ್ರ ಬಿಂದುವಾಗಿಟ್ಟುಕೊಂಡು ಕಾರ್ಯ ನಿರ್ವಹಿಸಿರುವ ಅವರ ವಿರುದ್ಧ ದಲಿತ ವಿರೋಧಿ ಎಂಬ ಆರೋಪ ಮಾಡುವುದು ನ್ಯಾಯ ಸಮ್ಮತವಲ್ಲ. ಸಿದ್ದರಾಮಯ್ಯ ಹಾಗೂ ಅವರ ಪುತ್ರರ ವಿರುದ್ಧ ಕೆಲವರು ರಾಜಕೀಯ ಪ್ರೇರಿತ ಆರೋಪಗಳನ್ನು ಮಾಡುತ್ತಿದ್ದು, ಇಂತಹ ಆರೋಪಗಳಿಗೆ ಯಾವುದೇ ವಾಸ್ತವಿಕ ಆಧಾರವಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಗೋವಿಂದ ರಾಜು, ಸುರೇಶ್, ಪುಟ್ಟಸ್ವಾಮಿ, ರೇವಣ್ಣ, ರಮೇಶ್ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ		(ದೂ: 2521923)
ಬ್ರಾಸ್ (ತ)		4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್		(ದೂ: 2422871)
ರೆಬೆಲ್ (ತೆ)		4 ಪ್ರದರ್ಶನಗಳು
ಬಾಲಾಜಿ		(ದೂ: 2497199)
ಹಂಟೆಡ್ (ಹಿ)		3 ಪ್ರದರ್ಶನಗಳು
ಮಹದೇಶ್ವರ		(ಮೊ:9900820093)
ಪೆದ್ದಿ (ಕ)		4 ಪ್ರದರ್ಶನಗಳು
ಗಾಯಿತ್ರಿ		
ಪೆದ್ದಿ (ಕ)		4 ಪ್ರದರ್ಶನಗಳು
ರಾಜಕಮಲ್		
ಪರಿಮಳ & ಕಂಪನಿ (ತ)		4 ಪ್ರದರ್ಶನಗಳು
ಸಂಗಂ		
ಪೊಲೀಸ್ ಕಂಪ್ಲೆಂಟ್ (ಕ) + ಮ್ಯಾಂಗೋ ಪಚ್ಚ (ಕ)		2+2 ಪ್ರದರ್ಶನಗಳು
ಲಿಡೋ		
ಕೆಡಿ(ಕ)		4 ಪ್ರದರ್ಶನಗಳು
ತಿಬ್ಬಾದೇವಿ		
–		–
ಪ್ರಭಾ		
ಲೋ ನವೀನ (ಕ)		4 ಪ್ರದರ್ಶನಗಳು

ನಾದ ಮಂಟಪದಲ್ಲಿ 3ನೇ ಸಂಕಲ್ಪ ಯೋಗ ಪೂರ್ವಾಭ್ಯಾಸ

ಮುಂದಿನ ವರ್ಷ ಯೋಗ ದಿನಾಚರಣೆ ವೇಳೆಗೆ ರಾಜ್ಯದಾದ್ಯಂತ ಎರಡು ಕೋಟಿ ಜನರಿಂದ ಯೋಗಾಭ್ಯಾಸ

ಅವಧೂತ ದತ್ತಪೀಠದ ಕಿರಿಯ ಶ್ರೀ ದತ್ತ ವಿಜಯಾನಂದತೀರ್ಥ ಸಲಹೆ



ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಆಯೋಜಿಸಿದ್ದ ಯೋಗಾಭ್ಯಾಸ ಕಾರ್ಯಕ್ರಮವನ್ನು ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಉದ್ಘಾಟಿಸಿದರು.



ಸಾಮೂಹಿಕ ಯೋಗಾಭ್ಯಾಸದಲ್ಲಿ ತೊಡಗಿರುವ ಯೋಗಪಟುಗಳು.

ಮೈಸೂರು,ಜೂ.14(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ವರ್ಷದಿಂದ ವರ್ಷಕ್ಕೆ ಯೋಗ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದ್ದು, ಇದನ್ನು ರಾಜ್ಯದಾದ್ಯಂತ ವಿಸ್ತರಿಸಿ, ಮುಂದಿನ ವರ್ಷದ ಯೋಗ ದಿನಾಚರಣೆ ವೇಳೆಗೆ 2 ಕೋಟಿ ಜನ ಯೋಗಾಭ್ಯಾಸ ಮಾಡುವಂತೆ ಪ್ರೇರೇಪಿಸಬೇಕು ಎಂದು ಅವಧೂತ ದತ್ತಪೀಠದ ಕಿರಿಯ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿ ಸಲಹೆ ನೀಡಿದ್ದಾರೆ.

ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದ ನಾದಮಂಟಪದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಮೈಸೂರು ಯೋಗ ಒಕ್ಕೂಟ ಆಯೋಜಿಸಿದ್ದ 3ನೇ ಸಂಕಲ್ಪ ದಿವಸದ ಯೋಗ ಪೂರ್ವಾಭ್ಯಾಸವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರಲ್ಲಿ ಯೋಗ ಸುಪ್ರಸಿದ್ಧಿಯಾಗಿದ್ದು, ಎಲ್ಲೆಡೆ ಯೋಗವನ್ನು ಪಸರಿಸಬೇಕು. ಆ ಮೂಲಕ ಮುಂದಿನ ವರ್ಷದ ಯೋಗ ದಿನದ ವೇಳೆಗೆ ರಾಜ್ಯಾದ್ಯಂತ 2 ಕೋಟಿ ಜನ ಯೋಗಾಭ್ಯಾಸ ಮಾಡುವಂತಾಗಬೇಕು. ಅದಕ್ಕೆ ಬೇಕಾದ ಮಾರ್ಗದರ್ಶನ ಮಾಡಬೇಕು ಎಂದರು.

ಎಲ್ಲ ಧರ್ಮಗಳಲ್ಲೂ ಒಳ್ಳೆಯ ಬೋಧನೆಗಳಿರುತ್ತವೆ. ಪ್ರಾರ್ಥನೆ ಹಾಗೂ ಧ್ಯಾನದ ಸಂಗಮವೇ ಯೋಗಾಭ್ಯಾಸ. ಮಾಧ್ಯಮಗಳಲ್ಲಿ ನಗರಗಳ ಯುವಜನತೆ ವ್ಯಸನಿಗಳಾದ ಸುದ್ದಿ ಓದುವಾಗ ಬೇಸರವಾಗುತ್ತದೆ. ಎಲ್ಲ ದುಶ್ಚಟಗಳನ್ನು ದೂರವಾಗಿಸಿ ವಯಸ್ಸಿನ ಇತಿಮಿತಿ ಇಲ್ಲದೆ ಸರ್ವಜನರ ಆರೋಗ್ಯ ಹಾಗೂ ದೈಹಿಕ ಚಲನಶೀಲತೆ ಹೆಚ್ಚಿಸುವ ಯೋಗವನ್ನು ಎಲ್ಲರೂ ಅನುಸರಿಸಬೇಕು ಎಂದು ಹೇಳಿದರು.

ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ಮೈಸೂರು ಎಂದರೆ ಯೋಗವೇ ಆಗಿದೆ. ಪ್ರಧಾನಿ ಮೋದಿ ಅವರು ಮೈಸೂರಿನಲ್ಲಿ ಯೋಗ ದಿನ ಆಚರಣೆಯಲ್ಲಿ ಪಾಲ್ಗೊಂಡ ನಂತರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಯೋಗಕ್ಕೆ ಪ್ರಾಮುಖ್ಯತೆ ದೊರಕಿದೆ. ಪ್ರತಿವರ್ಷ ಮೈಸೂರಿನ ಯೋಗ ಕಾರ್ಯಕ್ರಮವನ್ನು ಇತರೆ ರಾಜ್ಯಗಳು ಮಾದರಿಯನ್ನಾಗಿ ಅಳವಡಿಸಿಕೊಳ್ಳುತ್ತಿವೆ. ನಾನು ಪ್ರತಿದಿನವೂ ಯೋಗದ ಕೆಲವು ಆಸನಗಳನ್ನು ಅಭ್ಯಾಸಿಸುತ್ತಿದ್ದೇನೆ. ಇಂತಹ ಮೈಸೂರು ನಗರದ ಶಾಸಕನಾಗಿ ನಾನು ಇರುವುದು ನನ್ನ ಯೋಗಾಯೋಗ, ಅದೃಷ್ಟವೇ ಸರಿ ಎಂದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾದೇವಿ ಮಾತನಾಡಿ, ರಾಜ್ಯದ ಆರೋಗ್ಯ, ಯೋಗ ಯೋಜನೆಯಲ್ಲಿ ಮೈಸೂರು ಜಿಲ್ಲೆ ಹಾಗೂ ನಂಜನಗೂಡು ತಾಲೂಕನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಲಾಗಿದೆ. ಅಂತರರಾಷ್ಟ್ರೀಯ ಯೋಗ ದಿನಾಚರಣೆಗಾಗಿ ಈಗಾಗಲೇ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಲ್ಲಾ ಶಾಲಾ–ಕಾಲೇಜು ವಿದ್ಯಾರ್ಥಿಗಳನ್ನು ಆಹ್ವಾನಿಸಲಾಗಿದೆ ಎಂದರು.

ಮೈಸೂರು ಯೋಗ ಒಕ್ಕೂಟದ ಕಾರ್ಯದರ್ಶಿ ಹಾಗೂ ಜಿಎಸ್‌ಎಸ್ ಯೋಗ ಸಂಸ್ಥೆಯ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್ ಮಾತನಾಡಿ, ಪ್ರತಿವರ್ಷ ಯೋಗ ದಿನವನ್ನು ವಿಶಿಷ್ಟವಾಗಿ ಮೈಸೂರಿನಲ್ಲಿ ಎಲ್ಲ ಯೋಗ ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಯೋಗದೊಂದಿಗೆ ಆಚರಿಸಲಾಗುತ್ತಿದೆ. ಈ ಬಾರಿ ಒಂದೆಡೆ ಲಕ್ಷಾಂತರ ಜನರು ಸೇರುವುದರ ಬದಲು ನಗರದ 150ಕ್ಕೂ ಹೆಚ್ಚು ಶಾಲಾ–ಕಾಲೇಜುಗಳು, ಸಂಘ– ಸಂಸ್ಥೆಗಳು, ದೇವಸ್ಥಾನಗಳು, ಸಾರ್ವಜನಿಕ ಮೈದಾನ, ಸರ್ಕಾರಿ ಕಚೇರಿಗಳು ಹಾಗೂ ಅಪಾರ್ಟ್‌ಮೆಂಟ್‌ಗಳಲ್ಲಿ ಸಾಮೂಹಿಕವಾಗಿ ಯೋಗ ಆಚರಣೆ ಮಾಡಲಾಗುವುದು. ಎಲ್ಲೆಡೆ ನಡೆದ ಯೋಗಾಭ್ಯಾಸವನ್ನು ದಾಖಲೆಯನ್ನಾಗಿಸಿ ಪ್ರಧಾನಿ ಅವರಿಗೆ ಸಲ್ಲಿಸಲಾಗುವುದು ಎಂದರು.

500ಕ್ಕೂ ಹೆಚ್ಚು ಜನರಿಂದ ಯೋಗಾಭ್ಯಾಸ: ಶ್ರೀಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಯೋಗ ತಾಲೀಮಿನಲ್ಲಿ ಆಶ್ರಮದ ಭಕ್ತರು ಸೇರಿದಂತೆ 500ಕ್ಕೂ ಹೆಚ್ಚು ಮಂದಿ ಯೋಗಪಟುಗಳು, ಸಾಧಕರು ಹಾಗೂ ಬೋಧಕರು ಭಾಗವಹಿಸಿದ್ದರು.

ಸುಮಾರು 45 ನಿಮಿಷಗಳ ಕಾಲ ಪ್ರಾರ್ಥನೆ, ಚಾಲನಾ ಕ್ರಿಯೆ, ತಾಡಾಸನ, ವೃಕ್ಷಾಸನ, ಪಾದ–ಹಸ್ತಾಸನ, ಅರ್ಧ ಚಕ್ರಾಸನ ಮತ್ತು ತ್ರಿಕೋನಾಸನ, ಭದ್ರಾಸನ, ವಜ್ರಾಸನ, ಅರ್ಧ ಉಷ್ಟ್ರಾಸನ, ಉಷ್ಟ್ರಾಸನ, ಶಶಕಾಸನ, ಉತ್ತಾನ ಮಂಡೂಕಾಸನ ಮತ್ತು ವಕ್ರಾಸನ, ಮಕರಾಸನ, ಭುಜಂಗಾಸನ, ಶಲಭಾಸನ, ಸೇತುಬಂಧಾಸನ, ಉತ್ತಾನಪಾದಾಸನ, ಅರ್ಧಹಲಾಸನ, ಪವನಮುಕ್ತಾಸನ ಅಭ್ಯಾಸ ಮಾಡಲಾಯಿತು. ಕಪಾಲಭಾತಿ, ಪ್ರಾಣಾಯಾಮ, ನಾಡಿಶೋಧನ, ಧ್ಯಾನದೊಂದಿಗೆ ತಾಲೀಮು ಪೂರ್ಣಗೊಳಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀದತ್ತ ಅಂತಾರಾಷ್ಟ್ರೀಯ ಯೋಗ ಕೇಂದ್ರ ಮುಖ್ಯಸ್ಥ ರಾಮೇಶ್ವರ ರಾಜು, ಭಾರತ್ ಸ್ವಾಭಿಮಾನ ಟ್ರಸ್ಟ್‌ನ ಮಧು, ಯೋಗ ಸ್ಪೋರ್ಟ್ಸ್ ಫೆಡರೇಷನ್‌ನ ಗಣೇಶ್ ಕುಮಾರ್, ಮೈಸೂರು ಯೋಗ ಒಕ್ಕೂಟದ ದೇವರಾಜ್, ಶಿವಪ್ರಕಾಶ್, ಪಶುಪತಿ, ಮೈಸೂರಿನ ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯ ನಂಜುಂಡಸ್ವಾಮಿ, ಮೃತ್ಯುಂಜಯ, ಜಿಎಸ್‌ಎಸ್ ಯೋಗ ಸಂಸ್ಥೆಯ ಸರಳ ಹಾಗೂ ರೂಪಶ್ರೀ ಸೇರಿದಂತೆ ವಿವಿಧ ಯೋಗ ಸಂಸ್ಥೆಗಳ ಪ್ರಮುಖರು ಭಾಗವಹಿಸಿದ್ದರು.

ಎಂತಹ ಕಠಿಣ ಸವಾಲು ಎದುರಾದರೂ ವೈದ್ಯರು ಧೃತಿಗೆಡಬಾರದು

ಮಕ್ಕಳ ತಜ್ಞ ಡಾ.ಯು.ಜಿ.ಶೆಣೈ ಸಲಹೆ



ಮೈಸೂರಿನ ರಾಮಾನುಜ ರಸ್ತೆಯ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಭಾನುವಾರ ನಡೆದ ಸಾಧಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಕ್ಕಳ ವೈದ್ಯ ಡಾ.ಯು.ಜಿ.ಶೆಣೈ ಮಾತನಾಡಿದರು.

ಮೈಸೂರು, ಜೂ.14(ಬಿಎಲ್‌ಯು)– ರೋಗಿಗಳಿಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಎಂತಹ ಕಠಿಣ ಸವಾಲು ಎದುರಾದರೂ ವೈದ್ಯರು ಧೃತಿಗೆಡದೆ ಮಾನಸಿಕವಾಗಿ ದೃಢವಾಗಿರಬೇಕು ಎಂದು ಮಕ್ಕಳ ತಜ್ಞ ಡಾ.ಯು.ಜಿ.ಶೆಣೈ ಸಲಹೆ ನೀಡಿದರು.

ಮೈಸೂರಿನ ರಾಮಾನುಜ ರಸ್ತೆಯ ಮೈಸೂರು ಆರ್ಟ್ ಗ್ಯಾಲರಿಯಲ್ಲಿ ಇಂದು ಸಾಧಕರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೋಗಿ ವೈದ್ಯರನ್ನೆ ನಂಬಿ ಬಂದಿರುತ್ತಾನೆ. ಅಂತಹ ಸಮಯದಲ್ಲಿ ರೋಗಿಯ ಬಾಧೆ ವಾಸಿ ಮಾಡುವುದು ಸೇರಿದಂತೆ ಪ್ರಾಣ ಉಳಿಸುವ ನಿಟ್ಟಿನಲ್ಲಿ ಅಂತಿಮ ಹಂತದ ಪ್ರಯತ್ನ ಮಾಡಬೇಕು ಎಂದರು.

ವೈದ್ಯರು ದಿನದ 24 ಗಂಟೆ ಕರ್ತವ್ಯದಲ್ಲಿ ನಿರತರಾಗುವ ಕಾರಣ ಹೆಂಡತಿ, ಮಕ್ಕಳೊಂದಿಗೆ ಸಮಯ ಕಳೆಯಲು ಸಾಧ್ಯವಾಗುವುದಿಲ್ಲ. ಇನ್ನು ಮನೋರಂಜನೆಗಂತೂ ಸಮಯವೇ ಸಿಗುವುದಿಲ್ಲ. ವೈಯಕ್ತಿಕ ಬದುಕನ್ನು ಬದಿಗೊತ್ತಿ ವೈದ್ಯರು ಸಲ್ಲಿಸುವ ಸೇವೆಯನ್ನು ಸಮಾಜ ಅರಿಯಬೇಕು ಎಂದು ಡಾ.ಶೆಣೈ ಕಿವಿಮಾತು ಹೇಳಿದರು.

ನಮ್ಮಿಂದ ಚಿಕಿತ್ಸೆ ಪಡೆದ ರೋಗಿ ಎಲ್ಲಾದರೂ ಸಿಕ್ಕಾಗ ನಿಮ್ಮಿಂದ ನನ್ನ ರೋಗ ಗುಣವಾಯಿತು ಎಂದಾಗ ಆಗುವ ಆತ್ಮ ಸಂತೋಷ ಅಷ್ಟಿಷ್ಟಲ್ಲ. ಇಂತಹ ಸಮಯದಲ್ಲಿ ವೈದ್ಯನಿಗೆ ಸಾರ್ಥಕ ಭಾವನೆ ಮೂಡುತ್ತದೆ ಎಂದು ಅಭಿಪ್ರಾಯಪಟ್ಟರು.


ಮನುಷ್ಯನಿಗೆ ರೂಪ, ಹಣ, ಆಸ್ತಿಗಿಂತ ಮಾನವೀಯ ಗುಣ ಹಾಗೂ ಮನುಷ್ಯತ್ವ ಬಹಳ ಮುಖ್ಯ. ವ್ಯಕ್ತಿಯನ್ನು ಜನರು ಗೌರವಿಸುವುದು ಅವನ ಗುಣದಿಂದಲೇ ಹೊರತು ಆಸ್ತಿ, ಹಣದಿಂದಲ್ಲ ಎಂದರು.

ಎಷ್ಟೆ ವಿದ್ಯೆ, ಜ್ಞಾನವಿದ್ದರೂ ಅದಕ್ಕೆ ತಕ್ಕಂತೆ ವಿನಯಶೀಲತೆ, ನಮ್ರತೆ ಇರಬೇಕು. ಇಲ್ಲದಿದ್ದರೆ ವಿದ್ಯೆ, ಜ್ಞಾನಕ್ಕೆ ಬೆಲೆ ಇರುವುದಿಲ್ಲ ಎಂದು ಡಾ.ಶೆಣೈ ಅಭಿಪ್ರಾಯ ವ್ಯಕ್ತಪಡಿಸಿದರು.

ಈ ವೇಳೆ ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಎಲ್.ಶಿವಲಿಂಗಪ್ಪ, ಕಾರ್ಯದರ್ಶಿ ಜಮುನಾರಾಣಿ, ಸಿ.ಪಿ.ಯೋಗಣ್ಣ, ಪ್ರಧಾನ ಸಂಚಾಲಕ ಶ್ರೀಕಂಠಮೂರ್ತಿ, ಎನ್.ಎಚ್.ಜಯರಾಂ, ಆರ್.ರಮೇಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಹಿಂದೂ ಧರ್ಮವನ್ನು ವಿಶ್ವದುದ್ದಗಲಕ್ಕೂ ಪಸರಿಸಿದವರು ಶಂಕರಾಚಾರ್ಯರು

ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಮೈಸೂರು, ಜೂ.14(ಎಂಟಿವೈ)– ಚಿಕ್ಕ ವಯಸ್ಸಿನಲ್ಲಿಯೇ ದೇಶ ಪರ್ಯಟನೆ ಮಾಡಿದ ಶಂಕರಾಚಾರ್ಯರು ಹಿಂದೂ ಧರ್ಮವನ್ನು ವಿಶ್ವದುದ್ದಗಲಕ್ಕೂ ಪಸರಿಸಿದರು ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಬಣ್ಣಿಸಿದ್ದಾರೆ.

ಮೈಸೂರಿನ ಗನ್‌ಹೌಸ್ ಸಮೀಪದ ಶೃಂಗೇರಿ ಶಂಕರ ಮಠದ ಆವರಣದಲ್ಲಿ ಕರ್ನಾಟಕ ಸೇನಾ ಪಡೆ ಆಯೋಜಿಸಿದ್ದ ಶ್ರೀ ಶಂಕರ ಜಯಂತಿ– ತತ್ವಜ್ಞಾನಿಗಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಿ ಮಾತನಾಡಿದ ಅವರು, ಶಂಕರಾಚಾರ್ಯರು ದೈವಾಂಶ ಸಂಭೂತರಾಗಿದ್ದು, ಹಿಂದೂ ಧರ್ಮಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು.

ಹಿಂದೂ ಧರ್ಮವನ್ನು ಜಗತ್ತಿನ ಉದ್ದಗಲಕ್ಕೂ ವಿಸ್ತರಿಸಿದರು. ಅತೀ ಚಿಕ್ಕ ವಯಸ್ಸಿನಲ್ಲೇ ದೇಶ ಪರ್ಯಟನೆ ಮಾಡಿದವರು. ಅವರೊಬ್ಬ ಮೇಧಾವಿಯೂ, ತತ್ವಜ್ಞಾನಿಯೂ ಆಗಿದ್ದರು. ಈಗಿನ ವಿದ್ಯಾರ್ಥಿಗಳು ಅವರಂತೆ ಮೇಧಾವಿ ತತ್ವಜ್ಞಾನಿಗಳಾಬೇಕು. ಸಮಯ ವ್ಯರ್ಥ ಮಾಡದೆ ಚೆನ್ನಾಗಿ ಓದಿ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದು ತೇರ್ಗಡೆಯಾಗಿರುವ ವಿದ್ಯಾರ್ಥಿಗಳಿಗೆ ಪುರಸ್ಕಾರ ವಿತರಿಸಲಾಯಿತು. ಅಲ್ಲದೆ, ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವ ಬಸವಮಾರ್ಗ ಫೌಂಡೇಶನ್ ಸಂಸ್ಥಾಪಕ ಎಸ್.ಬಸವರಾಜು, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ, ನಗರಪಾಲಿಕೆ ಮಾಜಿ ಸದಸ್ಯ ಎನ್.ಧ್ರುವರಾಜ್, ಡಾ.ಕೃಷ್ಣ ವೆಂಕಟಸ್ವಾಮಿ, ವಾಸ್ತುಶಿಲ್ಪಿ ಪಾರ್ವತಿ ರಾಮಕೃಷ್ಣ, ಡಾ.ಅಜಯ್ ಕುಮಾರ್ ಜೈನ್, ಶಿಲ್ಪಿ ದೇವರಾಜ್, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆಗಳ ಅಭಿವೃದ್ಧಿ ಸಂಘದ ಅಧ್ಯಕ್ಷ ಮಂಜುನಾಥ್, ರಶ್ಮಿ ಕಾವೇರಮ್ಮ ಅವರಿಗೆ ಶ್ರೀ ಶಂಕರಾಚಾರ್ಯ ಸೇವಾ ರತ್ನ ಪ್ರಶಸ್ತಿಯನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ವಿತರಿಸಿದರು.

ಕಾರ್ಯಕ್ರಮದಲ್ಲಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್ ಪುಷ್ಪಾರ್ಚನೆ ಮಾಡಿದರು. ಮುಖ್ಯ ಅತಿಥಿಗಳಾಗಿ ಸಮಾಜ ಸೇವಕ ಡಾ.ರಘುರಾಂ ಕೆ ವಾಜಪೇಯಿ, ಕೆ.ಎನ್.ನಾಗೇಗೌಡ, ಡಾ.ಪುಷ್ಪ ಎ ಅಯ್ಯಂಗಾರ್, ಡಾ. ಲೀಲಾ ಕೆ.ಪ್ರಕಾಶ್, ಕರ್ನಾಟಕ ಸೇನಾ ಪಡೆ ರಾಜ್ಯಾಧ್ಯಕ್ಷ ಚಾ.ರಂ. ಶ್ರೀನಿವಾಸಗೌಡ, ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಪ್ರಭುಶಂಕರು, ಕೃಷ್ಣಪ್ಪ ಹನುಮಂತಯ್ಯ, ನೇಹಾ, ಜೋತಿ, ರಘು ಅರಸ್, ಅಂಬಾ ಅರಸ್, ಬಸವರಾಜು, ಪ್ರಭಾಕರ್, ಶಿವರಾಂ, ಬಸವರಾಜು, ತಾಯೂರು ಗಣೇಶ್, ಮಹಾದೇವಸ್ವಾಮಿ ರವೀಶ್, ರಮೇಶ್ ಇನ್ನಿತರರಿದ್ದರು.

ನಯನ ಮ್ಯೂಸಿಕಲ್ ಗ್ರೂಪ್ಸ್‌ನಿಂದ ಡಾ.ಎಸ್‌ಪಿಬಿ ನೆನಪಿನೋತ್ಸವ

ಕನ್ನಡ ಚಲನಚಿತ್ರಗೀತೆಗಳ ಕರೋಕೆ ಗಾಯನ



ನಯನ ಮ್ಯೂಸಿಕಲ್ ಗ್ರೂಪ್ಸ್ ವತಿಯಿಂದ ನಡೆದ ಡಾ.ಎಸ್.ಬಿ. ಬಾಲಸುಬ್ರಹ್ಮಣ್ಯಂ ನೆನಪಿನೋತ್ಸವ ಕಾರ್ಯಕ್ರಮ

ಮೈಸೂರು, ಜೂ.14–ಮಾನಸಿಕ ಆರೋಗ್ಯಕ್ಕೆ ಸಂಗೀತ ಸಹಕಾರಿ ಎಂದು ಮನಶಾಸ್ತ್ರಜ್ಞೆ ಡಾ.ರೇಖಾ ಮನಃಶಾಂತಿ ಹೇಳಿದರು.

ನಯನ ಮ್ಯೂಸಿಕಲ್ ಗ್ರೂಪ್ಸ್ ವತಿಯಿಂದ ಭಾನುವಾರ ಏರ್ಪಡಿಸಿದ್ದ ಡಾ.ಎಸ್.ಬಿ. ಬಾಲಸುಬ್ರಹ್ಮಣ್ಯಂ ನೆನಪಿನೋತ್ಸವದಲ್ಲಿ ಮಾತನಾಡಿದ ಅವರು, ಇದು ವೈದ್ಯಕೀಯವಾಗಿಯೂ ದೃಢಪಟ್ಟಿದೆ ಎಂದರು. ಆದ್ದರಿಂದ ವಾರಕ್ಕೊಮ್ಮೆಯಾದರೂ ಗೃಹಿಣಿಯರು ಸೇರಿದಂತೆ ಎಲ್ಲರೂ ಬಿಡುವು ಮಾಡಿಕೊಂಡು ಸಂಗೀತ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರೆ ಇಡೀ ವಾರ ಉಲ್ಲಾಸದಿಂದ ಇರಬಹುದು ಎಂದರು.

ನಾವೆಲ್ಲಾ ಡಾ.ರಾಜ್‌ಕುಮಾರ್ ಅವರ ಅಭಿನಯವನ್ನು ನೋಡಿಕೊಂಡು ಬೆಳೆದವರು. ಅವರ ರೀತಿ ಸಮಾಜಕ್ಕೆ ಸಂದೇಶ ನೀಡುವ ಚಿತ್ರಗಳು ಬರಬೇಕು ಎಂದು ಹೇಳಿದರು.

ಶ್ರೀ ಚನ್ನಕೇಶವ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಯಶಸ್ವಿ ಲೋಕೇಶ್ವರ್ ಮಾತನಾಡಿ, ಕನ್ನಡ ಚಿತ್ರಗಳ ಗಾಯನಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಹಾಸ್ಯ ನಟ ಡಿಂಗ್ರಿ ನಾಗರಾಜ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿದರು. ಲೋಕೇಶ್ ಇದ್ದರು. ನಯನ, ವಿಜಯಶ್ರೀ ಕಾರ್ಯಕ್ರಮ ನಿರೂಪಿಸಿದರು. ನಂತರ 40ಕ್ಕೂ ಹೆಚ್ಚು ಮಂದಿ ಕರೋಕೆ ಗಾಯನದಲ್ಲಿ ಪಾಲ್ಗೊಂಡು, ಡಾ.ಎಸ್‌ಪಿಬಿ ಹಾಡಿರುವ ಗೀತೆಗಳನ್ನು ಪ್ರಸ್ತುತಪಡಿಸಿದರು.

ಎಲೆ ಅಡಿಕೆ ತರಲು ಹೋದ ವೃದ್ದೆ ನಾಪತ್ತೆ

ಮೈಸೂರು, ಜೂ.14(ಜಿಎ)–ಎಲೆ ಅಡಿಕೆ ತೆಗೆದುಕೊಂಡು ಬರುತ್ತೇನೆಂದು ವೃದ್ದೆಯೊಬ್ಬರು ನಾಪತ್ತೆಯಾಗಿದ್ದು, ಮೈಸೂರಿನ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.70 ವರ್ಷದ ಪುಟ್ಟಮಾದಮ್ಮ ಕಾಣೆಯಾಗಿರುವವರು. ಮಗಳ ಮನೆಯಲ್ಲಿ ವಾಸವಿದ್ದ ಅವರು ಫೆ.22ರಂದು ಮಧ್ಯಾಹ್ನ 12 ಗಂಟೆಗೆ ಎಲೆ ಅಡಿಕೆ ತೆಗೆದುಕೊಂಡು ಬರುತ್ತೇನೆಂದು ಮನೆಯಿಂದ ಹೊರಗೆ ಹೋದವರು ವಾಪಾಸ್ ಬಂದಿಲ್ಲ. ಈ ಹಿಂದೆಯೂ 7 ಬಾರಿ ಮನೆ ಬಿಟ್ಟು ಹೋಗಿ ಬಂದಿದ್ದರು. ಆದರೆ ಈ ಬಾರಿ ಲ್ಲಾ ಕಡೆ ಹುಡುಕಿದರೂ ತಾಯಿ ಮನೆಗೆ ವಾಪಾಸ್ ಆಗಿಲ್ಲ ಎಂದು ಉದಯಗಿರಿ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಮಸಣಾಪುರದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ

ಆರೋಪಿಯನ್ನು ವಿದ್ಯುತ್ ಕಂಬಕ್ಕೆ ಕಟ್ಟಿ ಥಳಿಸಿದ ಗ್ರಾಮಸ್ಥರು



ಆರೋಪಿಯನ್ನು ಕಂಬಕ್ಕೆ ಕಟ್ಟಿರುವ ದೃಶ್ಯ

ಚಾಮರಾಜನಗರ, ಜೂ.14–ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಸಗಣಿ ಬಳಿದು ಅಪಮಾನವೆಸಗಿರುವ ಅಮಾನವೀಯ ಹೇಯ ಕೃತ್ಯ ಯಳಂದೂರು ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಸಂಭವಿಸಿದ್ದು, ಈ ಕೃತ್ಯವೆಸಗಿದ ಅದೇ ಗ್ರಾಮದ ಯುವಕನನ್ನು ಗ್ರಾಮಸ್ಥರು ಹಿಡಿದು, ವಿದ್ಯುತ್ ಕಂಬಕ್ಕೆ ಕಟ್ಟಿ ಥಳಿಸಿದ್ದಾರೆ

ಗ್ರಾಮದ ಶಿವಣ್ಣ ಶೆಟ್ಟಿ ಎಂಬುವವರ ಪುತ್ರ ಚಂದ್ರು (22) ಈ ಕೃತ್ಯವೆಸಗಿದ್ದು, ಈಗ ಪೊಲೀಸರ ಅತಿಥಿಯಾಗಿದ್ದಾನೆ.

ಘಟನೆಯ ವಿವರ: ಮಸಣಾಪುರ ಮತ್ತು ಚಾಟೀಪುರ ಗ್ರಾಮಗಳ ನಡುವೆ ಮುಖ್ಯ ರಸ್ತೆಯಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಭಾವಚಿತ್ರವಿರುವ ನಾಮಫಲಕಕ್ಕೆ ಭಾನುವಾರ ಮುಂಜಾನೆ 4 ಗಂಟೆ ಸಮಯದಲ್ಲಿ ಚಂದ್ರು ಸಗಣಿ ಬಳಿದು, ನಾಮಫಲಕದಲ್ಲಿ ಅಳವಡಿಸಿದ್ದ ಲೈಟ್‌ಗಳನ್ನು ಒಡೆದು ಹಾಕಿ ಅಪಮಾನವೆಸಗಿದ್ದಾನೆ ಎಂದು ಗ್ರಾಮಸ್ಥರು ಆರೋಪಿಸಿ, ಆತನನ್ನು ಹಿಡಿದು ವಿದ್ಯುತ್ ಕಂಬಕ್ಕೆ ಕಟ್ಟಿಹಾಕಿ, ಆತನಿಗೆ ಚಪ್ಪಲಿ ಹಾರ ಹಾಕಿ, ಥಳಿಸಿದ್ದಾರೆ.

ಬಳಿಕ ವಿಷಯ ತಿಳಿದು ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ. ಮುತ್ತುರಾಜು ಸೇರಿದಂತೆ ಯಳಂದೂರು ಪಟ್ಟಣ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲಿಸಿ, ಗ್ರಾಮಸ್ಥರಿಂದ ಮಾಹಿತಿ ಪಡೆದು ಆರೋಪಿಯನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ರಸ್ತೆ ಬಂದ್: ಘಟನೆ ಕುರಿತು ಗ್ರಾಮಸ್ಥರು ತೀವ್ರ ಆಕ್ರೋಶ ವ್ಯಕ್ತಪಡಿಸಿ ಯಳಂದೂರು ಮತ್ತು ಚಾಮರಾಜನಗರ ಮುಖ್ಯರಸ್ತೆಯನ್ನು ಸಂಪೂರ್ಣ ಬಂದ್ ಮಾಡುವ ಮೂಲಕ ಪ್ರತಿಭಟನೆ ನಡೆಸಿದರು. ಮಸಣಾಪುರ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನವಾಗಿದೆ ಎಂಬ ಸುದ್ದಿ ತಿಳಿಯುತ್ತಲೇ, ಸುತ್ತಮುತ್ತಲಿನ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರಿಂದ ಸ್ಥಳದಲ್ಲಿ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು. ಕಡಿಮೆ ಸಂಖ್ಯೆಯಲ್ಲಿ ಇದ್ದ ಪೊಲೀಸರು ಜನರನ್ನು ನಿಯಂತ್ರಿಸಲು ಸಾಕಷ್ಟು ಶ್ರಮವಹಿಸಬೇಕಾಯಿತು.

ಮತ್ತೆ ಮರುಕಳಿಸಿದ ಹೀನ ಕೃತ್ಯ: ಜಿಲ್ಲೆಯಲ್ಲಿ ಪದೇ ಪದೆ ಇಂತಹ ಕೃತ್ಯಗಳು ನಡೆಯುತ್ತಿವೆ. ನಮ್ಮ ಗ್ರಾಮದಲ್ಲಿ ಎಂದಿಗೂ ಇಂತಹ ಘಟನೆ ಸಂಭವಿಸಿರಲಿಲ್ಲ. ಈ ನಿಟ್ಟಿನಲ್ಲಿ ಆರೋಪಿಯನ್ನು ಕೂಡಲೇ ಗಡಿಪಾರು ಮಾಡಬೇಕು. ಆತನ ಮೇಲೆ ರಾಷ್ಟ್ರ ದ್ರೋಹದ ಕಾಯ್ದೆಯಡಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

ಮಸಣಾಪುರದಲ್ಲಿ ನಡೆದ ಘಟನೆ ಬಗ್ಗೆ ತಿಳಿಯುತ್ತಿದ್ದಂತೆ ಗ್ರಾಮಕ್ಕೆ ಹಲವಾರು ಹೋರಾಟಗಾರರು, ರಾಜಕಾರಣಿಗಳು ಭೇಟಿ ನೀಡಿ ಕೃತ್ಯವನ್ನು ಖಂಡಿಸಿದರು. ಜೊತೆಗೆ ಗ್ರಾಮಸ್ಥರೊಂದಿಗೆ ತಾವು ಇರುವುದಾಗಿ ಭರವಸೆಯನ್ನು ನೀಡಿದರು.

ಸ್ಥಳಕ್ಕೆ ಶಾಸಕ ಎ.ಆರ್. ಕೃಷ್ಣಮೂರ್ತಿ, ಮಾಜಿ ಶಾಸಕ ಎನ್. ಮಹೇಶ್, ಬಿಎಸ್‌ಪಿ ರಾಜ್ಯಾಧ್ಯಕ್ಷ ಎಂ.ಕೃಷ್ಣಮೂರ್ತಿ, ಎನ್. ನಾಗಯ್ಯ, ಪುಟ್ಟಸ್ವಾಮಿ ರಾಮ ಸಮುದ್ರ, ಬ.ಮ.ಕೃಷ್ಣಮೂರ್ತಿ, ಜೆಡಿಎಸ್ ಪಕ್ಷದ ಪುಟ್ಟಸ್ವಾಮಿ, ಅಂಬೇಡ್ಕರ್ ಮಹಾಸಭಾ ಕಾರ್ಯಾಧ್ಯಕ್ಷ ಸಿ.ಕೆ. ಮಂಜುನಾಥ್, ಮುಖಂಡ ಪ್ರಶಾಂತ್ ನಾಗವಳ್ಳಿ, ವಾಸು ಹೊಂಡರಬಾಳು, ಧರಣೇಂದ್ರ ಮಾತನಾಡಿ, ಆರೋಪಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿದರು.

ಆರ್ಟ್ ಆಫ್ ಲಿವಿಂಗ್ ವತಿಯಿಂದ ವೈದ್ಯ ಆರ್.ಟಿ. ವೆಂಕಟೇಶ್, ಪತ್ರಕರ್ತ ರಮೇಶ್ ಕುಟ್ಟಪ್ಪರಿಗೆ 'ತೆರೆಮರೆಯ ಸಾಧಕ' ಪ್ರಶಸ್ತಿ ಪ್ರದಾನ

ಧ್ಯಾನ, ಯೋಗದ ಮೂಲಕ ದೈಹಿಕ, ಮಾನಸಿಕ ಕ್ಷೇಮ ಸುಧಾರಣೆ



ಆರ್ಟ್ ಆಫ್ ಲಿವಿಂಗ್ ಸಂಸ್ಥೆ ವತಿಯಿಂದ ಕೆ.ಆರ್.ಪೇಟೆ ವೈದ್ಯ ಆರ್.ಟಿ. ವೆಂಕಟೇಶ್, ಮಡಿಕೇರಿಯ ಪತ್ರಕರ್ತ ಅಜ್ಜಮಾಡ ರಮೇಶ್ ಕುಟ್ಟಪ್ಪ ಅವರಿಗೆ 'ತೆರೆಮರೆಯ ಸಾಧಕ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ಮೈಸೂರು, ಜೂ.14(ವಿವಿಹೆಚ್)– ಮೈಸೂರಿನ ಲಲಿತಾದ್ರಿಪುರದಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ವತಿಯಿಂದ ಸಂಸ್ಥೆಯ 45ನೇ ವಾರ್ಷಿಕೋತ್ಸವ ಹಾಗೂ ಗುರುದೇವ ರವಿಶಂಕರ್ ಅವರ 70ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಭಾನುವಾರ ಆಯೋಜಿಸಿದ್ದ ತೆರೆಮರೆಯ ಸಾಧಕ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಕೆ.ಆರ್.ಪೇಟೆ ವೈದ್ಯ ಆರ್.ಟಿ. ವೆಂಕಟೇಶ್ ಮಡಿಕೇರಿಯ ಪತ್ರಕರ್ತ ಅಜ್ಜಮಾಡ ರಮೇಶ್ ಕುಟ್ಟಪ್ಪ ಅವರಿಗೆ 'ತೆರೆಮರೆಯ ಸಾಧಕ' ಪ್ರಶಸ್ತಿ ನೀಡಿ ಗೌರವಿಸಲಾಯಿತು.


ಈ ಇಬ್ಬರಿಗೆ ಆರ್ಟ್ ಆಫ್ ಲಿವಿಂಗ್ ಮೈಸೂರು ಸಂಸ್ಥೆಯ ಕೌಶಿಕ ಸ್ವಾಮೀಜಿ ಹಾಗೂ ಮೈಸೂರು ಆಶ್ರಮ ಕಮಿಟಿ ಸದಸ್ಯರಾದ ದಿವ್ಯಪಾದ ಸ್ವಾಮೀಜಿ ಅವರು ಪ್ರಶಸ್ತಿ ಪ್ರದಾನ ಮಾಡಿ, ಆಶೀರ್ವಾದ ಮಾಡಿದರು.


ಇದೇ ವೇಳೆ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ಹಿರಿಯ ಫ್ಯಾಕಲ್ಟಿ ಎಸ್.ಆರ್.ವೆಂಕಟೇಶ್ ಅವರು ಮಾತನಾಡಿ, ಆರ್ಟ್ ಆಫ್ ಲಿವಿಂಗ್ ಫೌಂಡೇಷನ್ ಧ್ಯಾನ ಮತ್ತು ಯೋಗದ ಮೂಲಕ ದೈಹಿಕ ಹಾಗೂ ಮಾನಸಿಕ ಕ್ಷೇಮದಲ್ಲಿ ಸುಧಾರಣೆ ತರಲು ನಿರಂತರವಾಗಿ ಶ್ರಮಿಸುತ್ತಿದೆ. ಜೀವನದ ಒತ್ತಡ ಮತ್ತು ಆತಂಕವನ್ನು ನಿಭಾಯಿಸಲು ಸಹಾಯಕವಾದ ಅಭ್ಯಾಸಗಳ ಪರಿಚಯವನ್ನು ಮಾಡುತ್ತಿದೆ ಎಂದರು.

ಸಂಸ್ಥೆ ಮಾನಸಿಕ ಆರೋಗ್ಯ, ಶಿಕ್ಷಣ, ಗ್ರಾಮೀಣ ಪ್ರದೇಶಗಳಲ್ಲಿ ಮೂಲಸೌಕರ್ಯ ಮತ್ತು ಜೀವನಮಟ್ಟ ಸುಧಾರಿಸಲು ನೆರವು ನೀಡಲಾಗುತ್ತಿದೆ. ಕಳೆದ 45 ವರ್ಷಗಳಿಂದ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿಗೆ ಒತ್ತು ನೀಡುವ ಮೂಲಕ ಜನಸಾಮಾನ್ಯರಿಗೆ ದೊರಕುವ ಅವಕಾಶಗಳ ವೃದ್ಧಿಗೆ ತನ್ನದೇ ಕೊಡುಗೆ ನೀಡಿದೆ. ಧ್ಯಾನ, ಯೋಗ ಮತ್ತು ಉಸಿರಾಟದ ಅಭ್ಯಾಸಗಳ ಮೂಲಕ ಜನರಲ್ಲಿ ಒತ್ತಡ ಕಡಿಮೆ ಮಾಡಲು ಪ್ರಯತ್ನಿಸಲಾಗಿದೆ. ಅನೇಕರು ತಮ್ಮ ಜೀವನದಲ್ಲಿ ಶಾಂತಿ, ಏಕಾಗ್ರತೆ ಮತ್ತು ಭಾವನಾತ್ಮಕ ಸಮತೋಲನ ಕಂಡುಕೊಂಡಿದ್ದಾರೆ ಎಂದು ತಿಳಿಸಿದರು.

ಗ್ರಾಮಗಳಲ್ಲಿ ನೀರಿನ ಸಂರಕ್ಷಣೆ, ಸ್ವಚ್ಛತೆ, ಕೌಶಲ್ಯಾಭಿವೃದ್ಧಿ ಮತ್ತು ಸ್ವಾವಲಂಬನೆ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಕೆಲವು ಪ್ರದೇಶಗಳಲ್ಲಿ ಕುಡಿಯುವ ನೀರು ಮತ್ತು ಜೀವನೋಪಾಯದ ಅವಕಾಶಗಳ ಹೆಚ್ಚಳ, ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಶಿಕ್ಷಣ ಒದಗಿಸುವ ಉದ್ದೇಶದಿಂದ ಶಾಲೆಗಳು ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮೌಲ್ಯಾಧಾರಿತ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡಲಾಗಿದೆ ಎಂದು ವಿವರಿಸಿದರು.

ಪಾಂಡಿಚೆರಿಯ ಮೆಡಿಕಲ್ ಕಾಲೇಜಿನ ನಿವೃತ್ತ ಡೀನ್ ಡಾ.ಕೆ. ರಾಜಲಕ್ಷ್ಮಿ, ದೇವರತ್ನ ಸಂಸ್ಥೆ ಸಂಸ್ಥಾಪಕ ಎಂ.ಶಿವಪ್ರಸಾದ್, ಆಶ್ರಮದ ಸ್ವಯಂಸೇವಕರಾದ ವೀಣಾ, ಗೋಕುಲ್, ಅಪೂರ್ವ ಸುರೇಶ್, ರವಿಕುಮಾರ್ ಆನಂದ್, ನಾಗ ನಂದಿನಿ, ಮಹೇಶ್, ಪ್ರತಿಭಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.





New Castle Convention Hall Available on

29th & 20th November 2026

0821-2416419
9535491919



LEAD 25 — INDIA'S 1ST REAL ESTATE EARNING APP

LEAD 25 MOBILE APP
— REAL ESTATE MADE SIMPLE —
APP LAUNCHING SOON


WE ARE **HIRING EXECUTIVES**
ATTRACTIVE SALARY + INCENTIVES

REQUIREMENTS
- Age: 21 – 35 Years
- Any Degree (Graduate / Post Graduate)
- Fluent in English & Kannada
- Experience in Sales, Marketing or HR preferred
- Basic Knowledge of Real Estate
- Good Communication & Customer Handling Skills


WHY JOIN LEAD 25?
- Professional Corporate Work Environment
- Career Growth Opportunities
- Performance-Based Incentives
- Work with India's Emerging Real Estate Technology Platform

KEY ROLES WE ARE HIRING FOR
SALES MANAGER | HR MANAGER | MARKETING MANAGER

91874 25254 | lead25properties@gmail.com







KNC INNOVATIVE GLOBAL SCHOOL & P. U. COLLEGE

#295/B, Hebbal Industrial Area, Mysuru - 16. Ph: 0821 - 2402929

Affiliated to CBSE Board & PUC State Board



Happy 73rd Birthday To our beloved

FOUNDER & CHAIRMAN, KNCIGS

Dr. K N Chandrashekar, KAS (R)

M.Sc., DIIT., LLB., M.A., Ph.D. in Geology, Ph.D. in Public Administration

We are proud of your leadership and achievement in the field of education and invaluable contribution to the society

Warm wishes from

Principals, Staff & Students

